

# ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ


ಸಂಪುಟ 25 ಸಂಚಿಕೆ 16
ಏಪ್ರಿಲ್ 20, 2003 ಬೆಲೆ ರೂ. 3.00



## 300 ಕೋಟಿ ಔಷಧಿ ಹಗರಣ ಮುಚ್ಚಿಹಾಕುವ ಹುನ್ನಾರ ?



## ಇರಾಕ್ : ಅಮೆರಿಕದ ವಶವಾಗಿದೆಯೇ?




## ಗಾಜಿನ ಮನೆಯೊಳಗಿಂದ ಕಲ್ಲು ತೂರಿದ ಸೋನಿಯಾ?

ಕೆ.ಆರ್.ಪುರಂ ತೂಗುಸೇತುವೆ ಮುಗಿಯದ ಬವಣೆ

# ಯುದ್ಧ ಸೃಷ್ಟಿಸಿದ ಹೊಸ ಶಕ್ತಿ

## ವಿಮೋಚನಾ ಸಮರದಲ್ಲಿ....



### ಮೇಜರ್ ಜಯಪಾಲ್ ಸಿಂಗ್

**ಆತ್ಮಕಥನ 22**



**ಹಿಂದಿನ ಸಂಚಿಕೆಯಲ್ಲಿ ಯುದ್ಧದ ಯಾತನೆ ಬಗ್ಗೆ, ಹಸಿರ ರಣಹದ್ದುಗಳಂತೆ ತರುಣಿಯರ ಮೇಲೆ ಅತ್ಯಾಚಾರವೆಸಗುತ್ತಿದ್ದ ಸೈನಿಕರು, ಜಯಪಾಲ್‌ರ ಪ್ರಾಣವುಳಿಸಿದ ಯಹೂದಿ ವೈದ್ಯ, ತೀವ್ರಗೊಳ್ಳುತ್ತಿದ್ದ ಸೈನ್ಯದ ಒಳಗೆ ಹಾಗೂ ಹೊರಗಿನ ಬ್ರಿಟಿಷ್ ವಿರೋಧಿ ಜ್ವಾಲೆ ಮತ್ತು ಹೊಸ ವೈಮಾನಿಕ ಘಟಕ ರಚಿಸಲು ಜಯಪಾಲ್ ಸಿಂಗರಿಗೆ ಹೊಣೆ ಈ ಬಗ್ಗೆ ಓದಿರುವಿರಿ. ಮುಂದೆ.....**

**ಕನ್ನಡಕ್ಕೆ: ವಿಶ್ವ ಕುಂದಾಪುರ**

ನನ್ನ ನಂತರದ ಸ್ಥಾನದಲ್ಲಿದ್ದ ಕ್ಯಾಪ್ಟನ್ ಕೆ.ಹಾರ್ವಸನ್ 'ಯಾರವರು' ಎಂದು ಹಿಂದೆ ಮುಂದೆ ನೋಡದೆ ಶೇಷಾದ್ರಿಯನ್ನು ಪ್ರಶ್ನಿಸಿದರು.

"ಬರ್ಮಾ ದೇಶಪ್ರೇಮಿ ಸೇನೆಯ ನಮ್ಮ ಮಿತ್ರ ಅಧಿಕಾರಿಗಳು" ಎಂದು ಮುಖದಲ್ಲಿ ಸಿಟ್ಟಿದ್ದರೂ ಅದನ್ನು ತೋರ್ಪಡಿಸದೆ ಶೇಷ್ ಶಾಂತವಾಗಿ ಹೇಳಿದರು.

"ಛತ್, ಅವರು ದೇಶಪ್ರೇಮಿಗಳಂತೆ, ಅವರು ದೇಶದ್ರೋಹಿಗಳು. ಶತ್ರುಗಳ ಜತೆ ಶಾಮೀಲಾ ಗಿರುವವರು. ನಮ್ಮ ಮೆಸ್‌ಗೆ ಬರಲು ಅವರನ್ನು ಬಿಡುವುದಿಲ್ಲ" ಎಂದು ಹಾರ್ವಸನ್ ಕೂಗಾಡಿದ.

ನಾನು ತಾಳ್ಮೆಗೆಟ್ಟೆ

"ಶಾಂತರಾಗಿ ಕೆನ್! ನಾನು ನಿನ್ನ ಬಾಸ್ ಇಲ್ಲೇ ಇದ್ದೇನೆ" ಎಂದು ಹೇಳಿದ ನಾನು ಬಂದವರನ್ನು ಒಳಗೆ ಕರೆ ತರಲು ಶೇಷ್‌ಗೆ ಸೂಚಿಸಿದೆ.

ಎಲ್ಲ ಬ್ರಿಟಿಷ್ ಅಧಿಕಾರಿಗಳು ಪ್ರತಿಭಟನಾರ್ಥ ಹೊರ ನಡೆದರು. ಈ ವಸಾಹತು ಜನರ ದೇಶಪ್ರೇಮದ ಬಗ್ಗೆ ಮಾತನಾಡಿದ್ದು ಬ್ರಿಟಿಷ್ ಅಧಿಕಾರಿಗಳಲ್ಲಿ ಸಿಟ್ಟು ಬರಿಸಿತು. ನಾವು ಬಂದ ಮೂವರಿಗೆ ಭಾರತೀಯ ಊಟ ಮತ್ತು ಬಿಯರ್ ನೀಡಿದೆವು.

"ಯುದ್ಧ ಮುಗಿದ ಮೇಲೆ ನಿಮ್ಮ ದೇಶಕ್ಕೆ ಸ್ವಾತಂತ್ರ್ಯ ನೀಡುವ ಬ್ರಿಟಿಷರ ಭರವಸೆ ಪ್ರಾಮಾಣಿಕವಾದುದೆಂದು ನಿಮಗೆ ಅನಿಸುತ್ತಿದೆಯೇ" ಎಂದು ನಾನವರನ್ನು ಪ್ರಶ್ನಿಸಿದೆ.

"ಇಲ್ಲ, ಅದು ಪ್ರಾಮಾಣಿಕವಾಗಿರಲಿಕ್ಕಿಲ್ಲ. ಅದು ಪ್ರಾಮಾಣಿಕ ಭರವಸೆಯಲ್ಲ ಎನ್ನುವುದು ನಮಗೆ ಗೊತ್ತು. ಆದರೆ ಈ ಯುದ್ಧ, ನಮ್ಮ ನಗರಗಳು ಹಾಗೂ ಕೇರಿಗಳ ಅವಶೇಷಗಳ ರಾಶಿ ಹೊಸ ಬರ್ಮಾವನ್ನು ಸೃಷ್ಟಿಸಿದೆ. ನಮ್ಮ ಮನೆಗಳು ಹಾಗೂ ಕೇರಿಗಳ ಅವಶೇಷಗಳ ಅಡಿಯಿಂದ ಹೊಸ ಬರ್ಮಾವೊಂದು ಸೃಷ್ಟಿಯಾಗಲಿದೆ, ಈ ನವ ಬರ್ಮಾ ತನ್ನ ನೆಲದಿಂದ ಬ್ರಿಟಿಷರನ್ನು ಒದ್ದೋಡಿಸುವ ಶಕ್ತಿ ಪಡೆದಿರುತ್ತದೆ. ನಾವು ನಮ್ಮ ದೇಶದಿಂದ ಬ್ರಿಟಿಷರನ್ನು ಹೊಡೆದೋಡಿಸುತ್ತೇವೆ. ಈಗ ನಾವು ಬ್ರಿಟಿಷರ ನೆರವಿನಿಂದ ಜಪಾನಿಯರನ್ನು ಓಡಿಸುತ್ತಿದ್ದೇವೆ. ಈ ಪ್ರಕ್ರಿಯೆಯಲ್ಲಿ, ಬ್ರಿಟಿಷರನ್ನು ನಾವೇ ಸ್ವತಂತ್ರವಾಗಿ ಒದ್ದೋಡಿಸುವ ಬಲವನ್ನು ಗಳಿಸಿಕೊಳ್ಳುತ್ತೇವೆ. ಬ್ರಿಟಿಷರು ಇಲ್ಲೇ ಇರಲು ನಿರ್ಧರಿಸಿದರೆ ಅವರನ್ನು ನಾವು ಒದ್ದೋಡಿಸುವುದು ನಿಶ್ಚಿತ. ಸಾಮ್ರಾಜ್ಯಶಾಹಿ ಪರ ಅಧಃಪತನಗೊಂಡ ಬರ್ಮಾ ಈ ಅವಶೇಷಗಳಡಿ ಹೂತು ಹೋಗಿದೆ. ಸಶಕ್ತ ಹಾಗೂ ಜಾಗೃತಗೊಂಡ ಹೊಸ ಬರ್ಮಾ ಅವರಡಿಯಿಂದ ಇಣುಕಿ ನೋಡುತ್ತಿದೆ"!

**ಯುದ್ಧ ಸೃಷ್ಟಿಸಿದ ಹೊಸ ಶಕ್ತಿ**

ನಂತರ ನಾನು ಭಾರತ ಹಾಗೂ ಅದರ ಭವಿಷ್ಯದ ಬಗ್ಗೆ ಚರ್ಚಿಸಿದೆವು.

'ಐಎನ್ಎ ಪ್ರಸಕ್ತ ಯುದ್ಧ ಭಾರತಕ್ಕಾಗಿ ಸೃಷ್ಟಿಸಿದ ಹೊಸ ಶಕ್ತಿಯಾಗಿದೆ. ಬ್ರಿಟಿಷ್ ಭಾರತೀಯ ಸೇನೆಯಲ್ಲಿ ಯುದ್ಧ ಒಂದು ಹೊಸ ಸ್ಫೂರ್ತಿಯನ್ನು ಸೃಷ್ಟಿಸುತ್ತಿದೆ. ನಿಮ್ಮ ದೇಶದಲ್ಲಿ ಜನರು ಬಂಡಾಯ ಮನೋಸ್ಥಿತಿಯಲ್ಲಿದ್ದಾರೆ. ಗಾಂಧೀಜಿ ಅದನ್ನು ಸ್ವಲ್ಪವಷ್ಟೇ ತಡೆದು ನಿಲ್ಲಿಸಬಹುದೇನೋ" ಎಂದು ಅವರು ಹೇಳಿದರು.

ಮೇ ತಿಂಗಳಲ್ಲಿ ಯುರೋಪ್‌ನಲ್ಲಿ ಯುದ್ಧ ಅಂತ್ಯವಾಯಿತು. ಇಟಲಿ ಹಾಗೂ ಮಧ್ಯ ಪೂರ್ವದಿಂದ ಸೇನೇ ತುಕಡಿಗಳು ಭಾರತಕ್ಕೆ ಮತ್ತು ಬರ್ಮಾ ರಂಗಕ್ಕೆ ಮರಳಿದವು. ನಾವು ನಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸಿದೆವು. ಯುರೋಪ್ ರಣರಂಗದಿಂದ ಮರಳಿದ ಭಾರತೀಯ ಪಡೆಗಳು ತೀವ್ರವಾದ ಬ್ರಿಟಿಷ್ ವಿರೋಧಿ ಭಾವನೆಯನ್ನು ಮೈಗೂಡಿಸಿ ಕೊಂಡಿದ್ದವು.

"ನಾವು ಬ್ರಿಟಿಷರನ್ನು ಒದ್ದೋಡಿಸಬೇಕು" - ಇದು ಕ್ಯಾಂಟೀನಗಳು, ಕ್ಲಬ್‌ಗಳು, ಮೆಸ್‌ಗಳು ಮತ್ತು ಬ್ಯಾರಕ್‌ಗಳಲ್ಲಿ ಕೇಳಿಬಂದ ಘೋಷಣೆಯಾಗಿತ್ತು. ಐಎನ್ಎ ಯ ಸಾಧನೆಗಳನ್ನು ವಿವರಿಸುವ ಕರಪತ್ರವೊಂದನ್ನು ದೇಶಾದ್ಯಂತ ನಮ್ಮ ಸಂಘಟನೆ ವಿತರಿಸಿತು. ಐಎನ್ಎ ಕುರಿತ ಮಾಹಿತಿಯಿದ್ದ ಕರಪತ್ರಗಳನ್ನು 1945ರ ಜೂನ್‌ನಲ್ಲಿ ಮುಂಬಯಿ ಹಾಗೂ ಕರಾಚಿ ಬಂದರುಗಳಲ್ಲಿ ಭಾರತೀಯ ಸೈನಿಕರಿಗೆ ವಿತರಿಸಲಾಗಿದ್ದನ್ನು ಭಾರತೀಯ ಸೇನೆಯ ಸೈನಿಕರು ಹಾಗೂ ಅಧಿಕಾರಿಗಳು ನೆನಪಿಸುತ್ತಾರೆ.

**ಅಣುಬಾಂಬ್ ಹಾಕಿ 'ದೇವರಿಗೆ' ಕೃತಜ್ಞತೆ !**

1945 ಆಗಸ್ಟ್ 6 ರಂದು ಹಿರೋಶಿಮಾದ ಶಾಂತಿಯುತ ಪ್ರಜೆಗಳ ಮೇಲೆ ಮೊದಲ ಅಣು ಬಾಂಬ್ ಬಿತ್ತು. ಎರಡು ದಿನಗಳ ನಂತರ ನಾಗಸಾಕಿ ಮೇಲೆ ಎರಡನೇ ಅಣುಬಾಂಬ್ ಪ್ರಯೋಗವಾಯಿತು.

ಎರಡೂವರೆ ಲಕ್ಷ ಜನರು ಮೃತಪಟ್ಟರು, ಅಂಗವಿಕಲರಾದರು. ಆಗಸ್ಟ್ 9 ರಂದು ಅಧ್ಯಕ್ಷ ಟ್ರೂಮನ್ ತನ್ನ ದೇಶದ ಜನರಿಗೆ ಸಂದೇಶ ಬಿತ್ತರಿಸಿದ

"ಈ ಅವಕಾಶ ನಮ್ಮ ವೈರಿಗಳ ಬದಲಿಗೆ ನಮಗೇ ಬಂದಿದ್ದಕ್ಕೆ ದೇವರಿಗೆ ನಾವು ಅಭಾರಿಯಾಗಿದ್ದೇವೆ. ಆತನ ಹಾದಿಯಲ್ಲಿ ಆತನಿಗಾಗಿ ಇದನ್ನು ಬಳಸಲು ಅವನು ನಮಗೆ ದಾರಿ ತೋರಲಿ-ಎಂದು ಪ್ರಾರ್ಥಿಸುತ್ತೇವೆ."

ಶರಣಾಗಲು ಹಾಗೂ ಮಿತ್ರಪಡೆಗಳ ಜತೆ ಕದನ ವಿರಾಮ ಘೋಷಿಸಲು ಜಪಾನ್ ಸಿದ್ಧವಿದೆ ಎಂದು ಆಗಸ್ಟ್ 10 ರಂದು ಟೋಕಿಯೋದಿಂದ ಪ್ರಸಾರವಾದ ಸಂದೇಶ ತಿಳಿಸಿತು. 1945 ಆಗಸ್ಟ್ 14 ರಂದು 'ಕದನ ವಿರಾಮ' ಘೋಷಣೆಯಾಯಿತು.

ದೆಹಲಿ ರೈಲ್ವೆ ನಿಲ್ದಾಣದಲ್ಲಿ ನಾನು ಈ ಸುದ್ದಿಯನ್ನು ಕೇಳಿದೆ. ಯುದ್ಧ ರಜೆ ಮೇಲೆ ಕಾಶ್ಮೀರಕ್ಕೆ ತೆರಳಿದ್ದ ನಾನು ವಾಪಸಾಗುತ್ತಿದ್ದಾಗ ಈ ಸುದ್ದಿ ತಿಳಿಯಿತು. ಶ್ರೀನಗರದಲ್ಲಿ ನಡೆದ ಸಂಘಟನಾ ಸಮಿತಿಯ ಪ್ರಮುಖ ಸಭೆಯೊಂದರಲ್ಲಿ ಪಾಲ್ಗೊಳ್ಳಲಿಕ್ಕಾಗಿ ನಾನು ರಜೆ ತೆಗೆದುಕೊಂಡಿದ್ದೆ. ಅಲ್ಲಿ ನದಿ ದಡದ ಮೇಲೆ ಮನೆಯೊಂದನ್ನು ಬಾಡಿಗೆ ಪಡೆದಿದ್ದೆ. ಅಲ್ಲೇ ಸಭೆ ನಡೆಯಿತು. ಅದೊಂದು ತುಂಬಾ ಮಹತ್ವದ ಸಭೆಯಾಗಿತ್ತು. ಅಂದಿನ ರಾಜಕೀಯ ಪರಿಸ್ಥಿತಿಯನ್ನು ಅಂದಾಜು ಮಾಡುವ ದಸ್ತಾವೇಜನ್ನು ಸಭೆ ಅಂಗೀಕರಿಸಿತು.

ಅದರ ಕೆಲವು ಮುಖ್ಯ ಅಂಶಗಳು ಇಲ್ಲಿವೆ

"ಬ್ರಿಟಿಷ್ ಸರಕಾರ ಮತ್ತೊಮ್ಮೆ ಆಟ ಶುರು ಮಾಡಿದೆ. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಜೊತೆ ಸಮಾಲೋಚನೆ ಆರಂಭವಾಗಿದೆ. ಶಿಮ್ಲಾ ಸಮ್ಮೇಳನ ಒಂದು ಮೋಸದ ಹೆಜ್ಜೆಯಾಗಿದೆ. ಅದರಲ್ಲಿ ಭಾರತದ ಸ್ವಾತಂತ್ರ್ಯದ ವಿಷಯವನ್ನು ಬದಿಗೆ ತಳ್ಳಿ ಕಾಂಗ್ರೆಸ್ - ಮುಸ್ಲಿಂ ಲೀಗ್ ಜಗಳವನ್ನು, ಮುಖ್ಯ ಪ್ರಶ್ನೆಯಾಗಿ ಮಾಡಲಾಗುತ್ತದೆ. ಬ್ರಿಟಿಷರು ಭಾರತ ಬಿಟ್ಟು ಹೋಗಬೇಕಾದರೆ ಹಿಂದೂ-ಮುಸ್ಲಿಂ ಏಕತೆ ಮೂಡಬೇಕು ಎಂಬ ಷರತ್ತನ್ನು ಮಂಡಿಸಲಾಗುತ್ತದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಂಚನೆಯ ಜಾಲಕ್ಕೆ ಬಲಿಯಾಗುವುದು, ಇಂಥ ಮಾತುಕತೆಗಳಲ್ಲಿ ಒಳಗೊಳ್ಳುವುದು ರಾಷ್ಟ್ರೀಯ ಚಳವಳಿಗೆ ನಿಷ್ಫಲ ಕಾರ್ಯವಾಗಿದೆ.

ಇಂತ ವಂಚನೆಯ ಮಾತುಕತೆಗಳಲ್ಲಿ ಭಾಗವಹಿಸಲು ಸಾರಸಗಟಾಗಿ ನಿರಾಕರಿಸುವುದು ರಾಷ್ಟ್ರೀಯ ವಿಮೋಚನೆ ಚಳವಳಿಯ ಮುಂದಿರುವ ಪ್ರಧಾನ ಕಾರ್ಯಭಾರವಾಗಿದೆ. ಬ್ರಿಟಿಷರೇ, ಈಗಿಂದೀಗಲೇ ಭಾರತ ಬಿಟ್ಟು ತೊಲಗಿ" ಎಂದು ಒಂದೇ ಕಂಠದಿಂದ ಘೋಷಿಸಬೇಕಾಗಿದೆ. ಭಾರತ ವಿಮೋಚನೆಯ ಶಕ್ತಿಗಳು ಈಗ ಸಾಕಷ್ಟಿವೆ. 1942 ರಲ್ಲಿ ಇದ್ದ ಶಕ್ತಿಗಿಂತ ಹೆಚ್ಚು ಉತ್ತಮವಾದುದಾಗಿವೆ. ಪರಿಸ್ಥಿತಿ ಹೆಚ್ಚು ಕ್ರಾಂತಿಕಾರಕವಾಗಿವೆ, ಸ್ಫೋಟಕವಾಗಿದೆ. ಭಾರತೀಯ ಸೇನೆ ಬಂಡೇಳುತ್ತದೆ. ಐಎನ್ಎ ಶಕ್ತಿಗಳು ಅದನ್ನು ಬಲಪಡಿಸುತ್ತವೆ.

ಒಂದು ವೇಳೆ ಸಾಮ್ರಾಜ್ಯಶಾಹಿಗಳ ತಂತ್ರಕ್ಕೆ ಬಲಿಬೀಳುವ ತಪ್ಪು ಮಾಡಿದರೆ ದೇಶದಲ್ಲಿ ಬ್ರಿಟಿಷರ ಆಳ್ವಿಕೆಗೆ ಇನ್ನಷ್ಟು ಕಾಲ ಜೀವದಾನ ನೀಡಿದಂತಾಗುತ್ತದೆ. ಈ ಬಿಕ್ಕಟ್ಟನ್ನು ಭಾರತೀಯ ಸಮಾಜದ ಪ್ರತಿಗಾಮಿ ಶಕ್ತಿಗಳನ್ನು ಪೋಷಿಸಲು ಅವರು ಬಳಸಿಕೊಳ್ಳುತ್ತಾರೆ. ಯುದ್ಧದಿಂದ ಸೃಷ್ಟಿಯಾದ ಕ್ರಾಂತಿಕಾರಿ ಪರಿಸ್ಥಿತಿ ಹಾಗೂ ಶಕ್ತಿಯನ್ನು ಹಾಗೂ ಜನರು ಮತ್ತು ಸಶಸ್ತ್ರ ಪಡೆಗಳ ಒಗ್ಗಟ್ಟನ್ನು ಕೋಮುವಾದಿ ಹಾಗೂ ವಿಚ್ಛಿದ್ರಕಾರಿ ಚಟುವಟಿಕೆಗಳತ್ತ ಹರಿಯುವಂತೆ ಮಾಡುತ್ತಾರೆ. ಭಾರತದ ಶಕ್ತಿಗಳು ಛಿದ್ರಗೊಂಡು, ದುರ್ಬಲವಾದಾಗ ಸೂಕ್ತ ಸಮಯದಲ್ಲಿ ಅವರು ಕಾಂಗ್ರೆಸ್ ಮತ್ತು ಲೀಗ್‌ಗೆ ಹಸಿರು ನಿಶಾನೆ ತೋರಿಸುತ್ತಾರೆ.

ಗಾಂಧೀಜಿ ಚಳವಳಿಯೊಂದನ್ನು ಆರಂಭಿಸುವ ಮೂಡ್‌ನಲ್ಲಿದ್ದಾರೆ. ಪ್ರಾಂತೀಯಸ್ವಾಯತ್ತತೆಯ 1936 ರ ದಿನಗಳಿಗೆ ಮರಳಲು ಕಾಂಗ್ರೆಸ್ ಬಯಸಿದಂತೆ ಕಾಣುತ್ತಿದೆ. ಯುದ್ಧ ಮುಗಿದ ತಕ್ಷಣವೇ ಬ್ರಿಟಿಷರ ವಿರುದ್ಧ ಬಂಡಾಯ ಆರಂಭಿಸುವುದು ಅನಿವಾರ್ಯ. ಜನರಲ್ಲಿ ಕ್ರಾಂತಿಕಾರಿ ಮನೋಭಾವ ತುಂಬಿದೆ. ಸೋಷಲಿಸ್ಟ್ ಮತ್ತು ಕಮ್ಯುನಿಸ್ಟ್ ಪಕ್ಷಗಳನ್ನು ಸಂಪರ್ಕಿಸಬೇಕು"

(ಮುಂದುವರಿಯುವುದು)

## ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

**ಏಪ್ರಿಲ್ 16, 2003**
ಪಿ.ಎಫ್. ಬಡ್ಡಿ ಕಡಿತ, ಭ್ರಷ್ಟಾಚಾರ ವಿರೋಧಿಸಿ ಪಿಎಫ್ ಕಛೇರಿ ಮುಂದೆ ಪ್ರತಿಭಟನೆ

**ಏಪ್ರಿಲ್ 18 ರಿಂದ ಮೇ 5 ರವರೆಗೆ**
8 ರಿಂದ 16 ವರ್ಷದ ಮಕ್ಕಳಿಗಾಗಿ ವಿಶೇಷ ರಂಗ ತರಬೇತಿ ಶಿಬಿರ
ಸಂಘಟಕರು : ಸಮುದಾಯ-ಬೆಂಗಳೂರು
ಸ್ಥಳ: ಬಸವನಗುಡಿ ನ್ಯಾಷನಲ್ ಹಿರಿಯ ಪ್ರಾಥಮಿಕ ಶಾಲೆಯ ಆವರಣ
ಸಮಯ: ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1.30 ರವರೆಗೆ

**ಏಪ್ರಿಲ್ 19 2003**
ಭಾರತಕ್ಕಾಗಿ ನಾವು ನೀವು, ಭಾರತಕ್ಕಾಗಿ ಜನತೆ ಎಂಬ ಘೋಷಣೆಯೊಂದಿಗೆ ಜಾಗೀಕರಣ ಮತ್ತು ಕೋಮುವಾದಿ ವಿರೋಧಿ ವಿಶಾಲ ವೇದಿಕೆ ರಚನೆಗಾಗಿ ಸಿದ್ಧತಾ ಸಭೆ - ಜೀವ ವಿಮಾ ವಿಭಾಗೀಯಕಛೇರಿ
ಸಮಯ: ಸಂಜೆ 4.30 ಕ್ಕೆ

**ಏಪ್ರಿಲ್ 24, 2003**
ಜನಸಾಮಾನ್ಯರ ಆಹಾರ ಭದ್ರತೆಗಾಗಿ, ಸಮಗ್ರ ಪಡಿತರ ವ್ಯವಸ್ಥೆಗೆ ಆಗ್ರಹಿಸಿ, ದೆಹಲಿ ಚಲೋ

ಜನವಾದಿ ಮಹಿಳಾ ಸಂಘಟನೆ

**ಮೇ 5, 2003**
ವಿದ್ಯುತ್ ಪಂಪ್‌ಸೆಟ್ ಹಾಗೂ ಭಾಗ್ಯಜ್ಯೋತಿ ಬಳಕೆದಾರರ ಸಂಘದಿಂದ ದರ ಏರಿಕೆ, ಮೀಟರೀಕರಣ, ಖಾಸಗೀಕರಣ ವಿರುದ್ಧ ರಸ್ತೆ ತಡೆ

**ಮೇ 19,20,21, 2003**
ಅಖಿಲ ಭಾರತ ಔಷಧಿ ಪ್ರತಿನಿಧಿಗಳು (FMRAI) ಮುಷ್ಕರ

**ಮೇ 21, 2003**
ಕೇಂದ್ರ ಸರ್ಕಾರದ ಖಾಸಗೀಕರಣ ನೀತಿ, ಆರ್ಥಿಕ ನೀತಿಗಳ ವಿರುದ್ಧ ಅಖಿಲ ಭಾರತ ಮುಷ್ಕರ

# ತೂಗು ಸೇತುವೆ : ಕೊಂಕಣ ಸುತ್ತಿ ಮೈಲಾರಕ್ಕೆ

## ಬೆಂಗಳೂರಿನ ಮುಗಿಯದ ಬವಣೆ

ಇತ್ತೀಚೆಗೆ ಕೃಷ್ಣರಾಜಪುರ ಸಮೀಪ 55 ಕೋಟಿರೂ. ವೆಚ್ಚದ ತೂಗು ಸೇತುವೆ ಉದ್ಘಾಟಿಸಿದ ನಮ್ಮ ಪ್ರಧಾನಿ ವಾಜಪೇಯಿಯವರು ಇದೊಂದು ನಗರದ ಸೌಂದರ್ಯವರ್ಧಕ, ಸುಂದರ ನಗರ ಬೆಂಗಳೂರಿಗೆ ಈ ತೂಗು ಸೇತುವೆ ಕಳಶಪ್ರಾಯ ಎಂದೆಲ್ಲಾ ಹಾಡಿ ಹೊಗಳಿದರು. ಹಲವು ವರ್ಷಗಳ ಬವಣೆ ತಪ್ಪಿ ಜನ ನಿಟ್ಟುಸಿರು



ಬಿಡುವಂತಾಯ್ತು. ಬೆನ್ನ ಹಿಂದೆಯೇ ಸ್ಥಳೀಯ ಜನರಿಗೆ ಇದರಿಂದ ಮತ್ತೊಂದು ಹೊಸ ಸಮಸ್ಯೆ ಎದುರಾಗಿದೆ. ರಸ್ತೆಯ ಒಂದು ಬದಿಯಿಂದ ಮತ್ತೊಂದು ಬದಿಗೆ ಹೋಗುವುದೆಂದರೆ, ಕೊಂಕಣ ಸುತ್ತಿ ಮೈಲಾರಕ್ಕೆ ಬಂದ ಅನುಭವವಾಗುತ್ತದೆ. ಕಣ್ಣಿಗೆ ಕಾಣುವ ಕೆಲವೇ ಅಡಿಗಳಷ್ಟು ದೂರದ ಸ್ಥಳ ತಲುಪಬೇಕಾದರೆ ಸೇತುವೆ ಪಕ್ಕದಲ್ಲೇ 4 ರಿಂದ 5 ಕಿ.ಮಿ. ದೂರ ಸುತ್ತಿ ಬರಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಲಾಗಿದೆ.

**ಮುಗಿಯದ ಹೋರಾಟ**

ಅಂದು ತೂಗು ಸೇತುವೆಗಾಗಿ ಹೋರಾಟ, ನಡುವೆ ಧೂಳಿನ ವಿರುದ್ಧ ಹೋರಾಟ, ಇಂದು ಲೆವೆಲ್ ಕ್ರಾಸ್‌ಗಾಗಿ ಹೋರಾಟ. ಹೀಗೆ ಸ್ಥಳೀಯರ ಹೋರಾಟ ನಿತ್ಯ ನಿರಂತರ.

ಹಿಂದೆ ಕೃಷ್ಣರಾಜಪುರದ ರೈಲು ನಿಲ್ದಾಣದ ಬಳಿ ರೈಲ್ವೆ ಹಳಿ ದಾಟಲು ಸೇತುವೆ ಒಂದಿತ್ತು. ಅದು ಎಷ್ಟು ಕಿರಿದಾಗಿತ್ತೆಂದರೆ ಒಂದು ಕಡೆಯಿಂದ ಭಾರಿ ವಾಹನ ಸೇತುವೆ ಮೇಲೆ ಹಾದು ಹೋಗುವಾಗ ಎದುರಿನಿಂದ ಬರುವ ಎಲ್ಲಾ ವಾಹನಗಳು ಸೇತುವೆಯಿಂದ ಅನತಿ ದೂರದಲ್ಲಿ ಕಾದು ನಿಲ್ಲಬೇಕಾಗಿತ್ತು. ಕೆಲವೊಮ್ಮೆ ಗಂಟೆಗಟ್ಟಲೆ ಸಂಚಾರ ಸ್ಥಗಿತಗೊಳ್ಳುತ್ತಿತ್ತು. ಅದು ರಾಷ್ಟ್ರೀಯ ಹೆದ್ದಾರಿಯಾದ್ದರಿಂದ ಸರಕು ಸಾಗಣೆ ಲಾರಿಗಳು, ಪ್ರಯಾಣಿಕರನ್ನು ಹೊತ್ತ ಹೊರ ರಾಜ್ಯದ ಬಸ್ಸುಗಳೂ ಭಾರೀ ಸಂಖ್ಯೆಯಲ್ಲಿ ನಿರಂತರವಾಗಿ ಚಲಿಸುತ್ತಿರುತ್ತವೆ. ಕಿರಿದಾದ ಸೇತುವೆಯಿಂದಾಗಿ ಅಪಘಾತಗಳೂ ಸಂಭವಿಸುತ್ತಿದ್ದವು.

**ಸೇತುವೆಗಾಗಿ ಹೋರಾಟ**

1992 ರಲ್ಲಿ ಅಂದಿನ ಕೇಂದ್ರ ರೈಲ್ವೆ ಮಂತ್ರಿ ಜಾಫರ್ ಶರೀಫ್ ತೂಗು ಸೇತುವೆಗೆ ಅಡಿಗಲ್ಲು ಹಾಕಿದರಾದರೂ ಅದರ ಕೆಲಸ ಕಾರ್ಯಗಳು ಪ್ರಾರಂಭವಾಗಲೇ ಇಲ್ಲ, ಇದರಿಂದ ಬೇಸತ್ತ ಜನತೆ ಸಿಪಿಐ(ಎಂ) ನೇತೃತ್ವದಲ್ಲಿ (5 ವರ್ಷಗಳ ಹಿಂದೆ) ಹೋರಾಟ ನಡೆಸಿ ತಕ್ಷಣ ಸೇತುವೆ ನಿರ್ಮಾಣ ಕೈಗೆತ್ತಿಕೊಳ್ಳುವಂತೆ ಒತ್ತಾಯಿಸಿದರು. ಈ ಹೋರಾಟದಲ್ಲಿ ಡಿವೈಎಫ್‌ಐ, ಸಿಐಟಿಯು, ಜನವಾದಿ ಮಹಿಳಾ ಸಂಘಟನೆಗಳ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

**ಧೂಳಿನ ವಿರುದ್ಧ**

ಜನತೆಯ ಒತ್ತಡದ ಪರಿಣಾಮ1999 ರಲ್ಲಿ ನಿರ್ಮಾಣ ಕಾಮಗಾರಿ ಆರಂಭವಾಯಿತು. ವಾಹನಗಳ ಸಂಚಾರವನ್ನು ಬೇರೆ ದಿಕ್ಕಿಗೆ ಬದಲಾಯಿಸಿದರು. ರೈಲ್ವೆ ಹಳಿ ದಾಟಲು ವಾಹಗಳಿಗೆ ಸಮೀಪದಲ್ಲಿ ಯಾವುದೇ ಪರ್ಯಾಯ ದಾರಿಯಿಲ್ಲದೆ, ಹತ್ತಾರು ಕಿ.ಮಿ. ದೂರ ಸುತ್ತಿ ಬಳಸಿ ಮತ್ತೊಂದು ತುದಿಯ ರಸ್ತೆಗೆ ಸೇರಬೇಕಾದ ಪರಿಸ್ಥಿತಿ ನಿರ್ಮಾಣವಾಯ್ತು. ಆದರೂ ತೂಗು ಸೇತುವೆ ನಂತರದದ ದಿನಗಳನ್ನು ನೆನೆದು ಈ ಎಲ್ಲಾ ತೊಂದರೆಗಳನ್ನು ಜನಸಹಿಸಿಕೊಂಡರು. ಸೇತುವೆ ನಿರ್ಮಾಣದ ಬಳಿ ದ್ವಿಚಕ್ರ ವಾಹನಗಳಿಗೆ ಪಾದಚಾರಿಗಳಿಗೆ ಹಳಿ ದಾಟಲು ಲೌರಿ ಶಾಲೆಯ ಹತ್ತಿರ ಲೆವೆಲ್ ಕ್ರಾಸ್ ತೆರೆಯಲಾಯಿತು.

ಇದಿಷ್ಟೇ ಸಮಸ್ಯೆಯಾಗಿದ್ದರೆ, ಜನ ಸಹಿಸಿಕೊಳ್ಳುತ್ತಿದ್ದರು. ಇದಿಷ್ಟು ಸಾಲದೆಂಬಂತೆ ಸೇತುವೆ ನಿರ್ಮಾಣದ ಸ್ಥಳದಲ್ಲಿ ಹೊಸದಾಗಿ ನಿರ್ಮಿಸಿದ ಕಚ್ಚಾ ರಸ್ತೆಯಲ್ಲಿ ವಾಹನಗಳ ಸಂಚಾರದಿಂದ ಎದ್ದ ಧೂಳು ಸ್ಥಳೀಯ ಮತ್ತು ವಾಹನ ಸವಾರರ ಉಸಿರು ಕಟ್ಟುವಂತೆ ಮಾಡಿತು. ಧೂಳಿನಿಂದ ಬೇಸತ್ತ ಜನತೆ ಮತ್ತೊಂದು ಸುತ್ತಿನ ಹೋರಾಟ ನಡೆಸಿದರು. ರಸ್ತೆಗೆ ಡಾಂಬರೀಕರಣ ಮಾಡಿ ಧೂಳಿನಿಂದ ಮುಕ್ತಿ ದೊರಕಿಸಬೇಕೆಂದು ಮತ್ತೊಮ್ಮೆ ಸಿಪಿಐ(ಎಂ) ನ ಸ್ಥಳೀಯ ಘಟಕದ ನೇತೃತ್ವದಲ್ಲಿ ನೂರಾರು ಸಂಖ್ಯೆಯಲ್ಲಿ ಸ್ಥಳೀಯರು ಸೇರಿದಂತೆ ರಸ್ತೆ ತಡೆ ಮಾಡುವ ಮೂಲಕ ಪ್ರತಿಭಟಿಸಿದರು. ಒಂದೆರೆಡು ದಿನಗಳಲ್ಲಿ ರಸ್ತೆಗೆ ಡಾಂಬರೀಕರಣ ಮಾಡಿ ಧೂಳಿನಿಂದ ಮುಕ್ತಿ ದೊರಕಿತು.

**ಈಗ ಲೆವೆಲ್ ಕ್ರಾಸ್ ತೆರವಿಗಾಗಿ ಹೋರಾಟ**

ಸೇತುವೆ ನಿರ್ಮಾಣ ಪೂರ್ಣಗೊಂಡು ಸಂಚಾರಕ್ಕೆ ತೆರೆವುಗೊಳಿಸಿದಾಗ ದೂರ ಪ್ರಯಾಣದ ಪ್ರಯಾಣಿಕರ ಜೊತೆಗೆ ಸ್ಥಳೀಯರು ಸಂತೋಷ ಪಟ್ಟರು. ಈ ಸಂತೋಷ ಮರು ಕ್ಷಣವೇ ಮಾಯುವಾಯಿತು. ಸೇತುವೆ ಉದ್ಘಾಟನೆಗೊಳ್ಳುತ್ತಿದ್ದಂತೆ ತಾತ್ಕಾಲಿಕವಾಗಿ ತೆರೆದಿದ್ದ ಲೆವೆಲ್ ಕ್ರಾಸ್ ಮುಚ್ಚಲ್ಪಟ್ಟಿತು. ಮೊದಲೇ ತಿಳಿಸಿದಂತೆ ರೈಲ್ವೆ ಹಳಿ ದಾಟಿ ಮತ್ತೊಂದು ಬದಿಗೆ ಕೆಲವೇ ಹೆಜ್ಜೆಗಳ ದೂರದ ಪ್ರಯಾಣಕ್ಕೆ 4-5 ಕಿ.ಮಿ. ಸುತ್ತಿ ಬರಬೇಕಾದ ಪರಿಸ್ಥಿತಿ ಬಂದೊದಗಿತು. ಕೆ.ಆರ್.ಪುರಂನಲ್ಲಿ ಸರ್ಕಾರಿ ಆಸ್ಪತ್ರೆ, ನಗರ ಸಭೆ ಕಚೇರಿ, ತಾಲ್ಲೂಕು ಕಛೇರಿ, ನೋಂದಣಿ ಕಛೇರಿ ಹಾಗೂ ಇನ್ನಿತರ ಕಛೇರಿಗಳು, ಶಾಲಾ ಕಾಲೇಜುಗಳು ಇದ್ದರೆ ರೈಲು ಹಾದಿಯ ಮತ್ತೊಂದು ಬದಿಯ ವೈಟ್‌ಫೀಲ್ಡ್ ರಸ್ತೆಯಲ್ಲಿ ಉದಯನಗರದಿಂದ ಕಾವೇರಿನಗರದ ವರೆಗೆ ಹಲವಾರು ಸಣ್ಣ ಕೈಗಾರಿಕೆಗಳು, ಶಾಲೆಗಳು ಇವೆ. ಹೀಗೆ ಸೇತುವೆಯ ಎರಡೂ ಕಡೆಗಳಲ್ಲಿ ಜನರು ನಿತ್ಯ ಜೀವನದಲ್ಲಿ ವ್ಯವಹರಿಸಬೇಕಾದ ಅವಶ್ಯಕತೆಗಳಿವೆ. ದ್ವಿಚಕ್ರ ಸವಾರರ ಗತಿ ಹೀಗಾದರೆ, ಕೈಗಾಡಿ ವ್ಯಾಪಾರಸ್ಥರ ಪರಿಸ್ಥಿತಿ ಹೇಳತೀರದು. ಸೇತುವೆಯ ಮೇಲಿನ ಇವರ ಪ್ರಯಾಣ ಸಾವಿನೊಡನೆ ಸರಸವಾಡಿದಂತೆ.

ಲೆವೆಲ್ ಕ್ರಾಸ್ ತೆರವಿಗಾಗಿ ಒತ್ತಾಯಿಸಿ ಸಿಪಿಐ(ಎಂ) ನೇತೃತ್ವದಲ್ಲಿ ಮೂರನೇ ಬಾರಿಗೆ ಹೋರಾಟ ನಡೆದಿದೆ. ಮಾರ್ಚ್ 19 ರಂದು 700 ಕ್ಕೂ ಅಧಿಕ ಪ್ರತಿಭಟನಾಕಾರರು ರೈಲು ತಡೆ ಚಳುವಳಿ ನಡೆಸಿ ಲೆವೆಲ್ ಕ್ರಾಸ್ ತೆರವು ಗೊಳಿಸುವಂತೆ ಒತ್ತಾಯಿಸಿದರು.

ಅಂದು ಸಂಜೆ 4.30 ಕ್ಕೆ ತಮಿಳುನಾಡಿನಿಂದ ಬರುತ್ತಿದ್ದ ಮಾರಿ ಕುಪ್ಪಂ ರೈಲು ತಡೆದು ನಿಲ್ಲಿಸಿ ಪ್ರತಿಭಟಿಸಿದರು. 'ರೈಲು ಬರುತ್ತಿದೆ ದೂರ ಹೋಗಿ' ಎಂದು ಪೋಲೀಸರು ಚಳುವಳಿಕಾರರನ್ನು ಬೆದರಿಸಲು ಪ್ರಯತ್ನಿಸಿದರು. ಕೆ.ಆರ.ಪುರಂ, ಮಹದೇವಪುರ ಮತ್ತು ರೈಲ್ವೆ ವಿಭಾಗದ ಪೋಲೀಸರು ಸ್ಥಳದಲ್ಲಿ ಜಮಾಯಿಸಿದ್ದರು. ಚಳುವಳಿಗಾರರನ್ನು ಚದುರಿಸಲು ಹಲವು ಪ್ರಯತ್ನ ವಿಫಲವಾದಾಗ 'ರೈಲು ಬರುತ್ತಿದೆ. ಅದು ನಿಲ್ಲುವುದಿಲ್ಲ ನಿಮ್ಮ ಮೇಲೆ ಹರಿದು ಹೋಗುತ್ತದೆ''ಎಂದು ಬೆದರಿಸಿದರೂ ಚಳುವಳಿಗಾರರು ಜಗ್ಗಲಿಲ್ಲ. ಬರುತ್ತಿದ್ದ ರೈಲಿಗೆ ಎದುರಾಗಿ ಘೋಷಣೆ ಕೂಗುತ್ತಾ ಮುನ್ನುಗ್ಗಿದ್ದಾಗ ರೈಲು ನಿಂತಿತು.

ಒಂದು ಗಂಟೆ ರೈಲು ತಡೆಯ ನಂತರ ಸ್ಥಳಕ್ಕೆ ಬಂದ ರೈಲ್ವೆ ಅಧಿಕಾರಿಗಳು ಮನವಿ ಸ್ವೀಕರಿಸಿ ಮೇಲಧಿಕಾರಿಗಳಿಗೆ ತಿಳಿಸುವ ಭರವಸೆ ನೀಡಿದ್ದಾರೆ. ಸಿಪಿಐ(ಎಂ)ನ ಸ್ಥಳೀಯ ಕಾರ್ಯದರ್ಶಿ ಹೆಚ್.ಎನ್.ಗೋಪಾಲಗೌಡ, ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಸ್ಥಳೀಯ ಸಮಿತಿ ಸದಸ್ಯರಾದ ರಾಮಚಂದ್ರ, ಗೌರಮ್ಮ ರಮೇಶ್, ಜಯರಾಂ ಮುಂತಾದವರು ಸಭೆಯಲ್ಲಿ ಮಾತನಾಡಿದರು.

**- ಗೌರಮ್ಮ ಸಿದ್ದಯ್ಯ**

## "ಒಂದು ಸಲ ಕ್ರಾಂತಿಕಾರಿಗಳಾದರೆ ಜೀವನವಿಡೀ ಕ್ರಾಂತಿಕಾರಿಗಳಾಗಿರಿ"

### ಕ್ಯಾಪ್ಟನ್ ಲಕ್ಷ್ಮಿ ಕರೆ



"ಒಮ್ಮೆ ಕ್ರಾಂತಿಕಾರಿಗಳಾದರೆ ಜೀವನವಿಡೀ ಕ್ರಾಂತಿಕಾರಿಗಳಾಗಿರಿ" ಎಂದು ಕರೆನೀಡಿದವರು ಸ್ವಾತಂತ್ರ್ಯ ಸೇನಾನಿ, ಕ್ಯಾ. ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್‌ರವರು. ಡಿವೈಎಫ್‌ಐ ಸಂಘಟಿಸಿದ ಯುವತಿಯರ ರಾಷ್ಟ್ರ ಸಮ್ಮೇಳನದವನ್ನು ಉದ್ಘಾಟಿಸಿದ ಅವರು ಮಾಡಿದ್ದು ಕೇವಲ ಭಾಷಣವಲ್ಲ ಬದಲಿಗೆ ಯುವತಿಯರ ಮನದಾಳದ ನೋವುಗಳಿಗೆ ಧ್ವನಿಯಾಗಿ, ಆ ಧ್ವನಿ ಕೃತಿಯಾಗಿ ಹೇಗೆ ಮೂಡಿ ಬರಬೇಕೆಂಬುದನ್ನು ಸರಳವಾಗಿ, ಸ್ಪಷ್ಟವಾಗಿ, ಕ್ರಾಂತಿಕಾರಿ ಧ್ವನಿಯಲ್ಲಿ ತಿಳಿಸಿ ಹೇಳುವ ಕೆಲಸ. ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಸುಭಾಸ್ ಚಂದ್ರ ಬೋಸ್‌ರವರು ಮಹಿಳೆಯರಿಗೆ ಹೀಗೊಂದು ಕರೆ ನೀಡಿದರು,"ನೀವು ನಮಗೆ ರಕ್ತ ಕೊಡಿ ನಾವು ನಿಮಗೆ ಸ್ವಾತಂತ್ರ್ಯ ಕೊಡುತ್ತೇವೆ." ಈ ಕರೆಯಲ್ಲಿ ಸುಭಾಷ್ ಚಂದ್ರ ಬೋಸ್‌ರವರಿಗೆ ದೇಶದ ಸ್ವಾತಂತ್ರ್ಯ ಎಷ್ಟು ಮುಖ್ಯವಾಗಿತ್ತೋ, ಮಹಿಳೆಯರ ಸ್ವಾತಂತ್ರ್ಯ ಸ್ಥಾನಮಾನವೂ ಅಷ್ಟೇ ಪ್ರಮುಖವಾಗಿತ್ತು ಎನ್ನುವುದನ್ನು ತೋರಿಸುತ್ತದೆ. ಬೋಸರ ಈ ಕ್ರಾಂತಿಕಾರಿ ಕರೆಗೆ ಸ್ಪಂದಿಸಿದ ನಾನು ಕ್ರಾಂತಿಕಾರಿ ಸೇನಾನಿಯಾಗಿ ಹೊರಬರಲು ಸಾಧ್ಯವಾಯಿತು ಎಂದ ಅವರು ಇಂದು ದೇಶಕ್ಕೇನೋ ಸ್ವಾತಂತ್ರ್ಯ ಬಂದಿದೆ, ಆದರೆ ನಮ್ಮ ಮಹಿಳೆಯರು ಅದರಲ್ಲೂ ಯುವತಿಯರು ಇಂದು ಎಷ್ಟು ಸ್ವತಂತ್ರರಾಗಿದ್ದಾರೆ? ನಮ್ಮ ಯುವತಿ ಯರು ಯಾಕೆ ಸ್ವಾವಲಂಬಿಗಳಾಗುತ್ತಿಲ್ಲ ಎಂದು ಪ್ರಶ್ನಿಸಿದರು.

ಯುವತಿಯರು ತಮ್ಮ ಹಕ್ಕುಗಳ ಕುರಿತು ಯೋಚಿಸಬೇಕು. ಅದೇ ಸಮಯದಲ್ಲಿ ತಾವು ಜವಾಬ್ದಾರಿಗಳನ್ನು ನಿಭಾಯಿಸಲೂ ತಯಾರಾಗಬೇಕು. ಯುವತಿಯರು ಸ್ವವಿಮರ್ಶೆ ಮಾಡಿಕೊಂಡು, ವ್ಯವಸ್ಥೆಯ ವಿರುದ್ಧ ಆಕ್ರೋಶವನ್ನು ತೋರಿಸುವಂತಾಗಬೇಕು. ಒಂದು ಸಲ ನಿಮ್ಮ ಚಿಂತನೆಯು ಆಕ್ರೋಶಕ್ಕೆ ಎಡೆ ಮಾಡಿಕೊಟ್ಟರೆ ನಿಮ್ಮ ಚಿಂತನೆ ಕ್ರಾಂತಿಕಾರಿ ಹಾದಿಯಲ್ಲಿ ಸಾಗುತ್ತದೆ. ಒಂದು "ಸಲ ಕ್ರಾಂತಿಕಾರಿಗಳಾದರೆ ಮುಂದೆಂದೂ ಬೇಸತ್ತು ಹೋಗದೆ ಸದಾ ಕ್ರಾಂತಿಕಾರಿಗಳಾಗಿಯೇ ಮುನ್ನಡೆಯಬೇಕು" ನಮ್ಮ ಯುವತಿಯರು ಈ ದಿಕ್ಕಿನಲ್ಲಿ ಹೆಜ್ಜೆ ಇಟ್ಟಾಗ ಮಾತ್ರ ನಮ್ಮ ಚಳುವಳಿ ಕ್ರಾಂತಿಕಾರಿ ಮಾರ್ಗದಲ್ಲಿ ಮುನ್ನಡೆದು ನಮ್ಮ ಯುವತಿಯರು ಆರ್ಥಿಕವಾಗಿ ಸಾಮಾಜಿಕವಾಗಿ ರಾಜಕೀಯವಾಗಿ ಮುಂದೆ ಬರಲು ಸಾಧ್ಯ ಎಂಬ ಸಹಚರರ ಮಾತು ನಮ್ಮ ಯುವತಿಯರ ಮನದೊಳಗೆ ಸುಪ್ತವಾಗಿದ್ದ ಅನೇಕ ಆಶೆ, ಆಶಯ ಭಾವನೆಗಳಿಗೆ ಜೀವ ತುಂಬಿದ್ದಂತೂ ಸತ್ಯ.

# ಹಲ್ಲಿ ಹೊರತಂದ ಹಾಸ್ಟೇಲ್ ಹುಳುಕು

ಅಂದು ಬೆಳಗಿನ ಊಟ ಮುಗಿಸಿದ ಹಾವೇರಿಯ ಸರ್ಕಾರಿ ಪದವಿ ಪೂರ್ವ ಬಿಸಿಎಂ ಬಾಲಕರ ವಸತಿ ನಿಲಯದ ವಿದ್ಯಾರ್ಥಿಗಳು ಒಬ್ಬೊಬ್ಬರಾಗಿ ತೀವ್ರ ಹೊಟ್ಟೆನೋವಿನಿಂದ ನರಳುತ್ತಾ ವಾಂತಿ ಮಾಡಲಾರಂಭಿಸಿದರು. ಸ್ಥಳೀಯ ಎಸ್.ಎಫ್.ಐ. ಮುಖಂಡರಿಗೆ ಸುದ್ದಿ ಹೋಯಿತು. ಧಾವಿಸಿ ಬಂದ ಎಸ್.ಎಫ್.ಐ. ಕಾರ್ಯಕರ್ತರು ಅಸ್ವಸ್ಥರಾದ ವಿದ್ಯಾರ್ಥಿಗಳನ್ನು ಆಸ್ಪತ್ರೆಗೆ ಕರೆದೊಯ್ದರು. ವೈದ್ಯರ ಸಲಹೆಯ ಮೇರೆಗೆ ಅಂದಿನ ಅಡಿಗೆಯ ಪಾತ್ರೆಗಳನ್ನು ಪರೀಕ್ಷಿಸಲಾಯಿತು. ಅನ್ನದ ಪಾತ್ರೆ ಖಾಲಿಯಾಗಿತ್ತು. ಸಾಂಬಾರು ಮಾತ್ರ ಸಾಕಷ್ಟು ಉಳಿದಿತ್ತು. ಈಜಿ ಹುಡುಕಿದರೂ ಒಂದೇ ಒಂದು ಬೇಳೆ ಸಿಗದಿರುವ ಸಾಂಬಾರಿನಲ್ಲಿ ಮೊಸಳೆಯೊಂದು ಪ್ರತ್ಯಕ್ಷವಾದಂತೆ ಕಪ್ಪನೆಯ ಹಲ್ಲಿಯೊಂದು ಬೆಂದು ಬನ್ ಆಗಿರುವುದು ಪತ್ತೆಯಾಯಿತು. ಮುಗ್ಧ ವಿದ್ಯಾರ್ಥಿಗಳ ನಿಗೂಢ ಅಸ್ವಸ್ಥತೆಯ ಗುಟ್ಟು ರಟ್ಟಾಯಿತು. ಇದು ಹತ್ಯೆಯೋ ಅಥವಾ ಆತ್ಮಹತ್ಯೆಯೋ ಎಂಬುದು ತನಿಖೆಯಾಗಬೇಕಾಗಿದೆ.

**ತಾಲ್ಲೂಕ್ ಪಂಚಾಯತಿಗೆ ಮುತ್ತಿಗೆ:-** ತೀವ್ರ ಆಘಾತಕ್ಕೆ ಒಳಗಾಗಿದ್ದ ಹಾಸ್ಟೆಲ್ ವಿದ್ಯಾರ್ಥಿಗಳಲ್ಲಿ ಧೈರ್ಯ ತುಂಬುವ ಕೆಲಸವನ್ನು ಎಸ್.ಎಫ್.ಐ. ಮುಖಂಡರು ಮಾಡಿದರು. ತಾಲ್ಲೂಕು ಪಂಚಾಯತಿಗೆ ಹೋಗಿ ಸಂಬಂಧಪಟ್ಟವರಿಗೆ ತಮ್ಮ ಅಳಲನ್ನು ತೋಡಿಕೊಳ್ಳಲು ನಿರ್ಧರಿಸಿದರು. ತಾಲೂಕ್ ಪಂಚಾಯತ್ ಕಾರ್ಯಾಲಯಕ್ಕೆ ತಲುಪಿದಾಗ ಸಭೆ ನಡೆಯುತ್ತಿತ್ತು. ಆಳುವ ಪಕ್ಷ ಹಾಗೂ ವಿರೋಧ ಪಕ್ಷದ ಸದಸ್ಯರ ನಡುವೆ ತೀವ್ರ ವಾಗ್ವಾದ ನಡೆಯುತ್ತಿತ್ತು. ನೊಂದ ವಿದ್ಯಾರ್ಥಿಗಳು ಇದೊಂದು ಸುಸಂಧಿ ಎಂದು ನಿರ್ಧರಿಸಿ ದ್ವಾರಪಾಲಕನನ್ನು ಪಕ್ಕಕ್ಕೆ ತಳ್ಳಿ ತಾಲೂಕ್ ಪಂಚಾಯತ್ ಕಾರ್ಯಾಲಯದೊಳಗೆ ನುಗ್ಗಿದರು. ತಬ್ಬಿಬ್ಬಾದ ತಾಲೂಕ್ ಪಂಚಾಯತ್ ಅಧ್ಯಕ್ಷರೂ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು ವಿದ್ಯಾರ್ಥಿಗಳ ಆತಂಕದ ಕಾರಣವನ್ನು ವಿಚಾರಿಸಿದರು. ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ವಿಜಯಕುಮಾರ್ ದೊಡ್ಡಮನಿಯವರು ಹಾಸ್ಟೆಲ್ ವಿದ್ಯಾರ್ಥಿಗಳ ಗೋಳಿನ ಗಂಟನ್ನು ಬಿಚ್ಚಿಟ್ಟರು.

**ಸಮಸ್ಯೆಗಳ ಆಗರ:** ಹಾವೇರಿ ನಗರದ ಪುರದ ಓಣಿಯಲ್ಲಿ ಶಿಥಿಲಗೊಂಡ ಬಾಡಿಗೆ ಕಟ್ಟಡವೊಂದರಲ್ಲಿ ನಡೆಸಲಾಗುತ್ತಿರುವ ಈ ಸರ್ಕಾರಿ ವಿದ್ಯಾರ್ಥಿ ನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಒಟ್ಟು 60 ವಿದ್ಯಾರ್ಥಿಗಳಿಗೆ ಇಲ್ಲಿ ಒದಗಿಸಲಾದ ಸೌಕರ್ಯಗಳಿಗಿಂತ ಅವರು ಅನುಭವಿಸುವ ಸಮಸ್ಯೆಗಳೇ ಹೆಚ್ಚು. ಬಡವರ ಮಕ್ಕಳಾಗಿ ಹುಟ್ಟಿದ ತಪ್ಪಿಗೆ ಹಾಸ್ಟೇಲು ಸೇರಿರುವ ಇಲ್ಲಿಯ ವಿದ್ಯಾರ್ಥಿಗಳು 5 ರಿಂದ 10ನೇ ತರಗತಿವರೆಗೆ ಓದುತ್ತಿದ್ದಾರೆ. ಕಛೇರಿ, ಅಡುಗೆ ಮನೆ ಮತ್ತು ಉಗ್ರಾಣ ಕೋಣೆ ಸೇರಿದಂತೆ ಒಟ್ಟು 8 ಚಿಕ್ಕ ಚಿಕ್ಕ ಕೊಠಡಿಗಳುಳ್ಳ ಮನೆಗೆ ಮಾಲೀಕರಾದ ಮೃತ್ಯುಂಜಯ ವಿಭೂತಿಮಠ ಕಟ್ಟಡದ ದುರಸ್ತಿ ಮಾಡುವುದನ್ನು ಮರೆತು ಬಿಟ್ಟಿದ್ದರೂ ಬಾಡಿಗೆ ಪಡೆಯುವುದನ್ನು ಮಾತ್ರ ಮರೆಯುವುದಿಲ್ಲ. ಮಣ್ಣಿನ ಗೋಡೆಗಳ ಮೇಲಿನ ಮಣ್ಣಿನ ಮೇಲ್ಛಾವಣಿಯಿಂದ ಯಾವಾಗಲೂ ಮಣ್ಣು ಉದುರುತ್ತಿರುತ್ತದೆ. ಮಳೆಗಾಲದಲ್ಲಿ ಸೋರುತ್ತಿರುತ್ತದೆ. ಇಡೀ ಕಟ್ಟಡಕ್ಕೆ ಒಂದೇ ಒಂದು ಕಿಟಕಿ ಇದ್ದು ಅವಶ್ಯಕ ಗಾಳಿ, ಬೆಳಕಿಗೆ ಇಲ್ಲಿ ಪ್ರವೇಶವಿಲ್ಲ. ಶೌಚಾಲಯವಿಲ್ಲ, ಸ್ನಾನದ ಮನೆಯಿಲ್ಲ, ಪ್ರತ್ಯೇಕವಾದ ಊಟದ ಕೋಣೆ ಇಲ್ಲ. ನೀರನ್ನು ಸಂಗ್ರಹಿಸಲು ಎರಡು ತೆರೆದ ಹವಜುಗಳಿವೆ. ಅವುಗಳನ್ನು ಕಾಲಕಾಲಕ್ಕೆ ತೊಳೆಯುವ ವ್ಯವಸ್ಥೆ ಇಲ್ಲ. 15 ದಿನಗಳಿಗೊಮ್ಮೆ ಮಾತ್ರ ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಒದಗಿಸಲಾಗುತ್ತದೆ.

ಊಟದ ಗೋಳು ಹೇಳತೀರದು. ಬೆಳಿಗ್ಗೆ 9 ಗಂಟೆಗೆ ಒಂದು ಊಟ ಬಡಿಸಿದರೆ ಇನ್ನೊಂದು ಊಟ ಸಂಜೆ 6 ಗಂಟೆಗೆ. ಅಡಿಗೆ ಸಾಂಬಾರು ಬಣ್ಣದ ಬಿಸಿ ನೀರಿನಂತಿರುತ್ತದೆ. ಅಕ್ಕಿ ಸರಿಯಾಗಿ ಬೆಂದು ಅನ್ನವಾಗಿರುವುದಿಲ್ಲ. ರೊಟ್ಟಿಯನ್ನು ಸರಿಯಾಗಿ ಬೇಯಿಸುವುದಿಲ್ಲ. ತಕರಾರು ಮಾಡಿದರೆ ಹುಡುಗರ ತಂದೆತಾಯಿಯರನ್ನು ಉಲ್ಲೇಖಿಸಿ ಅವಾಚ್ಯ ಶಬ್ಧಗಳಿಂದ ಬೈಯುತ್ತಾರೆ. ಚಪ್ಪಲಿಗಳನ್ನು ಎತ್ತುತ್ತಾರೆ. ವಿದ್ಯಾರ್ಥಿಗಳಿಂದ ತಮಗೆ ಚಹ, ಎಲೆ ಅಡಿಕೆ ತರಿಸಿಕೊಳ್ಳುತ್ತಾರೆ. ಚಪಾತಿ ಉದ್ದಲು ಹಚ್ಚುತ್ತಾರೆ. ಅವರು ಹೇಳುವ ಕೆಲಸಕ್ಕೆ ಸಹಕರಿಸದಿದ್ದರೆ ಕಿರುಕುಳ ಕೊಡುತ್ತಾರೆ. ಕೈಯೆತ್ತಿ ಹೊಡೆಯಲಿಕ್ಕೂ ಹಿಂದೇಟು ಹಾಕುವುದಿಲ್ಲ. ಎಸ್.ಎಫ್.ಐ. ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಲ್ಪಟ್ಟಾಗ ಸಂಘಟನೆಯ ಜಿಲ್ಲಾ

ಪುಟ 8 ಕ್ಕೆ

## ಚೇಲಾವರ ಜಲ ವಿದ್ಯುತ್ ಯೋಜನೆ ವಿರೋಧಿಸುತ್ತಿರುವ ಬಾಜಪ ನಿಜ ಗುಟ್ಟೇನು?

# ಬಾ.ಜ.ಪ.ದ ಜನವಿರೋಧೀ ರಾಷ್ಟ್ರದ್ರೋಹಿ ಮುಖ ಬಯಲಾಗಿದೆ

ಒಂದು ದೇಶದ ಅಭಿವೃದ್ಧಿಯಲ್ಲಿ ವಿದ್ಯುತ್ತಿನ ಅಗತ್ಯ ಎಷ್ಟೆಂದು ಎಲ್ಲರಿಗೂ ತಿಳಿದಿದೆ. ನಮ್ಮ ದೇಶದಲ್ಲಿ ನಮಗೆ ಅಗತ್ಯವಾದ ವಿದ್ಯುತ್ತನ್ನೆಲ್ಲವನ್ನೂ ಪಡೆಯಬಹುದಾದಷ್ಟು ಹೇರಳ ಪ್ರಕೃತಿ ಸಂಪತ್ತಿದೆ. ನಮ್ಮ ದೇಶದಲ್ಲಿ ವಿದ್ಯುತ್ತನ್ನು ಪಡೆಯಲಿರುವ ಸುಲಭದ ಮೂಲ ಜಲ ಮತ್ತು ಕಲ್ಲಿದ್ದಲು.

ವಿವಿಧ ಮೂಲಗಳಿಂದ ಕರ್ನಾಟಕದಲ್ಲಿ ಇಂದು 5102 ಮೆ.ವಾ.ವಿದ್ಯುತ್ ಉತ್ಪಾದನೆಯಾಗುತ್ತಿದೆ. ಆದರೆ ಅಗತ್ಯ 6062 ಮೆ.ವಾ.ಆಗಿದೆ. ಆದ್ದರಿಂದಲೇ ವಿದ್ಯುತ್ತಿನ ಕೊರತೆ ಸೃಷ್ಟಿಯಾಗಿದೆ. ಜಲವಿದ್ಯುತ್ತಿನ ಉತ್ಪಾದನಾ ಖರ್ಚು ಉಳಿದವುಗಳಿಗಿಂತ ಕಡಿಮೆ. ನಮ್ಮ ರಾಜ್ಯದಲ್ಲಿ 7750 ಮೆ.ವಾ. ಜಲ ವಿದ್ಯುತ್ ಉತ್ಪಾದನೆಯ ಸಾಧ್ಯವಿದೆ. ಇದರಲ್ಲಿ ಈಗ ಕೇವಲ 3024 ಮೆ.ವಾ.ನಷ್ಟು ವಿದ್ಯುತ್ ಮಾತ್ರ ಜಲ ಮೂಲದಿಂದ ಉತ್ಪಾದನೆಯಾಗುತ್ತಿದೆ.

ಈ ಮೂಲದಿಂದ ವಿದ್ಯುತ್ ಉತ್ಪಾದನೆಗೆ ಬೇಕಾಗುವ ಬಂಡವಾಳ ಉಳಿದವುಗಳಿಗಿಂತ ಕಡಿಮೆ. ಈ ಹಿನ್ನಲೆಯಲ್ಲಿ ನಮ್ಮ ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಚೇಲಾವರದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಕಿರು ಜಲ ವಿದ್ಯುತ್ ಯೋಜನೆಯನ್ನು ಗಣನೆಗೆ ತೆಗೆದುಕೊಳ್ಳಬೇಕು.

ಚೇಲಾವರದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಈ ಯೋಜನೆಯನ್ನು ಕೇಂದ್ರದಲ್ಲಿ ಮಂತ್ರಿಯಾಗಿದ್ದು ಈಗ ಕೇವಲ ಲೋಕಸಭಾ ಸದಸ್ಯನಷ್ಟೇ ಆಗಿ ಮುಂದುವರಿಯುತ್ತಿರುವ ಶ್ರೀ ಧನಂಜಯ ಕುಮಾರ್‌ರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷ ವಿರೋಧಿಸುತ್ತಿದೆ.

ಕೇಂದ್ರ ಮಂತ್ರಿಯಾಗಿ ಕೊಡಗಿಗೆ ಬಂದಾಗಲೆಲ್ಲಾ "ಕೊಡಗಿನ ಕಾಫಿ ಬೆಳೆಗಾರರ ಸಮಸ್ಯೆಯನ್ನು ಶೀಘ್ರದಲ್ಲಿಯೇ ಪರಿಹರಿಸಲಾಗುವುದು, ಬೇಗನೆ ಬೆಂಬಲ ಬೆಲೆ ಘೋಷಿಸಲಾಗುವುದು" ಎಂದು ಸುಳ್ಳು ಹೇಳುತ್ತಾ ಜನರನ್ನು ವಂಚಿಸುತ್ತಾ ಕಾಲ ಕಳೆದಿರುವ ಉತ್ತರ ಕುಮಾರನೀತ.

"ಕೊಡಗು ಅಭಿವೃದ್ಧಿಯಾಗಿಲ್ಲ" ಎಂಬ ನೆಪದಲ್ಲಿ ಪ್ರತ್ಯೇಕತಾವಾದವನ್ನು ಮಂಡಿಸಿದವರಿಗೆ ನಿರಂತರ ಬೆಂಬಲವಿತ್ತವರೇ ಈಗ ವಿರೋಧ ಮಾಡುತ್ತಿರುವವರೆಂದು ಗಮನಿಸಬೇಕು. ಇದರಿಂದ ಈ ಮಂದಿಯ ದ್ವಿಮುಖ ನೀತಿ ಬಯಲಾಗುತ್ತದೆ.

ಚೇಲಾವರದ ಈ ಯೋಜನೆ ಕಡಿಮೆ ಹಾನಿಯಲ್ಲಿ ಹೆಚ್ಚಿಗೆ ಉಪಯೋಗವಾಗುವಂತಹಾ ಯೋಜನೆ. ಈ ಯೋಜನೆಯಿಂದ ನಷ್ಟವಾಗುವ ಜಮೀನು ಕೇವಲ 16 ಎಕ್ರೆಯಾಗಿದ್ದು ಅದು ನಾಲ್ಕು ಕುಟುಂಬಗಳಿಗೆ ಸೇರಿದ್ದಾಗಿದೆ. ಬಡಕ್ಕಡ, ಪಡಿರಮಂಡ, ಹೊಸ ಮೊಕ್ಲು, ಮತ್ತು ಬಾಚಮಂಡ ಎಂಬ ನಾಲ್ಕು ಕುಟುಂಬಗಳಿಗೆ ಈ ಭೂಮಿಯ ಒಡೆತನವಿದ್ದು ಪಡಿರಮಂಡ ಕುಟುಂಬದವರು ಒಪ್ಪಿಗೆ ಸೂಚಿಸಿ ಈಗಾಗಲೇ ಸಹಿ ಹಾಕಿರುತ್ತಾರೆ. ಉತ್ತಮ ಇಳುವರಿ ಇಲ್ಲದ ಈ ಭೂಮಿಗೆ ಉತ್ತಮ ಬೆಲೆ ದೊರೆತರೆ ಉಳಿದವರೂ ತಮ್ಮ ಭೂಮಿ ಕೊಡಲು ಸಿದ್ಧರಿದ್ದಾರೆ. ವಿದ್ಯುದುತ್ಪಾದನೆಗೆ ಮುಂದೆ ಬಂದಿರುವ ಕೊಡಗು ಪವರ್ ಪ್ರೈವೆಟ್ ಕಂಪನಿ ಒಂದು ಎಕ್ರೆಗೆ ಒಂದೂ ಕಾಲು ಲಕ್ಷ ರೂ ಕೊಡಲು ಸಿದ್ಧರಾಗಿದ್ದಾರೆ.

ಊರಿನನೇಕರು ಈ ಯೋಜನೆಗೆ ತನ್ನ ಒಪ್ಪಿಗೆ ನೀಡಿದ್ದಾರೆ. ಅಲ್ಲಿ ಇರುವ ಎರಡು ದೇವಸ್ಥಾನಗಳು ಮುಳುಗಡೆಯಾಗುತ್ತವೆಂದು ಭಾರತೀಯ ಜನತಾ ಪಕ್ಷದ ಮಂದಿ ಪ್ರಚಾರ ಮಾಡುತ್ತಿರುವುದು ಶುದ್ಧ ಸುಳ್ಳು. ಸುಳ್ಳು ಹೇಳಿ ಮುಗ್ಧ ಜನರ ಮತೀಯ ನಂಬಿಕೆಗಳನ್ನು ಕೆರಳಿಸಿ ತಮ್ಮ ಸ್ವಾರ್ಥದ ಲಾಭವನ್ನು ಗಿಟ್ಟಿಸಿಕೊಳ್ಳುವುದು ಭಾರತೀಯ ಜನತಾ ಪಕ್ಷದ ಮಂದಿಯ ಎಂದಿನ ತಂತ್ರವಷ್ಟೇ. ಇಲ್ಲಿಯೂ ಅವರು ಅದನ್ನೇ ಪ್ರಯೋಗಿಸಲು ಯತ್ನಿಸುತ್ತಿದ್ದಾರೆ.

ಅಲ್ಲಿ ಇರುವುದು ಐಯ್ಯಪ್ಪ ಶಾಸ್ತಾವು ಮತ್ತು ಪುದಿಯೋದಿ ದೇವಸ್ಥಾನ. ಈ ದೇವಸ್ಥಾನಗಳ ಕಟ್ಟಡಗಳು ತುಂಬಾ ಹಳೆಯವುಗಳಾಗಿದ್ದು ಇವುಗಳಿಗೆ ಹೋಗಲು ಈಗ ದಾರಿ ಇಲ್ಲ. ಉತ್ಸವದ ಸಂದರ್ಭ ಪಕ್ಕದಲ್ಲೇ ಇರುವ ತೋಟದ ಮಾಲಿಕರಾದ ಶ್ರೀ ಕೋಡೀರ ಕುಟ್ಟಪ್ಪನವರು ದಾರಿ ಕೊಡುತ್ತಾರೆ.

ಈ ದೇವಸ್ಥಾನಗಳು ಮುಳುಗಿ ಹೋಗುತ್ತವೆಂಬುದು ಸುಳ್ಳು. ಕಂಪನಿ ಇವುಗಳ ರಕ್ಷಣೆಗಾಗಿ 16 ಅಡಿ ಎತ್ತರದ ಕಟ್ಟೆ ಕಟ್ಟುತ್ತಾರೆ. ಈ ಕಟ್ಟೆ ಪುದಿಯೋದಿ ದೇವಸ್ಥಾನದವರೆಗೂ ಮುಂದುವರಿಯುತ್ತದೆ ಮತ್ತು ಈ ಎರಡೂ ದೇವಾಲಯಗಳನ್ನೂ ರಕ್ಷಿಸುತ್ತದೆ. ಅಲ್ಲದೆ ದಾರಿಯಿಲ್ಲದ ಈ ದೇವಾಲಯಗಳಿಗೂ ಪರಿಸರದಲ್ಲಿ ಇಂದು ವಾಸಿಸುತ್ತಿರುವವರಿಗೂ ದಾರಿಯ ಸೌಲಭ್ಯ ಸಿಗುತ್ತದೆ.

ಈ ದೇವಾಲಯಗಳ ಬಗ್ಗೆ ಕಣ್ಣೀರು ಸುರಿಸುತ್ತಿರುವ ಈ ಭಾರತೀಯ ಜನತಾ ಪಕ್ಷದ ಜನರು ಇಂದಿನವರೆಗೂ ಅವುಗಳ ಅಭಿವೃದ್ಧಿಗಾಗಲಿ,ಅವುಗಳಿಗೆ ದಾರಿಗಾಗಲಿ ಚಿಂತಿಸಿಯೇ ಇರಲಿಲ್ಲವೆಂದು ಗಮನಿಸಬೇಕು ಆಗ ಈ ಕಪಟ ನಾಟಕವಾಡುವವರ ನಿಜಸ್ವರೂಪ ಅರಿವಾಗುತ್ತದೆ.

"ಹಿಂದೂ ಎಂದೂ ಒಂದು" ಎಂದು ಸದಾ ಬೊಬ್ಬಿಡುವ, ಭಾರತದ ಅಖಂಡತೆಯ ಬಗ್ಗೆ ಭಾಷಣ ಬಿಗಿಯುವ ಪಕ್ಷದ ಮುಖಂಡರಾದ ಶ್ರೀ ಧನಂಜಯ ಕುಮಾರ್‌ರವರು "ಬೆಂಗಳೂರಿನ ಕಂಪನಿಯೊಂದು ಕೊಡಗಿಗೆ ಬಂದು...." ಎಂದು ಹೇಳಿ ಸ್ಥಳೀಯರಲ್ಲಿ ಪ್ರಾದೇಶಿಕತೆಯನ್ನು ಕೆದಕಲು ಯತ್ನಿಸುತ್ತಿದ್ದಾರೆ.

ಇಂದು ಬೆಂಗಳೂರಿನ ಕಂಪನಿಯೊಂದು ಕೊಡಗಿನಲ್ಲಿ ವಿದ್ಯುದುತ್ಪಾದಿಸುವುದನ್ನು ವಿರೋಧಿಸುವವರು ಅಂದು ಎನ್ರಾನ್‌ನಂತಹ ಕಂಪನಿಯೊಂದು ಭಾರತವನ್ನು ಕೊಳ್ಳೆಹೊಡೆಯಲು ಪ್ರವೇಶಿಸುವುದನ್ನು ಸಮ್ಮತಿಸಿದ್ದರು. ಅಂದು ಇದೇ ಧನಂಜಯಕುಮಾರ್ ಕೇಂದ್ರದಲ್ಲಿ ಓರ್ವ ಮಂತ್ರಿಯೂ ಆಗಿದ್ದರು ಎಂದು ನೆನಪಿಸಿಕೊಳ್ಳಬೇಕು.

ಅವರ ಮುಖಂಡರು ದೆಹಲಿಯಲ್ಲಿ ಜಲವಿದ್ಯುತ್ತಿನ ಉತ್ಪಾದನೆಯನ್ನು ಬೆಂಬಲಿಸಿದರೆ ಇಲ್ಲಿ ಹಿಂಬಾಲಕರು ಅದನ್ನು ವಿರೋಧಿಸುತ್ತಿದ್ದಾರೆ.! ಎಂತಹ ಪಕ್ಷ? ಏನೀ ರಾಷ್ಟ್ರೀಯ ಪಕ್ಷ.

ಈ ರಾಷ್ಟ್ರ ಭಕ್ತ ವೇಷಧಾರಿಗಳಿಗೆ ನಮ್ಮ ದೇಶದ ಪ್ರಕೃತಿ ಸಂಪತ್ತನ್ನೇ ಉಪಯೋಗಿಸಿ ಸ್ವಾವಲಂಬನೆಯ ಆಧಾರದಲ್ಲಿ ವಿದ್ಯುದುತ್ಪಾದನೆ, ಅಭಿವೃದ್ಧಿ ಬೇಡ, ವಿದೇಶಿ ಕಂಪನಿಗಳಿಗೆ ದುಬಾರಿ ದರ ಕೊಟ್ಟು ವಿದ್ಯುತ್ ಕೊಂಡುಕೊಳ್ಳುವುದು ಬೇಕು. ಏಕೆಂದರೆ ಅವರಿಗೆ ಆಗ ಕಮಿಷನ್ ಸಿಗುತ್ತದೆ.

ಚೇಲಾವರ ವಿದ್ಯುತ್ ಯೋಜನೆಯನ್ನು ಭಾಜಪ ಮಂದಿವಿರೋಧಿಸಲು ಕಾರಣವೇನು?

ಈ ಯೋಜಿತ ಜಾಗದಿಂದ ಸುಮಾರು ಅರ್ಧ ಕಿ.ಮಿ. ದೂರದಲ್ಲಿ ಕೆನ್ ಎಂಬ ಬ್ರಿಟಿಷನೊಬ್ಬನಿಗೆ 80 ಎಕ್ರೆ ಜಮೀನಿದೆ. ಅಲ್ಲಿ ಆತ ಒಂದು ರೆಸಾರ್ಟ್ ಕಟ್ಟುವ ಯೋಜನೆ ರೂಪಿಸಿದ್ದಾನೆ. ಈ ಜಲ ವಿದ್ಯುತ್ ಸ್ಥಾವರ ಬಂದರೆ ಆತನಿಗೆ ತೊಂದರೆಯಾದೀತೆಂದು ಭಾಜಪ ಅವನ ಪರವಾಗಿ ರಂಗ ಪ್ರವೇಶ ಮಾಡಿದೆ ಎಂದು ಜನ ಮಾತನಾಡುತ್ತಾರೆ.ಇದರಿಂದ ಈ ಸ್ವದೇಶಿ ವೇಷಧಾರಿಗಳ ನಿಜ ಬಣ್ಣ ಬಯಲಾಗುತ್ತಿದೆ.

ಕಿರು ಜಲ ವಿದ್ಯುತ್ ಉತ್ಪಾದನಾಗಾರಗಳನ್ನು ಪ್ರೋತ್ಸಾಹಿಸಬೇಕೆನ್ನುವುದು ಕೇಂದ್ರ ಸರ್ಕಾರದ ಸಲಹೆ. ದೆಹಲಿಯಲ್ಲಿ ಮೌನವಾಗಿರುವ ಧನಂಜಯ ಕುಮಾರ್ ಇಲ್ಲಿ ಬಂದು ಘರ್ಜಿಸುವುದು ವಂಚನೆಯ ಪರಾಕಾಷ್ಠೆಯಾಗಿದೆ.

ಈ ಪ್ರದೇಶದ, ಈ ಜಿಲ್ಲೆಯ, ದೇಶದ ಹಿತದೃಷ್ಟಿಯಿಂದ ಅನಿವಾರ್ಯವಾಗಿರುವ ಒಂದು ಯೋಜನೆಯನ್ನು ವಿದೇಶಿಯರ ಹಿತಕ್ಕಾಗಿ ಬಲಿಕೊಡಲು ಉದ್ಯುಕ್ತರಾಗಿ ಅವರ ಸೇವಕರಾಗಿ ರಂಗಕ್ಕೆ ಇಳಿದಿರುವ ಭಾಜಪದ ನಿಜಸ್ವರೂಪವನ್ನು ಮನವರಿಕೆ ಮಾಡಿಕೊಂಡು ಆ ಯೋಜನೆಯ ಅನುಷ್ಠಾನಕ್ಕೆ ಒತ್ತಾಯಿಸಿ ದನಿ ಎತ್ತಬೇಕಿದೆ. ○

# ಕಾಂಗ್ರೆಸ್ ರಾಜಿಯೂ ಕೋಮುವಾದದ ಬೆಳವಣಿಗೆಯೂ

**ದೇಶದಲ್ಲಿ ಕೋಮುವಾದಿಗಳ ಬೆಳವಣಿಗೆ, ಅಟ್ಟಹಾಸಕ್ಕೆ ಸಿಪಿಐ(ಎಂ) ಕಾರಣ ಎಂದಿರುವ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿಯವರಿಗೆ ಇತಿಹಾಸದ ಪ್ರಜ್ಞೆಯಾಗಲೀ, ಜವಾಬ್ದಾರಿಯಾಗಲೀ ಇದೆಯೇ? ಕಾಂಗ್ರೆಸ್‌ನ ಮುಖ್ಯಪಾತ್ರದ ಬಗ್ಗೆ ಆತ್ಮಾವಲೋಕನ ಮಾಡಿಕೊಂಡಿದ್ದಾರೆಯೇ?**

ಕೋಲ್ಕತ್ತಾದ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಮುಂಬರುವ ಸ್ಥಳೀಯ ಸಂಸ್ಥೆಗಳ ಹಿನ್ನೆಲೆಯಲ್ಲಿ ಆಯೋಜಿಸಲಾಗಿದ್ದ ಕಾಂಗ್ರೆಸ್ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತಾ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರು, 14 ವರ್ಷಗಳ ಹಿಂದೆ 1989 ರಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ಸಿಪಿಐ(ಎಂ) ಕಾರಣೀಭೂತವಾಗಿದೆ ಎಂದು ದೂಷಿಸಿದ್ದಾರೆ.

ಪ್ರಸಕ್ತ ವಾಜಪೇಯಿ ಸರ್ಕಾರ ಅಧಿಕಾರಕ್ಕೆ ಬಂದಿದ್ದಾದರೂ ಹೇಗೆ ಎಂದು ನಾವು ಅವಲೋಕಿಸಿದಲ್ಲಿ ಈ ದೂಷಣೆಗೆ ಕಾರಣ ಗೊತ್ತಾಯಿತು.

1996 ರಲ್ಲಿ ಕಾಂಗ್ರೆಸ್ ಪಕ್ಷವು ಏಕಪಕ್ಷೀಯವಾಗಿ ತಾನು ಕೋಮುವಾದಿಯೇತರ ಸರ್ಕಾರ ರಚನೆಗೆ ಬೆಂಬಲಿಸುವುದಾಗಿ ಜನತೆಗೆ ಹಾಗೂ ದೇಶಕ್ಕೆ ಘೋಷಿಸಿತು. ಸಂಯುಕ್ತ ರಂಗ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡಿತು. ಆದರೆ ವಚನ ಭ್ರಷ್ಟವಾಗಿ ತಾನು ನೀಡಿದ್ದ ಬೆಂಬಲವನ್ನು ಕಾಂಗ್ರೆಸ್ ಹಿಂತೆಗೆದ ಕಾರಣ ಸಂಯುಕ್ತ ರಂಗ ಸರ್ಕಾರ ಪತನವಾಗಿ 1998'ರ ಮಧ್ಯಾವಧಿ ಚುನಾವಣೆಗಳಿಗೆ ಎಡೆಮಾಡಿಕೊಟ್ಟಿತು. ಆ ಚುನಾವಣೆಯು ಎನ್.ಡಿ.ಎ ರಚನೆಗೆ ಹಾಗೂ ವಾಜಪೇಯಿ ಸರ್ಕಾರದ ರಚನೆಗೆ ಅನುವುಗೊಳಿಸಿತು. ಗುಜ್ರಾಲ್ ನೇತೃತ್ವದ ಸಂಯುಕ್ತ ರಂಗ ಸರ್ಕಾರಕ್ಕೆ ಕಾಂಗ್ರೆಸ್ ದ್ರೋಹವೆಸಗದಿದ್ದರೆ 2001'ರವರೆಗೆ ಆ ಸರ್ಕಾರ ಅಧಿಕಾರದಲ್ಲಿರುತ್ತಿತ್ತು. ಆ ಮೂಲಕ ಜಾತ್ಯಾತೀತ ಶಕ್ತಿಗಳ ಕ್ರೋಡೀಕರಣಕ್ಕೆ ಅನುವಾಗುತ್ತಿತ್ತು. ಹಾಗೂ ಪ್ರಸ್ತುತ ಸರ್ಕಾರ ಹರಿಬಿಟ್ಟಿರುವ ಕೋಮುವಾದದಿಂದ ದೇಶವನ್ನು ಉಳಿಸಬಹುದಿತ್ತು. ಈ ಚೌಕಾಸಿ ಆಟದಲ್ಲಿ ಸ್ವತಂತ್ರ ಭಾರತದ ಇತಿಹಾಸದಲ್ಲೇ ಅತ್ಯಂತ ಕಳಪೆ ಪ್ರಾತಿನಿಧ್ಯವನ್ನು ಕಾಂಗ್ರೆಸ್ ಪಡೆಯಿತು. ಕಾಂಗ್ರೆಸ್‌ನ ನಷ್ಟವೇ ಬಿಜೆಪಿಗೆ ಗೆಲುವಾಗಿ ಪರಿಣಮಿಸಿತು. ಇದರಿಂದಾದರು ಬಿಜೆಪಿಯು ಇಂದು ಅಧಿಕಾರಿದಲ್ಲಿರಲು ಕಾರಣರಾರು ಎಂಬುದನ್ನು ಕಾಂಗ್ರೆಸ್ ಹಾಗೂ ಅದರ ಅಧ್ಯಕ್ಷರಿಗೆ ಅರಿವಾದೀತೆ?



ಗಾಜಿನ ಮನೆಯಲ್ಲಿ ನಿಂತು ಕಲ್ಲೆಸೆಯುತ್ತಿರುವ ಸೋನಿಯಾಗಾಂಧಿ

1989'ರ ಪರಿಸ್ಥಿತಿಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ಪ್ರಮುಖವಾಗಿ ಬೋಫೋರ್ಸ್ ಹಗರಣದ ಪರಿಣಾಮವಾಗಿ ಜನತೆ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಲು ಮುಂದಾದಾಗ ಸಿಪಿಐ(ಎಂ) ಪಕ್ಷವು ಬಿಜೆಪಿ ಹೊರತುಪಡಿಸಿದ ಪರ್ಯಾಯವನ್ನು ಪ್ರತಿಪಾದಿಸಿತು. ಇಂದು ಕಾಂಗ್ರೆಸ್ ಅಧ್ಯಕ್ಷರ ಮಾತುಗಳನ್ನು ತಮ್ಮ ಸಂಪಾದಕೀಯದಲ್ಲಿ ಧ್ವನಿಸುತ್ತಿರುವ ಸಂಪಾದಕರೆ ಅಂದು ಸಿಪಿಐ(ಎಂ) ಪರ್ಯಾಯ ರಚನೆಗೆ ಅಡ್ಡಿವುಂಟುಮಾಡುತ್ತಿದೆ. ಕೆಲವರಂತು ಸಿಪಿಐ(ಎಂ) ಪಕ್ಷವು ಕಾಂಗ್ರೆಸ್‌ನ ಬಿಸಿಲು ಕುದುರೆ ಎಂದೆಲ್ಲಾ ಆರೋಪಿಸಿದ್ದರು. ದುರಾದೃಷ್ಟವಶಾತ್ ಅಂದಿನ ಜಾತ್ಯಾತೀತ ಶಕ್ತಿಗಳಾದ ರಾಷ್ಟ್ರೀಯ ರಂಗ, ನಮ್ಮ ಉಪದೇಶಕ್ಕೆ ಸಮ್ಮತಿಸುವಲ್ಲಿ ವಿಫಲವಾಯಿತು. ಆದರೂ ಸಹ ಸಿಪಿಐ(ಎಂ) ಬಿಜೆಪಿಯ ವಿರುದ್ಧ ಸ್ಪರ್ಧಿಸಿತು.

ವಾಸ್ತವಾಂಶವನ್ನು ತಿರುಚುವ ಮೂಲಕ ಚುನಾವಣೆ ಲೆಕ್ಕಾಚಾರದ ಹಿತಾಸಕ್ತಿ ಕಾಪಾಡಿಕೊಳ್ಳಬಹುದೇನೋ? ಆದರೆ ರಾಷ್ಟ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಮೂಲರಚನೆಯನ್ನೇ ಅಪಾಯಕ್ಕೆಡೆ ಮಾಡಿರುವ ಕೋಮುವಾದದ ಅಪಾಯವನ್ನು ಎದುರಿಸಲು ಅಗತ್ಯವಿರುವ ಪ್ರಬುದ್ಧತೆಯಂತೂ ಕಾಣದು. ಎಡ ಪಕ್ಷಗಳ ಪ್ರಾಬಲ್ಯವಿರುವ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾದಲ್ಲಿ ಏಕೆ ಬಿಜೆಪಿಗೆ ಒಂದು ಸ್ಥಾನವು ಲಭ್ಯವಾಗಿಲ್ಲ ಎಂದು ಕಾಂಗ್ರೆಸ್ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಅಂತಹ ಸಾಧನೆಯನ್ನು ಕಾಂಗ್ರೆಸ್ ಅಧಿಕಾರದಲ್ಲಿರುವ ಯಾವುದಾದರೂ ಒಂದು ರಾಜ್ಯದಲ್ಲಿಯಾದರೂ ಅದು ತೋರಬಹುದೆ?

ಕೋಮುವಾದಿ ಶಕ್ತಿಗಳೊಂದಿಗೆ ರಾಜಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಮೊದಲು ತನ್ನ ಮನೆಯನ್ನು ಸರಿಪಡಿಸಿಕೊಳ್ಳಬೇಕಿದೆ. ಬಿಜೆಪಿಯ ಪೂರ್ವಾವತಾರವಾದ ಜನ ಸಂಘದ ಸಂಸ್ಥಾಪಕರಾದ ಶಾಮಾ ಪ್ರಸಾದ್ ಮುಖರ್ಜಿ ನೆಹರು ಸಚಿವ ಸಂಪುಟದ ಸದಸ್ಯರಾಗಿದ್ದರು. ಉತ್ತರಪ್ರದೇಶದ ಪ್ರಥಮ ಕಾಂಗ್ರೆಸ್ ಮುಖ್ಯಮಂತ್ರಿಗಳಾಗಿದ್ದ ಗೋವಿಂದ ವಲ್ಲಭ್ ಪಂತ್ ಸಾರಥ್ಯದಲ್ಲೇ ಬಾಬ್ರಿ ಮಸೀದಿ ಒಳಗೆ ವಿಗ್ರಹಗಳನ್ನು ಇಡುವ ಮೂಲಕ ಅಯೋಧ್ಯೆ ವಿವಾದ ಸೃಷ್ಟಿಯಾದದ್ದು. ಅಲ್ಲಿಂದಾಚೆಗೆ ಅಯೋಧ್ಯೆಯಲ್ಲಿ ರಾಜೀವ್‌ಗಾಂಧಿ ಪ್ರಧಾನ ಮಂತ್ರಿಗಳಾಗಿದ್ದಾಗ ನಡೆಸಲಾದ ಶಿಲಾನ್ಯಾಸದಿಂದ ಇತ್ತೀಚಿನ ಗುಜರಾತ್ ಚುನಾವಣಾ ಪ್ರಚಾರದವರೆಗೆ ಕಾಂಗ್ರೆಸ್‌ನ ಚುನಾವಣೆ ತಂತ್ರ ಕೋಮುವಾದದ ಕುರಿತಂತೆ ರಾಜಿ ಮಾಡಿಕೊಳ್ಳುವುದೇ ಆಗಿದೆ. ಇದ್ದಕ್ಕಿದ್ದಂತೆ 'ಗೋಮೂತ್ರ'ದ ಪವಿತ್ರತೆಯ ಪರಿಜ್ಞಾನ ಪಡೆದುಕೊಂಡಿರುವ ಮಧ್ಯಪ್ರದೇಶದ ಕಾಂಗ್ರೆಸ್ ಮುಖ್ಯಮಂತ್ರಿ ದಿಗ್ವಿಜಯಸಿಂಗ್ ಈ ತಂತ್ರವನ್ನೇ ಮುಂದುವರಿಸಿರುವುದು.

ಭಾರತವು ಆಧುನಿಕ ಗಣರಾಜ್ಯವಾಗಿ ರೂಪಗೊಳ್ಳಲು ಸಾಧ್ಯವಾದುದು ಕೋಮುವಾದಿ ಶಕ್ತಿಗಳನ್ನು ನೇರವಾಗಿ ಎದುರಿಸಿದಾಗಲೆ. ವಿಭಜನೆ ಹಾಗೂ ಕೋಮುವಾದಿಗಳು ಮಹಾತ್ಮಗಾಂಧಿಯ ಹತ್ಯೆ ಮಾಡಿದಾಗ ಸಹ, ಭಾರತ ಗಣರಾಜ್ಯದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ಸಂರಕ್ಷಿಸಲು ಹಾಗೂ ಕ್ರೋಡೀಕರಿಸಲು ಜನತೆ ಹಾಗೂ ರಾಷ್ಟ್ರ ದೃಢವಾಗಿ ನಿಂತಿತು.

ಕೋಮುವಾದಿ ಶಕ್ತಿಗಳು ಈ ದೇಶದಲ್ಲಿ ಬೆಳೆಯಲು ಸಾಧ್ಯವಾದುದು ಕಾಂಗ್ರೆಸ್‌ನ ರಾಜಿಯ ಪರಿಣಾಮವಾಗಿ, ಈ ಕುರಿತು ಆ ಪಕ್ಷ ತನ್ನ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಹಾಗಾಗಿ ಕಾಂಗ್ರೆಸ್‌ನ ಅಧ್ಯಕ್ಷರು "ಗಾಜಿನ ಮನೆಯಲ್ಲಿರುವವರು ಕಲ್ಲೆಸೆಯಬಾರದು" ಎಂಬ ಹಳೆಯ ಇಂಗ್ಲಿಷ್ ಗಾದೆಯನ್ನು ಮರೆತಿರುವಂತಿದೆ, ನೆನಪಿಸಿಕೊಂಡು ಎಚ್ಚೆತ್ತುಕೊಂಡರೆ ಉತ್ತಮ.

# ಯುದ್ಧ ಸಂತ್ರಸ್ತ ಇರಾಕಿ ಜನತೆಗೆ ಔಷಧ ಕಳಿಸಿ ಪ್ರಾಣ ಉಳಿಸಿ



21ನೇ ಶತಮಾನದ ಹಿಟ್ಲರ್ ಎಂದೇ ಖ್ಯಾತಿಯಾಗಿರುವ ಬುಷ್ ನಡೆಸಿದ ಭಯಾನಕ ಯುದ್ಧದಿಂದಾಗಿ ಇರಾಕ್‌ನ ಜನತೆ ತಲ್ಲಣಗೊಂಡಿದ್ದಾರೆ. ಸಾವಿರಾರು ಜನ ಸತ್ತಿದ್ದು ಲಕ್ಷಾಂತರ ಜನ ಗಾಯಗೊಂಡಿದ್ದು ಸರಿಯಾದ ಔಷಧೋಪಚಾರವೂ ಸಿಗದಂತಾಗಿದೆ. ಜನ ನಾಶಕ ಬಾಂಬ್ ಎಂದೇ ಪ್ರಖ್ಯಾತವಾಗುವ ಕ್ಲಸ್ಟರ್ ಬಾಂಬುಗಳು(ಸ್ಫೋಟಗೊಂಡೊಡನೆ ಲೋಹದ ಗೋಲಿಗಳು ದಿಕ್ಕಾಪಾಲಾಗಿ ಜನರ ಮೇಲೆ ಬಿದ್ದು ಧ್ವಂಸಗೊಳಿಸುತ್ತವೆ) ಸೈನಿಕರನ್ನಲ್ಲದೆ, ನಾಗರಿಕರನ್ನು ಬಲಿ ತೆಗೆದುಕೊಂಡಿದೆ.

ಗಾಯಗೊಂಡವರಲ್ಲಿ ಅಸಹಾಯಕ ಮಹಿಳೆಯರು ಮತ್ತು ಮುಗ್ಧ ಮಕ್ಕಳೇ ಹೆಚ್ಚು. 1991 ರಲ್ಲಿ ನಡೆದ ಯುದ್ಧದ ನಂತರ ಹೇರಿದ ದಿಗ್ಬಂಧನದಿಂದ ಔಷಧವಿಲ್ಲದೆ, ಆಹಾರ ಸಿಗದೆ 8 ಲಕ್ಷಕ್ಕೂ ಹೆಚ್ಚು ಮಕ್ಕಳು ಸತ್ತಿದ್ದಾರೆ ಎಂದು ಅಂದಾಜು ಮಾಡಲಾಗಿದೆ.

12 ವರ್ಷಗಳ ನಂತರ ಇನ್ನೊಮ್ಮೆ ಬರ್ಬರ ಕೃತ್ಯ ನಡೆದಿದೆ.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಇರಾಕಿನ ಜನತೆಯ ನೆರವಿಗೆ ಧಾವಿಸುವುದು ಅತಿ ಅಗತ್ಯಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಹೇಳಿದೆ. ಪಾಲಿಟ್‌ಬ್ಯೂರೋ ತನ್ನ ಹೇಳಿಕೆಯಲ್ಲಿ ಭಾರತದ ಜನತೆಯಿಂದು ಔಷಧ ಮತ್ತು ಹಣ ಸಂಗ್ರಹಿಸಿ ಕಳುಹಿಸಬೇಕೆಂದು ಕರೆ ನೀಡಿದೆ.

ಪಕ್ಷದ ಎಲ್ಲಾ ಘಟಕಗಳು, ನಾಗರಿಕರು ಔಷಧ ಸಂಗ್ರಹಿಸಬೇಕು ಎಂದು ಪಾಲಿಟ್‌ಬ್ಯೂರೋ ತಿಳಿಸಿದ್ದು, ಔಷಧ ಸಂಗ್ರಹಿಸಲು ಸಾಧ್ಯವಾಗದಿದ್ದಲ್ಲಿ ಹಣವನ್ನು ಸಂಗ್ರಹಿಸಬೇಕೆಂದು ತಿಳಿಸಿದೆ.

ಔಷಧ ಮತ್ತು ಹಣವನ್ನು ನೇರವಾಗಿ ಡಿ.ಡಿ. ಮೂಲಕ ಈ ಕೆಳಗಿನ ವಿಳಾಸಕ್ಕೆ (ನವದೆಹಲಿಗೆ) ಕಳುಹಿಸುವುದು, ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ಕಛೇರಿಗೆ ಕಳಿಸಿದಲ್ಲಿ ಅಲ್ಲಿಂದ ದೆಹಲಿಗೆ ಕಳುಹಿಸುವ ವ್ಯವಸ್ಥೆ ಮಾಡಲಾಗುವುದು.

ನವದೆಹಲಿ ವಿಳಾಸ:
Communist Party of India (Marxist)
A.K.G. Bhavan,
27-28, Bhai Veer Singh Marg
Gole Market
NEW DELHI - 110001
Ph : 011/23747435, 23747436

# ಔಷಧಿ ಹಗರಣ ಮ

**ಸಾವಿರ ಕೋಟಿ ರೂ.ಗಳು ಖೋಟಾ ಛಾಪಾ ಕಾಗದದ ಹಗರಣ, ಪುರಸಭೆಗಳಲ್ಲಿ 250 ಕೋಟಿಗಳ ಹಗರಣದಂತಹ ಹಗರಣಗಳನ್ನು ಗರಿಗೇರಿಸಿಕೊಂಡಿರುವ ಕೃಷ್ಣರವರ ಸರ್ಕಾರದಲ್ಲಿ ಔಷಧಿಯ ಭಾರೀ ಹಗರಣವೊಂದು ಹೊರಬಂದಿದೆ. ಲೋಕಾಯುಕ್ತರ ಕ್ರಮವನ್ನು ಹಾಗೂ ಹಗರಣದ ಅಸ್ತಿತ್ವವನ್ನೇ ಪ್ರಶ್ನೆ ಮಾಡಿರುವ ಹಲವರು ಇದನ್ನು ಮುಚ್ಚಿಹಾಕಲು, ನಿಜವಾದ ಅಪರಾಧಿಗಳಿಗೆ ಶಿಕ್ಷೆಯಾಗದಂತೆ ತಡೆಯಲು ಹೊರಟಿದ್ದಾರೆ. ಜನ ಜೀವನ್ಮರಣದ ಈ ಪ್ರಶ್ನೆಗೆ ಸರಿಯಾಗಿ ಸ್ಪಂದಿಸದೇ ಬಿಜೆಪಿಯಾದಿಯಾಗಿ ವಿರೋಧ ಪಕ್ಷಗಳು ಸರ್ಕಾರದೊಂದಿಗೆ ಕೈಜೋಡಿಸುತ್ತಿವೆ! ಇದರ ಗುಟ್ಟೇನು? ಹಗರಣದ ಆಳವೇನು? ಎಂಬ ಲೇಖನವಿಲ್ಲಿದೆ.**


ಭಾರತ ಅಭಿವೃದ್ಧಿಶೀಲ ರಾಷ್ಟ್ರ. ಬಡತನ ಅನಕ್ಷರತೆಯು ಪ್ರಮಾಣ ಅಪಾರವಾಗಿದೆ. ಜನಸಾಮಾನ್ಯರ ಆರೋಗ್ಯ ರಕ್ಷಣೆ, ಅಭಿವೃದ್ಧಿ ಸರಕಾರದ ಜವಾಬ್ದಾರಿಯಾಗುತ್ತದೆ. ಜನಾರೋಗ್ಯ ಕಾಪಾಡಲು ವೈದ್ಯಕೀಯ ಕ್ಷೇತ್ರ ಜವಾಬ್ದಾರಿಯಾಗುತ್ತದೆ. ಜನಾರೋಗ್ಯ ಕಾಪಾಡಲು ವೈದ್ಯಕೀಯ ಕ್ಷೇತ್ರ ಔಷಧಿ ನಿಯಂತ್ರಣ, ಔಷಧಿ ಉದ್ಯಮ ಜವಾಬ್ದಾರಿ ವಹಿಸಬೇಕಾಗುತ್ತದೆ. ಇಂದು ಮುಖ್ಯವಾಗಿ ಔಷಧಿ ಕ್ಷೇತ್ರದಲ್ಲಿಯ ಹಗರಣ ಬೆಳಕಿಗೆ ಬಂದಿದೆ. ಈ ಹಗರಣದ ಏಕೆ ಎಂಬುದನ್ನು ಚರ್ಚಿಸೋಣ.

ಆಧುನಿಕ ಔಷಧಿಗಳು ಆರೋಗ್ಯ ಸಾಧನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ನಮ್ಮ ಅಗತ್ಯತೆಗೆ ಬೇಕಾಗುವ ಸುಮಾರು ಎಲ್ಲ ಔಷಧಿಗಳು ನಮ್ಮಲ್ಲಿ ತಯಾರಾಗುತ್ತವೆ. ಇತರೆ ದೇಶಕ್ಕೆ ಹೋಲಿಸಿದರೆ ಕಡಿಮೆ ಬೆಲೆಯಲ್ಲಿಯೆ ದೊರಕುತ್ತವೆ. ಇಂದು ಔಷದಿ ಉದ್ಯಮ ಅದ್ಭುತ ಪ್ರಗತಿ ಸಾಧಿಸಿದೆ. ನಾವು ಔಷಧಿ ಉತ್ಪಾದನೆಯಲ್ಲಿ ಸ್ವಾವಲಂಭನೆಯನ್ನು ಸಾಧಿಸಿದ್ದೇವೆ. ಆದರೂ ಔಷಧಿ ಕಂಪನಿಗಳು ಅಗತ್ಯ ಔಷಧಿಗಳ ಬದಲು ಅನಗತ್ಯ ಔಷಧಿ ತಯಾರಿಸಲು ಮುಂದಾಗಿವೆ. ಔಷಧಿ ಬೆಲೆಗಳು ದಿನೇ ದಿನೇ ಹೆಚ್ಚುತ್ತಲಿವೆ. ಅದಕ್ಕೆ ಹಲವಾರು ಕಾರಣಗಳಿವೆ. ಒಂದು ಮುಖ್ಯ ಕಾರಣವೆಂದರೆ ಔಷಧಿ ಕಂಪನಿಗಳು ಸರಕಾರ ನಿಗದಿಪಡಿಸಿದ ಬೆಲೆಗಿಂತ ಹೆಚ್ಚು ಬೆಲೆಯಲ್ಲಿ ಔಷಧಿಗಳನ್ನು ಮಾರುತ್ತಲಿವೆ. ಉದಾ ; ಅಮಾಕ್ಸಿಸಿಲ್ ಕ್ಯಾಪ್ಸೂಲಿಗೆ 3 ರೂ ಬೆಲೆ ನಿಗದಿಪಡಿಸಿದರೂ ರೂ. 3.25 ಕ್ಕೆ ಮಾರಾಟಮಾಡುತ್ತಿವೆ. ಇದರಿಂದಾಗಿ ಜನರು ಬಲಿಯಾಗುತ್ತಿದ್ದಾರೆ. ಔಷಧಿನಿಯಂತ್ರಣ ಈ ಬೆಳವಣಿಗೆಯನ್ನು ತಡೆಯಬೇಕಾಗಿದೆ.

ಔಷಧಿ ಕಂಪನಿಗಳು ಹೆಚ್ಚು ಬೆಲೆ ಪಡೆದಲ್ಲಿ ಅದನ್ನು ಸರ್ಕಾರ ವಾಪಸ್ಸು ಪಡೆಯುವ ಸೌಲಭ್ಯವೂ ಇದೆ. ಆದರೆ ಜನಸಾಮಾನ್ಯರು ಹೆಚ್ಚು ಬೆಲೆ ಕೊಟ್ಟು ಕೊಂಡುಕೊಂಡ ಔಷಧಿಗೆ ಕೊಟ್ಟ ಹೆಚ್ಚು ಬೆಲೆಯನ್ನು ವಾಪಸ್ಸು ಪಡೆಯುವ ಸೌಲಭ್ಯವಿಲ್ಲ. ಆದ್ದರಿಂದ ಜನಸಾಮಾನ್ಯರು ವಂಚಿತರಾಗುತ್ತಾರೆ. ವೈದ್ಯಕೀಯ ಕ್ಷೇತ್ರ ಕೇವಲ ಚಿಕಿತ್ಸಾ ಕ್ರಮಗಳ ಬಗ್ಗೆ ಜಾಗರೂಕತೆ ವಹಿಸುತ್ತದೆ. ಇಂದು ವೈದ್ಯರು ಔಷಧಿ ಉದ್ಯಮವು ತಯಾರಿಸುವ ಎಲ್ಲಾ ಔಷದಿಗಳಿಗೂ ಪ್ರೋತ್ಸಾಹ ಕೊಡುತ್ತಾ ಬಂದು ಅನೇಕ ಅನಗತ್ಯ ಔಷಧಿಗಳನ್ನು ಉಪಯೋಗಿಸುತ್ತಿದ್ದಾರೆ. ವೈದ್ಯರಿಗೆ ಔಷದಿ ಗುಣಮಟ್ಟದ ಬಗ್ಗೆ ಮಾಹಿತಿ ಇರುವುದಿಲ್ಲ ಔಷಧಿ ಕಳಪೆ ಗುಣಮಟ್ಟದ್ದಾದರೂ ಅದನ್ನ ಗುರುತಿಸಲು ಸಾಧ್ಯವಾಗುವುದಿಲ್ಲ, ಇದರಿಂದಾಗ ಔಷಧಿ ದುರಂತಗಳು (ಕೋಲಾರದ ಪೆರಿಸಂದ್ರಾ) ಸಂಭವಿಸುವಂತಾಗಿದೆ.

**ಜನರ ಅಸಹಾಯಕತೆ**

ಔಷಧಿ ಉದ್ಯಮ ಕಡಿಮೆ ಪ್ರಮಾಣದ ಔಷಧಿ ಉತ್ಪಾದಿಸಿ 250 ಮಿ.ಗ್ರಾ. ಕ್ಯಾಪ್ಸೂಲಿನಲ್ಲಿ 125 ಮಿ.ಗ್ರಾಂ. ಔಷದಿ ಪೂರೈಕೆ ಮಾರಾಟ ಮಾಡುತ್ತಿದ್ದರೂ, ವೈದ್ಯರಿಗೆ ಅದು ತಿಳಿದುಬರುವ ಸಾಧ್ಯತೆ ಕಡಿಮೆ. ಚಿಕಿತ್ಸೆ ಪರಿಣಾಮಕಾರಿಯಾಗದಿದ್ದಲ್ಲಿ, ಯಾವುದೇ ದುರಂತವಾದಲ್ಲಿ ಅದು ಔಷಧಿ ಅಡ್ಡ ಪರಿಣಾಮದಿಂದ ಎಂದು ನಂಬಿ ಈ ವಿಷಯವನ್ನೆ ತಳ್ಳಿಹಾಕುವ ಸಾಧ್ಯತೆಗಳಿರುತ್ತವೆ. ಇನ್ನು ಜನಸಾಮಾನ್ಯರ ವಿಷಯ ಔಷಧಿಗಳನ್ನು ವೈದ್ಯರೇ ತೀರ್ಮಾನಿಸುವುದರಿಂದ ರೋಗ ತೊಂದರೆ ಹೇಳಿ ಪರೀಕ್ಷೆಗೆ ಸಹಕರಿಸುವುದನ್ನು ಬಿಟ್ಟರೆ ರೋಗಿಗಳಿಗೆ ಚಿಕಿತ್ಸೆ ಮೇಲೆ ಹತೋಟಿ ಇಲ್ಲ. ರೋಗ ಏನು ಚಿಕಿತ್ಸೆಯಾವುದೆಂದು ಕೇಳುವ ಹಕ್ಕಿದ್ದರು, ಸಾಮಾನ್ಯವಾಗಿ ರೋಗಿಗಳು ಈ ವಿಷಯದಲ್ಲಿ ತಲೆ ಹಾಕುವುದಿಲ್ಲ. ಅನಕ್ಷರತೆ, ಬಡತನ ಮುಂತಾದ ಸಾಮಾಜಿಕ ಒತ್ತಡಗಳು ಜನಸಾಮಾನ್ಯರನ್ನು ಮೂಕ ಪ್ರೇಕ್ಷಕರನ್ನಾಗಿ ಮಾಡಿದೆ.



ಇದರಿಂದಾಗಿ ಔಷದಿ ನಿಯಂತ್ರಣ ಜನಾರೋಗ್ಯ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ. ಅಗತ್ಯ ಹಾಗೂ ಗುಣಮಟ್ಟದ ಔಷದಿಗಳನ್ನು ನೊಂದಣಿಮಾಡಿ ಜನರಿಗೆ ದೊರಕಿಸಿಕೊಡುವುದು, ಕಳಪೆ ಗುಣಮಟ್ಟದ ಔಷಧಿಗಳನ್ನು ಗುರುತಿಸಿ ನಿಷೇಧಿಸುವುದು ಔಷಧಿ ಬೆಲೆಗಳ ಬಗ್ಗೆ ಜಾಗರೂಕತೆವಹಿಸುವುದು, ಔಷಧಿ ನಿಯಮಗಳನ್ನು ಉಲ್ಲಂಘಿಸಿದ ಕಂಪನಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದು, ಔಷದಿ ಪರಿಸ್ಥಿತಿಯನ್ನು ಹಿಡಿತದಲ್ಲಿಡಲು ಅಗತ್ಯ ಕಾನೂನು ಬೇಕಾದಲ್ಲಿ ಅದನ್ನು ರೂಪಿಸಲು ಸಹಾಯ ಮಾಡುವುದು ಔಷಧಿ ನಿಯಂತ್ರಣದ ಕನಿಷ್ಠ ಹಾಗೂ ಮುಖ್ಯ ಕರ್ತವ್ಯವಾಗಬೇಕು. ಆದರೆ ಔಷಧಿ ನಿಯಂತ್ರಣದ ನಿರ್ಲಕ್ಷತೆಯಿಂದ ಅನಗತ್ಯ ಔಷಧಿಗಳು ದೊರಕುವಿಕೆ, ಔಷಧಿ ಅಂಗಡಿಗಳಲ್ಲಿ ಆದೇಶ ಚೀಟಿ ಇಲ್ಲದೆ ಎಲ್ಲ ಔಷದಿಗಳ ದೊರಕುವಿಕೆ ಔಷಧಿ ಅಂಗಡಿಗಳಲ್ಲಿ ತಜ್ಞ ಔಷದಿ ವ್ಯಾಪಾರಿ ಇಲ್ಲದಿರುವುದು, ಔಷಧಿ ಕಂಪನಿಗಳು ಔಷಧಿಗಳ ಮೇಲೆ ಹೆಚ್ಚು ಬೆಲೆ ಪಡೆಯುತ್ತಿರುವುದು ಔಷಧಿ ಅಂಗಡಿಗಳು ನಮೂದಿಸಿದ ಪ್ರಮಾಣಕ್ಕಿಂತ ಕಡಿಮೆ ಪ್ರಮಾಣದ ಔಷಧಿಯನ್ನು ತುಂಬಿ ಹೆಚ್ಚು ಬೆಲೆಯಲ್ಲಿ ಔಷದಿಯನ್ನು ಮಾರುವುದು ಮುಂತಾದವುಗಳು ಕಂಡುಬಂದಿದೆ. **ಇತ್ತೀಚಿಗೆ ಔಷಧಿ ನಿಯಂತ್ರಣ ನಿರ್ಲಕ್ಷತೆಯಿಂದ ಎರಡು ಔಷಧಿ ಬೆರಕೆಯಾದ ಔಷಧಿ ಉಪಯೋಗದಿಂದ ದುರಂತ ಸಂಭವಿಸುತ್ತಿರುವುದೂ ಬೆಳಕಿಗೆ ಬಂದಿದೆ.** ಔಷಧಿ ನಿಯಂತ್ರಣದ ಭ್ರಷ್ಟಾಚಾರದ ಮಾತು, ಸಣ್ಣ ವ್ಯಾಪಾರಿಗಳಿಗೆ ಕಿರುಕುಳ, ಅನಗತ್ಯ ದಾಳಿ ಮುಂದಾದವುಗಳು ಔಷಧಿ ನಿಯಂತ್ರಣದ ದಿನನಿತ್ಯದ ಮಾತುಗಳಾಗಿವೆ.

**ವೇದಿಕೆಯ ದೂರು - ತನಿಖೆಗೆ ಚಾಲನೆ**

ಔಷಧಿ ಕ್ರಿಯಾವೇದಿಕೆ (Drug action Forum, Karnataka) ಸುಮಾರು ಎರಡು ದಶಕಗಳಿಂದ ಜನರಿಗೆ ಸಮಂಜಸ ಔಷಧಿ ಉಪಯೋಗದ ಬಗ್ಗೆ ಹಲವಾರು ವಿಷಯಗಳನ್ನ ತಿಳುಸುತ್ತಾ ಬಂದಿದೆ. ಜನಪರ ಔಷಧಿಯನ್ನು ಬೆಂಗಳೂರಿನಲ್ಲಿ ಅಕ್ರಮವಾಗಿ ಉಪಯೋಗಿಸುತ್ತಿರುವ ಸಮಯದಲ್ಲಿ ವೇದಿಕೆ ಔಷದಿ ನಿಯಂತ್ರಣಕ್ಕೆ ದೂರು ಕೊಡಲು ಹೋದಾಗ ದೂರು ಸ್ವೀಕರಿಸುವ ಮಾತಿರಲಿ "ತಾವು ಅಸಹಾಯಕರು" ಎಂದು ಹೇಳಿದ ಔಷಧಿ ನಿಯಂತ್ರಣದ ಅಧಿಕಾರಿಗಳು ಅಂದೇ ವೇದಿಕೆಗೆ ಔಷಧಿ ನಿಯಂತ್ರಣದ ಅವ್ಯವಹಾರವನ್ನು ಸೂಕ್ಷ್ಮವಾಗಿ ಮನವರಿಕೆ ಮಾಡಿಕೊಟ್ಟಿದ್ದರೆಂದು ಹೇಳಲಾಗಿದೆ. ಇನ್ನೊಮ್ಮೆ ಕೊಮ್ಸಾಟ್ ದುರಂತದ ವಿಷಯಕ್ಕೆ ಸಂಬಂಧಿಸಿದ ವಿಷಯವನ್ನು ಹೇಳಲು ಔಷಧಿ ನಿಯಂತ್ರಣ ಸಂಪೂರ್ಣ ನಿರಾಕರಿಸಿದ್ದು ವೇದಿಕೆಗೆ ಆತಂಕ ಉಂಟುಮಾಡಿತ್ತು.


ಇತ್ತೀಚಿಗಿನ ದಿನಗಳಲ್ಲಿ ರಾಜ್ಯದಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿರುವ ಲೋಕಾಯುಕ್ತರಿಗೆ ದೂರು ಕೊಡಬೇಕೆಂದು

## ಏನಿದು ಹಗರಣ?
## 300 ಕೋಟಿ ಹಗರಣ

ಮೊದಲೇ ಹೇಳದಂತೆ ಇದು 300 ಕೋಟಿಗಿಂತ ಮೀರಿದ ಹಗರಣ ಔಷಧಿ ಕಂಪನಿಗಳು ನಿಗದಿತ ಬೆಲೆಗಿಂತ ಹೆಚ್ಚು ಹಣವನ್ನು ಸ್ವೀಕರಿಸಿವೆ. ಈ ಹಣವನ್ನು ಸರಕಾರ ವಾಪಸ್ಸು ಪಡೆಯಬೇಕಾಗಿದೆ. ಅನೇಕ ಕಂಪನಿಗಳು ಇಂಥಹ ಕೆಲಸಗಳಲ್ಲಿ ತೊಡಗಿದ್ದು ಔಷಧಿ ನಿಯಂತ್ರಣ ಕೇವಲ ಕೆಲವನ್ನೇ ಹೆಸರಿಸಿದ್ದು ಕ್ರಮತೆಗೆದುಕೊಳ್ಳಲು ವಿಳಂಬ ಮಾಡಿದೆ. ಉದಾ : ಸಿಪ್ಲಾ ಕಂಪನಿ 250 ಕೋಟಿ ರೂ ನಷ್ಟ ಹಣದ ಅವ್ಯವಹಾರದಲ್ಲಿ ತೊಡಗಿದ್ದು ಈಗಾಗಲೇ ಕೋರ್ಟಿಗೆ ಮೊರೆಹೋಗಿ ತಡೆಯಾಜ್ಞೆ ತಂದಿದೆ. ಇದಕ್ಕೆ ಕಾರಣ ನಿಯಂತ್ರಣ ವಿಳಂಬಮಾಡಿದ್ದರಿಂದ. ರಾನ್‌ಬಾಕ್ಸಿ ಕಂಪನಿಯು 250 ಮಿ. ಗ್ರಾಂ ಸ್ಪೋಡ್ಸ್ ಕ್ಯಾಪ್ಸೂಲಿನಲ್ಲಿ ಕೇವಲ 125 ಮಿ. ಗ್ರಾಂ. ಪೂರೈಸಿ 250 ಮಿ. ಗ್ರಾಂ. ಕ್ಯಾಪ್ಸೂಲಿನ ಹಣವನ್ನು ಪಡೆದಿವೆ. ಅಂದರೆ ಶೇ. 200 ಕ್ಕಿಂತ ಹೆಚ್ಚುಲಾಭ. ಈ ಲಾಭ ಜನಸಾಮಾನ್ಯರ ನಷ್ಟವೆಂಬುದನ್ನು ಮರೆಯುವಂತಿಲ್ಲ. ಇಂತಹ ವಿಷಯಗಳಲ್ಲಿ ಔಷಧಿ ನಿಯಂತ್ರಣ ಔಷಧಿ ಕಂಪನಿಗಳೊಂದಿಗೆ ಶಾಮೀಲಾಗಿರುವುದರಿಂದ ಈ ಹಗರಣ ಉಂಟಾಗಿದೆ. ಇನ್ನೂ ಅನೇಕ ಕಂಪನಿಗಳು ಈ ತರಹದ ಹಗರಣದಲ್ಲಿ ತೊಡಗಿವೆ. ಲೋಕಾಯುಕ್ತರ ಅಂತಿಮ ವರದಿಗೆ ಕಾಯಬೇಕಾಗಿದೆ.

ಕಳೆದ ವರ್ಷದಲ್ಲಿ ಔಷಧಿ ತಯಾರಿಕೆ ಕಂಪನಿಗಳು ನಿಗದಿತ ಬೆಲೆಗಿಂತ ಅಧಿಕ ಲಾಭ ಪಡೆದಿವೆ ಔಷಧಿ ನಿಯಂತ್ರಣದ ಮೌನ, ಹಗರಣವನ್ನು ಎತ್ತಿತೋರಿಸುತ್ತದೆ. ಎರಡು ದಶಕದ ಹಿಂದೆ ಈ ತರಹದ ಹಗರಣವಾಗಿದ್ದು ಅದು ಬೆಳಕಿಗೆ ಬಂದರೂ ಮುಚ್ಚಿಹೋದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

## ಹಗರಣ ಎತ್ತಿ ತೋರಿದ ಡ್ರಗ್ ಆಕ್ಷನ್ ಫೋರಂ



ಇಂತಹ ಭಾರಿ ಹಗರಣವೊಂದು ಬೆಳಕಿಗೆ ಬಂದದ್ದಾದರೂ ಹೇಗೆ? ಮಾಲಕರೆಡ್ಡಿಯವರಿಗೆ ಆಗದವರು ಮಾಡಿದ್ದಾರೆ ಎಂದು 'ಪಿತೂರಿ' ರಾಜಕೀಯ ಶೋಧನೆ ಕಂಡವರ ಕೆಲವರು! ಅದು ನಿಜವೇ? ಇಂತಹ ಹಗರಣ ಹೊರಬಂದಾಗ ಅಂತಹ ಹೇಳಿಕೆಗಳು ಸತ್ಯವನ್ನು ಹೂತುಬಿಡಬಹುದೆಂದು ಲೆಕ್ಕ ಹಾಕಿದರೆ ಹೇಗೆ?

ನೋಡಿ! ಔಷಧ ನಿಯಂತ್ರಣ ಮಂಡಳಿಯಲ್ಲಿ, ಆರೋಗ್ಯ ಇಲಾಖೆಯಲ್ಲಿ ಇಂತಹ ಹತ್ತಾರು ಪ್ರಕರಣಗಳು ತಾಂಡವವಾಡುತ್ತಿರುವುದನ್ನು ಲೋಕಾಯುಕ್ತರ ಗಮನಕ್ಕೆ ತಂದವರು 'ಡ್ರಗ್ ಆಕ್ಷನ್ ಫೋರಂ! (ಔಷಧ ಕ್ರಿಯಾ ಸಮಿತಿ) ಇದು ಜನ ಕಾಳಜಿಯ ವೈದ್ಯರು-ವಿಜ್ಞಾನಿಗಳೂ, ವಕೀಲರೂ ಇರುವ ವೇದಿಕೆ. 1983 ರಿಂದಲೂ ಹತ್ತಾರು ಕಾರ್ಯಕ್ರಮಗಳ ಮೂಲಕ 'ಔಷಧಿಗಳು'ಜನರ ಆರೋಗ್ಯ ಕುರಿತು ಅಗತ್ಯ ಮಾಹಿತಿಗಳು ಹಾಗೂ ವೈದ್ಯಕೀಯ ವಂಚನೆಗಳ ಬಗ್ಗೆ ಎಚ್ಚ ಮೂಡಿಸುತ್ತಿರುವ ಸಂಸ್ಥೆ. "ಸಹಜವಾಗಿಯೇ ಇಲಾಖೆಯಲ್ಲಿ ಇಷ್ಟೊಂದು ಮೋಸ ನಡೆದಿರುವಾಗ ಅದನ್ನು ಲೋಕಾಯುಕ್ತರಿಗೆ ದೂರು ನೀಡಬೇಕಾಯಿತು. ಮಾತುಗಳೇನೆ ಇರಲಿ ವಾಸ್ತವದಲ್ಲಿ ಏನಿದೆ ಎಂದು ಆಳ ತನಿಖೆಯಾಗಬೇಕು. ತಪ್ಪಿತಸ್ತರಿಗೆ ಶಿಕ್ಷೆಯಾಗಿ, ಅವ್ಯವಹಾರ ಸರಿಯಾಗಬೇಕು. ಜನರ ಜೀವ, ಹಣ ಉಳಿಯಬೇಕು" ಎಂದು ಆಗ್ರಹಿಸುತ್ತಾರೆ ವೇದಿಕೆ ಕಾರ್ಯದರ್ಶಿ ಡಾ. ಪ್ರಕಾಶ್ ಸಿ.ರಾವ್. ಇಂತಹ ಜನಪರ ವೇದಿಕೆಗೆ ಅಭಿನಂದನೆಗಳು. ಎಲ್ಲ ಬೆಂಬಲ ನಿಮಗಿದೆ - ದೃಢ ಹೆಜ್ಜೆ ಇರಲಿ ಎಂಬ ಹಾರೈಕೆ.

# ...ಾಕುವ ಹುನ್ನಾರ

...ತೀರ್ಮಾನಿಸಿ ಔಷದಿ ಗುಣಮಟ್ಟ ...ದಲ್ಲಿ ಔಷಧಿ ನಂಜಿನ ಬಗ್ಗೆ ಮುನ್ನೆಚ್ಚರಿಕೆ ...ಲ್ಲಿ ಪಾರದರ್ಶಿಕತೆ ಇಲ್ಲದಿರುವ ಬಗ್ಗೆ ...ದೂರನ್ನು ಕೊಡಲಾಯಿತು. ಇದರ ...ುವೇ ಕರ್ನಾಟಕದಲ್ಲಿ ಔಷಧಿ ಹಗರಣ ...ದ ವರದಿ ಪತ್ರಿಕೆಗಳಲ್ಲಿ ಬಂದಿರುವುದು



...ಯುಕ್ತ ಈ ಔಷಧಿ ಹಗರಣವನ್ನು ...ಡಿರುವುದು ಶ್ಲಾಘನೀಯ.

...ವಿಷಯದ ವಿವರಗಳು ಪತ್ರಿಕೆಗಳಲ್ಲಿ ...ದ್ದತೆ, ಸರಕಾರ, ಮಂತ್ರಿಗಳು, ...ಗಳು ಎಚ್ಚೆತ್ತುಕೊಂಡಿದ್ದಾರೆ. ಇದೇ ...ದಲ್ಲಿ ಔಷಧಿ ನಿಯಂತ್ರಣದಲ್ಲಿ ...ರ ತಾಂಡವವಾಡುತ್ತದೆ ಎಂಬ ವಿಷಯ ...ಂದಿದೆ. ಕೇವಲ 300 ಕೋಟಿ ಹಗರಣ ...ವರದಿಯಾದರೆ, ಅಲ್ಲಿ ಇನ್ನೂ ಹೆಚ್ಚಿನ ...ದ ಹಗರಣದಿಂದ ಜನರು ...ಗೊಂಡಿದ್ದಾರೆಂಬ ವಿಷಯ ...ತ್ತಿದ್ದಂತೆ, ವೇದಿಕೆ ಮೊದಲನೇ ದೂರಿಗೆ ...ುಕವಾದ ಇನ್ನೊಂದು ದೂರನ್ನು ...ಯುಕ್ತಕ್ಕೆ ಕೊಟ್ಟಿದೆ. ಔಷಧಿ ನಿಯಂತ್ರಣದ ...ಸ್ಥೆಯಿಂದಾದ ಹಗರಣದಿಂದ ...ಮಾನ್ಯರ ಮೇಲೆ ಉಂಟಾಗುವ ...ುದ ಬಗ್ಗೆ ಆತಂಕಗೊಂಡಿದೆ. ಔಷಧಿ ...ಣದ ಅವ್ಯವಹಾರಗಳನ್ನು ಲೋಕಾಯುಕ್ತ ...ರ್ಣವಾಗಿ ಹೊರತರುತ್ತಾರೆಂಬ ನಂಬಿಕೆ ...ದೆ. ಹಿಂದೆ ಜೆ.ಜೆ. ಆಸ್ಪತ್ರೆ ದುರಂತದಲ್ಲಿ ...ಾಷ್ಟ್ರದ ಔಷಧಿ ನಿಯಂತ್ರಣವನ್ನು ...ಡಿಸಿದ ಲೆಂಟಿನ್ ವರದಿಯಂತೆ, ...ಯುಕ್ತರ ವರದಿ ಕರ್ನಾಟಕದ ಔಷಧಿ ...ನ್ನು ಸರಿಪಡಿಸುವಲ್ಲಿ ಸೂಕ್ತ ಕ್ರಮ ...ತ್ತದೆಂದು ವೇದಿಕೆ ನಂಬಿದೆ.

**...ರ್ಜೆ ಔಷಧಿ ಮಾರಾಟ**

...ಧಿ ನಿಯಂತ್ರಣ ಸುಮ್ಮನೆ ಕುಳಿತಿದೆ ಎಂದು ...ಗದು ಹಿಂದಿನ ವರ್ಷ 259 ಕಳಪೆ ದರ್ಜೆ ...ಳನ್ನು ನಿಯಂತ್ರಣ ಮಂಡಳಿಗೆ ತಂದಾಗ ...ತ್ರಣ ಪರೀಕ್ಷೆ ಮಾಡಿದೆ. ಆದರ ...ಶವನ್ನು ಪ್ರಕಟಿಸಿಲ್ಲ ಹಾಗೂ ಯಾವ ...ಲ್ಲ ತೆಗೆದುಕೊಂಡಿಲ್ಲ, ಈಗ ಕಳಪೆ ದರ್ಜೆ ...ಳವೆಯೆಂದು ತಿಳಿದರೂ ಆ ಔಷಧಿ ...ೋಗಿಸದಂತೆ ತಡೆಯಲು ಸಾಧ್ಯವಿಲ್ಲ, ... ಆ ಔಷಧಿಗಳು ಈಗಾಗಲೇ ...ೋಗವಾಗಿವೆ. ಡೆಕ್ಸಮೆಥಸೋನ್ ಎಂಬ ...ಾಗಿಸುವ ಔಷಧಿ ಇದರಲ್ಲಿ ಸೇರಿದೆ. ...ಜೆನ್ ಎಂಬ ಔಷಧಿಯನ್ನು ತಯಾರಿಸಲು ...ಜ ಬದಲಾಗಿ ನಿಯೋಮೈಸಿನ್ ಎಂಬ

ಔಷಧಿಯನ್ನು ಉಪಯೋಗಿಸಲಾಗಿದೆ. ಇದಕ್ಕೆ ಕಾರಣ ನಿಯೋಮೈಸಿನ್ ಬೆಲೆ ಫ್ರಾಮೈಸಿಲಿನ್ ಎಂಬ ಔಷದಿಗಿಂತ ಹತ್ತು ಪಟ್ಟು ಕಡಿಮೆ ಒಟ್ಟು ಆರು ಕಂಪನಿಗಳು ಈ ರೀತಿ ತಯಾರಿಸುತ್ತಿದ್ದು ಕೇವಲ ಒಂದೇ ಕಂಪನಿಯನ್ನು ಆಪಾದಿಸಲಾಗಿದೆ. ಉಳಿದ ಕಂಪನಿಗಳಿಗೆ ಏಕೆ ರಿಯಾಯಿತಿ ಕೊಡಲಾಗಿದೆ.

**ಕ್ವಿನ ಕ್ರಿನ್ - `we are helpless'**

ಬೆಂಗಳೂರಿನಲ್ಲಿ 1997 ರಲ್ಲಿ ಕ್ವಿನಕ್ರಿನ್ ಎಂಬ ಔಷಧಿಯನ್ನು ಅಕ್ರಮವಾಗಿ ಉಪಯೋಗಿಸಲಾಗುತ್ತಿತ್ತು. ಬೆಂಗಳೂರಿನ ಒಂದು ಸಂಸ್ಥೆ ಮುಂದಿನ ಮೂರು ತಿಂಗಳುಗಳಲ್ಲಿ 25000 ಮಹಿಳೆಯರಿಗೆ ಈ ಔಷಧಿಯನ್ನು ಅಳವಡಿಸುವುದಾಗಿ ಹೇಳಿಕೆ ನೀಡಿತ್ತು.

ಈ ಔಷಧಿಯನ್ನು 20ನೇ ಶತಮಾನದ 2 ನೇ ದಶಕದಲ್ಲಿ ಮಲೇರಿಯಾ ರೋಗಕ್ಕೆ ಉಪಯೋಗಿಸಲಾಗುತ್ತಿತ್ತು. ಆದರೆ ಆ ಔಷಧಿ ಉಪಯೋಗ ನಿಷೇಧಿಸಲಾಗಿತ್ತು. ಆದರೆ 90 ರ ದಶಕದಲ್ಲಿ ಕೆಲವು ದೇಶಗಳಲ್ಲಿ ಜನಸಂಖ್ಯೆ ಕಡಿಮೆ ಮಾಡಲು ಮಹಿಳೆಯರ ಗರ್ಭಾಶಯದಲ್ಲಿ ಇದನ್ನು ಅವಡಿಸಿ, ಬಂಜೆತನ ಉಂಟು ಮಾಡಲು ಸಹಾಯವಾಗುತ್ತದೆಂದು ವರದಿಯಾಗಿತ್ತು. ಈ ವರದಿಗೆ ಸಂಶೋಧನೆ ಆಧಾರಿತವಾಗಿರಲಿಲ್ಲ ಹಾಗೂ ಅದನ್ನು ವಿಶ್ವ ಆರೋಗ್ಯ ಸಂಸ್ಥೆ, ಭಾರತೀಯ ಆರೋಗ್ಯ ಸಂಶೋಧನೆ ಮಂಡಳಿ ಪ್ರೋತ್ಸಾಹಿಸಿರಲಿಲ್ಲ. ಆದರೂ ಅಕ್ರಮವಾಗಿ ಬಳಕೆಯಾಗುತ್ತಿದ್ದ ಈ ಔಷಧಿ ಉಪಯೋಗವನ್ನು ವೇದಿಕೆ ತಡೆಯಲು ಔಷಧಿ ನಿಯಂತ್ರಣದ ಸಹಾಯ ಕೋರಿ ಹೋದಾಗ ಬಂದ ಉತ್ತರ `we are helpless'. ಆದರೆ ಮೂರು ತಿಂಗಳ ನಂತರ ಆ ಔಷಧಿಯನ್ನು ಸರ್ವೋಚ್ಚ ನ್ಯಾಯಾಲಯ ಉಪಯೋಗಕ್ಕೆ ನಿಷೇಧಿಸಿತು!. ಔಷಧಿ ನಿಯಂತ್ರಣ, ಅಕ್ರಮವಾಗಿ ಉಪಯೋಗಿಸುವ ಅನಗತ್ಯ ಅಪಾಯಕಾರಿ ಔಷಧಿಯನ್ನು ತಡೆಯುವುದರ ಬದಲಾಗಿ, ಇತ್ತೀಚೆಗೆ ಅಕ್ರಮವಾಗಿ ಖಾಸಗಿ ಕ್ಯಾನ್ಸರ್ ಆಸ್ಪತ್ರೆಯ ಔಷಧಿಯನ್ನು ವಶಪಡಿಸಿಕೊಂಡ ಪ್ರಕರಣವನ್ನು ಲೋಕಾಯಕ್ತ ಬಯಲಿಗೆ ತರಬೇಕಾಗಿದೆ ಮತ್ತು ತಪ್ಪಿತಸ್ತರನ್ನು ಶಿಕ್ಷಿಸಬೇಕಾಗಿದೆ.

**ಕೋಮ್ಲಾಟಾ ಪೋರ್ಟ್ ದುರಂತ**

ಬೋರಿಂಗರ್ ನಾಲ್ ಎಂಬ ಬಹುರಾಷ್ಟ್ರೀಯ ಕಂಪನಿಯು ಸೋಂಕು ರೋಗಗಳಿಗೆ ಉಪಯೋಗಿಸುವ ಕೋಮ್ಲಾಟ್ ಪೋರ್ಟ್ ಎಂಬ ಔಷಧಿಯನ್ನು ತಯಾರಿಸುತ್ತಿತ್ತು. ಇಂದು ಆ ಔಷಧಿಯ ತಯಾರಿಕೆಯನ್ನು ನಿಲ್ಲಿಸಲಾಗಿದೆ!

ಸೆಪ್ಟೆಂಬರ್ 1996 ರಲ್ಲಿ ಕೋಲಾರ ಜಿಲ್ಲೆಯಲ್ಲಿ ಪೆರಸಂದ್ರ ಗ್ರಾಮದಲ್ಲಿ ಜರುಗಿದ ಕಣ್ಣಿನ ಶಸ್ತ್ರ ಚಿಕಿತ್ಸೆಯ ರೋಗಿಗಳಿಗೆ ಈ ಔಷಧಿಗಳನ್ನು ಉಪಯೋಗಿಸಲಾಗಿತ್ತು. ಕೆಲವು ರೋಗಿಗಳಿಗೆ ಜ್ಞಾನ ತಪ್ಪಿ, ದುರಂತ ಪರಿಸ್ಥಿತಿ ಉಂಟಾಗಿದ್ದರಿಂದ ನಿಮ್ಹಾನ್ಸ್ ಆಸ್ಪತ್ರೆಗೆ ಸೇರಿಸಲಾಯಿತು. ಈ ದುರಂತದಿಂದ ನಾಲ್ಕು ಜನರು ಮೃತಪಟ್ಟರು, ನಾಲ್ವರಿಗೆ ಕುರುಡು ಸಂಭವಿಸಿತು. ಇದಕ್ಕೆ ಕಾರಣ ಕೋಮ್ಲಾಟ್ ಮಾತ್ರೆ ಕಲಬೆರಕೆ ಹೊಂದಿದ್ದರಿಂದ ಎಂದು ತಿಳಿದುಬಂತು. ಆದೇ ಕಂಪನಿ

ಪುಟ 11 ಕ್ಕೆ


## ಮುಗ್ಧತೆ ನಟಿಸಿದ ಮುಖ್ಯಮಂತ್ರಿ ಹಗರಣ ಮುಚ್ಚಿಹಾಕಲು ಟೊಂಕಕಟ್ಟಿದ ವಿರೋಧ ಪಕ್ಷಗಳ ನಾಯಕರು

ಇದೆಂಥ ಮೈತ್ರಿ?

ನೂರಾರು ಕೋಟಿ ರೂಪಾಯಿಗಳ ಭಾರೀ ಹಗರಣವೊಂದು ಬಯಲಾಗಿ ಆಳುವ ಸರ್ಕಾರ - ಹೊಣೆಗಾರಿಕೆಯ ಸಚಿವರು ಕಂಗಾಲಾಗಿರುವಾಗ ಅದನ್ನು ಸಮರ್ಥಿಸಿಕೊಳ್ಳುತ್ತಿದ್ದ ಏದುಸಿರು ಬಿಡುತ್ತಿದ್ದ ಆಡಳಿತಪಕ್ಷ ಪಿಳಿಪಿಳಿ ಕಣ್ಣು ಬಿಡುತ್ತಾ ತಣ್ಣಗೆ ಕುಳಿತಿದ್ದರೆ, ಓತೋಪ್ರೋತವಾಗಿ ವಾಗ್ಝರಿ ಹರಿಸಿ ಸಮರ್ಥನೆಗೆ ಇಳಿದದ್ದು ವಿರೋಧಪಕ್ಷಗಳ ನಾಯಕರು! ಅದೂ ಅಧಿಕೃ(?) ವಿರೋಧಪಕ್ಷವಾಗಿರುವ ಬಿಜೆಪಿ, ದಳದ ವಿವಿಧ ಬಣಗಳ ನಾಯಕರು! ಆಡಳಿತ ಪಕ್ಷದವರೂ ನಾಚುವಂತೆ ಸಮರ್ಥಿಸಿದ 'ವಿರೋಧ' ಪಕ್ಷದ (ನಾಮಕಾವಸ್ತೆ) ನಾಯಕರ ಮಾತುಕೇಳಿ ಹಗರಣದ ಪ್ರಹಾರದಿಂದ ಕುಗ್ಗಿಹೋಗಿದ್ದ ಕೃಷ್ಣ ಭಟ್ಟಿ ಇಳಿಸಿದ 'ಟಾನಿಕ್'(?) ಕುಡಿದಂತೆ ಚಾರ್ಜ್ ಆಗಿ ಹಗರಣಖೋರರನ್ನು ಮನಸಾರೆ ಶ್ಲಾಘಿಸಿ ರಕ್ಷಣೆಗೆ ನಿಂತದ್ದು ವಿಧಾನಸೌಧದ ಇತಿಹಾಸದಲ್ಲಿ ಅಪರೂಪದ ಘಟನೆ.

ಇದು ಖಂಡಿತ ಬಾರೀ ಹಗರಣ. ಒಂದೆರೆಡಲ್ಲ ನೂರಾರು. ಏನಿಲ್ಲವೆಂದರೆ 300 ಕೋಟಿ ರೂಪಾಯಿಗಳಿಗೂ ಮೀರಿದ ಭಯಂಕರ ಹಗರಣ. ಅದರ ವಿವರಗಳನ್ನು ಒಂದೊಂದಾಗಿ ಕೆದಕಿದರೆ ಲೋಕಾಯುಕ್ತ ನ್ಯಾಯಮೂರ್ತಿ ವೆಂಕಟಾಚಲ ಕಿರುಬೆರಳಿಗೆ ಮೆತ್ತಿಕೊಂಡ, ಎತ್ತಿಹಿಡಿದ ಹಗರಣಗಳ ಜಾಲದ ಪ್ರಮಾಣಕ್ಕಿಂತಲೂ ಅತ್ಯಧಿಕ-ಭೀಕರ ಜಾಲ. ಕರ್ನಾಟಕದ ಸಾವಿರಾರು ಜನರ ಜೀವ ಹರಣ ಮಾಡಿದ, ಮಾಡಲಿರುವ ಹಗರಣ ಈ ಔಷಧಿ ಹಗರಣ.

ಎಷ್ಟೊಂದು ನಿಚ್ಚಳವಾಗಿರುವ ಈ ಬಹುಕೋಟಿ ಹಗರಣವನ್ನು ಅರ್ಥಹೀನ ಆರೋಪವೆಂದರು ಮುಖ್ಯಮಂತ್ರಿ ಕೃಷ್ಣ. "ಸರ್ಕಾರವೇ ಔಷಧಿ ಖರೀದಿಗೆ ನೀಡಿದ್ದು ಕೇವಲ 70 ಕೋಟಿ ರೂ.ಗಳು. ಹಾಗಾದರೆ 300 ಕೋಟಿಗೂ ಅಧಿಕ ಹಗರಣ ಎಲ್ಲಿಂದ ಬರುತ್ತದೆ" ಎಂದು ಪ್ರಶ್ನಿಸಿದರು. ಯಾರಾದರೂ ಇಂತಹ ನಯಗಾರಿಕೆಯ ಮಾತನ್ನು, ತರ್ಕವನ್ನು ಕೇಳಿದರೆ



ದಾರಿತಪ್ಪುವುದು ಸಹಜವೇ! ಆಹಾ! ಎಂತಹ ಮುಗ್ಧತೆಯ ನಾಟಕ. ಈ ಹಗರಣ ಬಯಲುಗೊಂಡಿರುವುದು ಸರ್ಕಾರ ನೀಡಿದ ಹಣಕ್ಕೆ ಮಾತ್ರ ಸೀಮಿತ ಅಲ್ಲ ಎಂಬುದು ಸೋಮನಹಳ್ಳಿಯ ಸೈಬರ್ ಕೃಷ್ಣರಿಗೆ ಗೊತ್ತಿಲ್ಲವೇನು? ಖಾಸಗಿ ಕಂಪನಿಗಳ ಔಷಧಿಗಳಿಗೆ ಬೆಲೆ ನಿಗದಿ ಮಾಡುವಾಗ, ಸಾರ್ವಜನಿಕರಿಗೆ ಮಾರಾಟಕ್ಕೆ ಬಿಡುಗಡೆಯಾಗುವ ಕ್ಯಾಪ್ಸೂಲ್ ಗುಳಿಗೆಯಲ್ಲಿ ಇರಬೇಕಾದಷ್ಟು ಔಷಧಿ ಪುಡಿ ಇರದೇ ಅರ್ಧದಷ್ಟು ಕಡಿಮೆ ತುಂಬಿ ಮಾರಾಟವಾದರೂ ತಡೆಯಿಲ್ಲದಿರುವಾಗ, ಕಳಪೆ ಔಷಧಿ ಖರೀದಿಸಿರುವಾಗ ಅಷ್ಟು ಮಾತ್ರವಲ್ಲ ಔಷಧಿ ಅಂಗಡಿಗಳ ಲೈಸೆನ್ಸ್ ನವೀಕರಣಕ್ಕೆ ಶುಲ್ಕದ ಜೊತೆಗೆ 'ಮಾಮೂಲಿ' ಎತ್ತಿರುವ ಹಲವಾರು ಪ್ರಕರಣಗಳು ಪುಂಖಾನುಪುಂಖವಾಗಿ ಹೊರಗೆ ಬರುತ್ತಿವೆ.

ನೀತಿ-ನಿಯತ್ತು, ಸತ್ಯ-ಪ್ರಾಮಾಣಿಕತೆ... ಹೋಗಲಿ ತನ್ನ ನಾಡಿನ ನಾಗರಿಕ ಜನರ ಜೀವಕ್ಕೆ ಕಿಂಚಿತ್ತಾದರೂ ಬೆಲೆ, ಕಾಳಜಿ ಇದ್ದರೆ 'ಸಮಗ್ರ ತನಿಖೆ' ಏರ್ಪಡಿಸಿದರೆ.... ಹಗರಣದ ಕೊಚ್ಚೆ ಗುಂಡಿಯಲ್ಲೇ ಮುಳುಗಿ ಹೋಗುವಷ್ಟು ಭಾರದ 'ಸರಕು' ಕೃಷ್ಣರ ಹೆಗರಿಗೇರಿತು! ಆ ಧೈರ್ಯವಿದೆಯೋ.... ಇಂತಹದ್ದೊಂದು ಹಗರಣ ಹೊರ ಬಂದಾಗ, ಅದೂ ಲೋಕಾಯುಕ್ತವೇ ಎತ್ತಿ ತೋರಿಸಿದ ನಂತರ 'ಜವಾಬ್ದಾರಿ ಇರುವ ಮುಖ್ಯಮಂತ್ರಿಯೊಬ್ಬ ಮಾಡಬೇಕಾದದ್ದು ಏನು ಗೊತ್ತೆ? ತಕ್ಷಣ ಆಳ ತನಿಖೆಗೆ ಒಳಪಡಿಸಬೇಕಾದದ್ದು. ಕೂಡಲೇ ಸಂಪುಟದ ಸಚಿವ ಡಾ.ಮಾಲಕರೆಡ್ಡಿಯಂತಹ ಕಳಂಕಿತ ಮಂತ್ರಿಯ ರಾಜೀನಾಮೆ ಪಡೆದು, ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತಿದ್ದುದು. ಇದಾವುದೂ ಇಲ್ಲದೇ ಒಣ ಭಂಡ ಸಮರ್ಥನೆಗೆ ಇಳಿದರೆಂದರೆ ಇಂತಹದ್ದಕ್ಕೆ ವಿರೋಧ ಪಕ್ಷಗಳೆಂಬ 'ಆಸ್ಥಾನ ನಟರು' ಮುಖ್ಯಮಂತ್ರಿಗೂ ಮೊದಲೇ ಈ ಹಗರಣದಲ್ಲಿ ನಿಮ್ಮ ಬೆಂಬಲಕ್ಕೆ ಎಂದು ಎತ್ತಿದ ಸ್ವರದಲ್ಲಿ ಸಮರ್ಥಿಸುವರೆಂದರೆ.... ಏನರ್ಥ?

ಈ ಹಗರಣದಲ್ಲಿ ಕೃಷ್ಣರೊಂದಿಗೆ,ಯಡಿಯೂರಪ್ಪ, ಸಿಂಧ್ಯಾ, ಬಚ್ಚೇಗೌಡ, ಭೈರೇಗೌಡರಿಗೆ -ಅಂತಹ ನಾಯಕಗಣಕ್ಕೆ ಏನು ಪಾಲಿದೆ? ಸರ್ಕಾರದ ಸೃಜನಾತ್ಮಕ ಕೆಲಸಗಳಿಗೆ ತಮ್ಮದು ಬೆಂಬಲವೆಂಬ ಸೋಗಿನ ಮಾತಿಗೆ ಇದೇನಾ ಅರ್ಥ?

ಇಲ್ಲಿ ಮಾಲಕರೆಡ್ಡಿ ಎಂತಹವರು ಎಂಬುದಲ್ಲ. ಕೃಷ್ಣರ ಸರ್ಕಾರ ಎಂತಹದ್ದು ಎಂಬುದು ಮುಖ್ಯ ಪ್ರಶ್ನೆ. ಇಷ್ಟೆಲ್ಲಾ ನಡೆದರೂ ಎಚ್ಚರವಹಿಸದ ಆರೋಗ್ಯ ಸಚಿವರದ್ದು ಬೇಜವಾಬ್ದಾರಿಯೇ? ಶಾಮಿಲೋ? ಆರೋಪ ಇಷ್ಟು ದೊಡ್ಡದಾದರೂ ಇನ್ನು ಅಧಿಕಾರದಲ್ಲಿ ಮುಂದುವರಿವ ನೈತಿಕತೆ ಇಲ್ಲ. ಆದ್ದರಿಂದ ರಾಜೀನಾಮೆ ಕೊಡಲೇಬೇಕು.

ಹೈಟೆಕ್ ಕೃಷ್ಣರವರ ಹಗರಣ ಒಂದೆರೆಡಲ್ಲ. ಮುಖ್ಯಮಂತ್ರಿಗಳೇ ಭಾಗಿಯಾಗಿದ್ದಾರೆಂಬ ಬೆಂಗಳೂರು ಪುರಸಭೆ ಗಳಲ್ಲಾದ 250 ಕೋಟಿ ಹಗರಣವನ್ನು ಲೋಕಾಯುಕ್ತರೇ ಹೊರಗೆಳೆದದ್ದು. ತೀರಾ ಇತ್ತೀಚಿನದ್ದು, ಹಾಗೇ ಸಾವಿರಾರು ಕೋಟಿ ರೂಪಾಯಿಗಳ ಖೋಟಾ ಸ್ಟಾಂಪ್ ಪೇಪರ್ ಹಗರಣ? ಕಳೆಪೆ ಗೊಬ್ಬರ ಹಗರಣ.....!

ಆದ್ದರಿಂದ ಹೊಣೆಗಾರಿಕೆಯಿರುವ ಸಚಿವ ಮಾಲಕರೆಡ್ಡಿಯವರು ಕೂಡಲೇ ರಾಜೀನಾಮೆ ನೀಡಲೇಬೇಕು. ಹೊಣೆಗಾರಿಕೆಯ ಅಧಿಕಾರಿಗಳೆಲ್ಲರನ್ನು ಸಸ್ಪೆಂಡ್ ಮಾಡಬೇಕು. ಮುಖ್ಯವಾಗಿ ನಿಷ್ಪಕ್ಷಪಾತವಾದ ಆಳವಾದ ತನಿಖೆ ನಡೆದು ತಪ್ಪಿತಸ್ಥರ ಮೇಲೆ ನಿಷ್ಠುರ ಕ್ರಮ ಜರುಗಬೇಕು.

ಹೇಗೋ ತಪ್ಪಿಸಿಕೊಳ್ಳಬಹುದು, ಹೈಕಮಾಂಡ್‌ನ ಕೃಪೆಯಿದೆಎಂದು ಕಳ್ಳ ಕೃಷ್ಣ ಭಾವಿಸಿದ್ದಾರೆ. ಅದು ಮೂರ್ಖತನ. ಅವರ ಬಾಯಿಗೆ ಅಂಟಿರುವುದು ಬೆಣ್ಣೆಯಲ್ಲ, ಬದಲಾಗಿ ಮುಗ್ಧ ಜನರ ಪ್ರಾಣ ಹಾರಿಕೊಂಡ ರಕ್ತದ ಕರಣೆಗಳು ನೆನಪಿರಲಿ.

ಎಸ್.ವೈ.ಗುರುಶಾಂತ್

# ಕಾಮ್ರೇಡ್ ಸಿ.ಆರ್.ಭಟ್ ಸ್ಮರಣೆ

**ಎಲ್ಲರ ಪ್ರೀತಿಯ ಸಂಗಾತಿ ಸಿ.ಆರ್.ಭಟ್‌ರವರು ಅಗಲಿ ವರುಷವೊಂದು ಆದಾಗ ನಡೆದ ವಿಶಿಷ್ಟ ಕಾರ್ಯಕ್ರಮಗಳ ವರದಿ ಇಲ್ಲಿದೆ.**


ಪ್ರಗತಿಪರ ಚಳುವಳಿಯಲ್ಲಿ ಸದಾ ಸಕ್ರಿಯರಾಗಿದ್ದು, ಮಾರ್ಕ್ಸ್‌ವಾದಿ ತತ್ವಗಳಲ್ಲಿ ನಂಬಿಕೆ ಹೊಂದಿದ್ದ ಕಾಂ. ಸಿ.ಆರ್.ಭಟ್ ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಚಟುವಟಿಕೆಗಳ ಮೂಲಕ ಮತ್ತು ಉತ್ತಮ ಲೇಖನ, ಭಾಷಣ, ವಿಷಯ ಮಂಡನೆಗಳ ಮೂಲಕ ಜನಪ್ರಿಯರಾಗಿದ್ದರು. ಸಂಗಾತಿ ಸಿ.ಆರ್.ಭಟ್ ಸಾಮೂಹಿಕ ಸಂಘಟನೆಗಳ ಶಕ್ತಿಯಾಗಿದ್ದರು.

ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ಕಾರ್ಯದರ್ಶಿಯಾಗಿ ಗ್ರಾಮ ಪಂಚಾಯತ ನೌಕರರ ಸಮನ್ವಯ ಸಮಿತಿ ಅಧ್ಯಕ್ಷರಾಗಿ, ಜೀವವಿಮಾ ನಿಗಮದ ನಿವೃತ್ತ ಅಧಿಕಾರಿಯಾಗಿ, ವಿಮಾ ನೌಕರರ ಸಂಘದ ಪದಾಧಿಕಾರಿಯಾಗಿ, ಧಾರವಾಡ ಅವಿಭಾಜ್ಯ ಜಿಲ್ಲಾ ಪ್ರದೇಶದ ವ್ಯಾಪ್ತಿಯಲ್ಲಿ ಸಾಕ್ಷರತಾ, ಜನ ವಿಜ್ಞಾನ, ಸಮುದಾಯ,ಸಾಂಸ್ಕೃತಿಕ, ಜನಾರೋಗ್ಯ, ಕಾರ್ಮಿಕ ಸಂಘಟನೆಗಳ ಆಂದೋಲನಗಳಲ್ಲಿ ಸಂಪೂರ್ಣ ಸೇವಾ ಮನೋಭಾವದಿಂದ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರು ನಮ್ಮನ್ನು ಅಗಲಿ ಮಾರ್ಚ್ 10 ಕ್ಕೆ ಒಂದು ವರ್ಷವಾಗಿದೆ. ಆದರೆ ಅವರು ಮಾಡಿದ ಕಾರ್ಯ ಅಪಾರ. ಅವರ ನೆನಪೇ ನಮಗೆ ಸದಾ ಸ್ಫೂರ್ತಿಯ ಸೆಲೆ.

ಸಾಮಾಜಿಕ ಕೆಲಸ ಕಾರ್ಯಗಳ ಅಂಗವಾಗಿ ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರ ಮತ್ತು ಸಮುದಾಯ ಘಟಕದ ಆಶ್ರಯದಲ್ಲಿ ವಿವಿಧ ಜ್ವಲಂತ ವಿಷಯಗಳ ಕುರಿತು ಕಿರು ಪುಸ್ತಕಗಳನ್ನು ಬರೆದು ಹೊರತಂದಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳು -

- ಜಾಗತೀಕರಣದ ಹತ್ತು ವರ್ಷಗಳು
- ಶ್ರೀಮಂತ ಭಾರತದಲ್ಲಿ ಬಡ ಭಾರತೀಯರು
- ಜನರ ಧ್ವನಿ, ರಾಷ್ಟ್ರಪತಿಗಳ ಪ್ರತಿಧ್ವನಿ
- ಸಮುದಾಯದ 25 ಜನಸಂಸ್ಕೃತಿ ಜಾಥಾ ಉತ್ಸವಗಳು

ದಿನಾಂಕ 9.3.2003 ರಂದು ಧಾರವಾಡ ಸ್ಕಾಟ್ಸ್ ಹಾಗೂ ಗೈಡ್ಸ್ ಆವರಣದಲ್ಲಿ ಕಾ.ಸಿ.ಆರ್.ಭಟ್ ಸ್ಮರಣಾರ್ಥ ಗ್ರಾಮ



ವಿಚಾರಸಂಕಿರಣದಲ್ಲಿ ಮಾತನಾಡುತ್ತಿರುವ ನಿತ್ಯಾನಂದಸ್ವಾಮಿ, ಅಲ್ಲದೇ ಈಳಿಗೇರ, ಡಾ. ಬಿ.ಕೃಷ್ಣಮೂರ್ತಿ ಮತ್ತು ಆಯಿ

ಪಂಚಾಯತಿ ನೌಕರರಿಗೆ (ಗದಗ, ಹಾವೇರಿ, ಧಾರವಾಡ ಜಿಲ್ಲೆಗಳ) ತರಬೇತಿ ಶಿಬಿರ ನಡೆಯಿತು. ಶಿಬಿರದಲ್ಲಿ 20 ಗ್ರಾಮ ಪಂಚಾಯತ್ ನೌಕರರು ಭಾಗವಹಿಸಿದ್ದರು. ಕರ್ನಾಟಕ ರಾಜ್ಯ ಗ್ರಾಮಪಂಚಾಯತ್ ನೌಕರರ ಪ್ರಧಾನ ಕಾರ್ಯದರ್ಶಿ ಕಾ. ವಿ.ಪಿ.ಕುಲಕರ್ಣಿ ಅವರು ಶಿಬಿರದ ಉದ್ಘಾಟನೆ ಮಾಡಿ ಪ್ರಸಕ್ತ ಸಂದರ್ಭದಲ್ಲಿ ಸಂಘಟನೆ ಬಲವಾದರೆ ಮಾತ್ರ ನೌಕರರ ನ್ಯಾಯವಾದ ಬೇಡಿಕೆಗಳು ಈಡೇರಿಸಲು ಸಾಧ್ಯ. ರಾಜ್ಯ ಮಟ್ಟದಲ್ಲಿ ಸರಕಾರದ ಜೊತೆಗೆ ವೇತನ ಪರಿಷ್ಕರಣೆ, ಸೇವಾ ನಿಯಮಗಳು, ವಿಮೆ, ಪೆನ್ಷನ್, ಗ್ರಾಚುಟಿ, ಇತ್ಯಾದಿ ಕುರಿತು ಚರ್ಚಿಸಿದ ವಿಷಯ ತಿಳಿಸಿದರು. ಈ ಕುರಿತು ಸರಕಾರ ವಿಳಂಬ ನೀತಿ ಅನುಸರಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಬೆಂಗಳೂರು ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಹೋರಾಟಕ್ಕೆ ಸಿದ್ಧರಾಗಬೇಕೆಂದರು. ಮುಖ್ಯ ಅತಿಥಿಗಳಾಗಿ ರಾಜ್ಯಕೃಷಿ ಕೂಲಿಕಾರರ ಸಂಘದ ಧುರೀಣರು ಹಾಗೂ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರು ಆದ ಕಾಂ. ನಿತ್ಯಾನಂದ ಸ್ವಾಮಿ ಹಾಗೂ ಧಾರವಾಡ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕಾಂ. ಆರ್.ಎಚ್.ಆಯಿ ಆಗಮಿಸಿದ್ದರು. ಅಧ್ಯಕ್ಷತೆಯನ್ನು ಗದಗ, ಹಾವೇರಿ, ಧಾರವಾಡ ಜಿಲ್ಲೆಗಳ ಸಮನ್ವಯ ಸಮಿತಿ ಅಧ್ಯಕ್ಷರಾದ ಕಾ. ಬಿ.ಆಯ್.ಈಳಿಗೇರ ವಹಿಸಿದ್ದರು. ಪ್ರಾರಂಭದಲ್ಲಿ ರಾಜ್ಯ ಸಿಐಟಿಯು ಖಜಾಂಚಿ ಕಾಂ. ಕೆ.ವಿ.ಶ್ರೀನಿವಾಸನ್ ಅವರಿಗೆ ಗೌರವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಶಿಬಿರದಲ್ಲಿ ಕಾ. ನಿತ್ಯಾನಂದ ಸ್ವಾಮಿ ಮಾರ್ಗದರ್ಶನ ನೀಡಿದರು. ದಿನಾಂಕ 10.3.2003 ರಂದು ಮೆರವಣಿಗೆಯ ಮುಖಾಂತರ ಪಂಚಾಯತ್ ಹಾಗೂ ಅಭಿವೃದ್ಧಿ ಮಂತ್ರಿಗಳಿಗೆ ನೌಕರರ ಬೇಡಿಕೆಗಳನ್ನು ಈಡೇರಿಸಲು ಧಾರವಾಡ ಜಿಲ್ಲಾ ಪಂಚಾಯತ್ ಕಾರ್ಯದರ್ಶಿ ಅಧಿಕಾರಿಗಳ ಮೂಲಕ ಮನವಿ ಅರ್ಪಿಸಲಾಯಿತು.

**ವಿಚಾರಸಂಕಿರಣ**

ದಿನಾಂಕ 30.03.2003 ರಂದು ಧಾರವಾಡದಲ್ಲಿ ರಾಜ್ಯ ಸರಕಾರಿ ನೌಕರರ ಭವನದಲ್ಲಿ ಕಾ. ಸಿ.ಆರ್.ಭಟ್ ಸ್ಮರಣಾರ್ಥ ಸಮುದಾಯ ಹುಬ್ಬಳ್ಳಿ - ಧಾರವಾಡ ಘಟಕದ ಆಶ್ರಯದಲ್ಲಿ ಕೊಲ್ಲಿ ಯುದ್ಧದ ಕುರಿತು 'ವಿಚಾರಸಂಕಿರಣ' ಯಶಸ್ವಿಯಾಗಿ ಜರುಗಿತು. ಈ ವಿಚಾರಸಂಕಿರಣದ ಮುಖ್ಯ ಅತಿಥಿಗಳಾಗಿ ಕಾಂ. ನಿತ್ಯಾನಂದ ಸ್ವಾಮಿಯವರು ಭಯೋತ್ಪಾದನೆಯ ಹೆಸರಿನಲ್ಲಿ ಮೊದಲು ಅಫಘಾನಿಸ್ತಾನ, ಇರ ಉ.ಕೋರಿಯಾ ಹಾಗೂ ಕಾಶ್ಮೀರ ಇಟ್ಟುಕೊಂಡು ಭಾರತದ ಮೇಲೆ ಹೀಗೆ ದೋಚುವ ತಮ್ಮ ಸ್ವಾರ್ಥ ಸಾಧನೆಗಾಗಿ ಮಾಡುವ ಹುನ್ನಾರವನ್ನು ಬಲ ಖಂಡಿಸಿದರು. ಹಾಗೂ ಪ್ರಪಂಚದಲ್ಲಿ ನಮ್ಮದೇಶದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟಿಸಬೇಕೆಂದರು. ಈ ದಿಸೆ ವಾಜಪೇಯಿ ನೇತೃತ್ವದ ಕೇಂದ್ರ ಸ ಖಂಡಿತವಾದ ನಿರ್ಣಯ ತಗೆದುಕೊ ಇರುವುದು ನಮ್ಮ ಸರಕಾರದ ಹೇಡಿತನವೆಂ

ಇನ್ನೋರ್ವ ಅತಿಥಿ ಕೃಷಿ ವಿಶ್ವವಿದ್ಯಾಲ ನಿವೃತ್ತ ಪ್ರಾಧ್ಯಾಪಕರಾದ ಡಾ. ಬಿ.ಕೃಷ್ಣಮ ಯವರು ಕೊಲ್ಲಿ ಯುದ್ಧದ ದುಷ್ಪರಿಣಾ ಕುರಿತು ಮಾತನಾಡುತ್ತಾ ಈಗ ಸಮಾಜ ಚಳವಳಿಯ ಹಿನ್ನಡೆಯಿಂದ ಬಲಗ ಅಮೆರಿಕಾ ಈಗ ಇರಾಕಿನ ತೈಲ ಸಂಪತ್ತಿ ಯುದ್ಧ ಮಾಡುತ್ತಿದೆ. ಒಟ್ಟಾರೆ ಈ ವ್ಯವಸ್ಥೆ ಯುದ್ಧ ಭಯೋತ್ಪಾದಕತೆ, ಧವ ವಿಷಯಗಳಲ್ಲಿ ಜನರ ಮನಸ್ಸನ್ನು ಒಡೆಯು ಉದ್ದೇಶವಾಗಿದೆ. ಅಸಂಖ್ಯಾತ ಜನರ ನೋವು, ಹಸಿವೆ, ಬಡತನ, ನಿರುದ್ಯೋ ಭ್ರಷ್ಟಾಚಾರ ಮುಂತಾದವುಗಳನ್ನು ಅನಿವಾ ವಾಗಿ ಹುಟ್ಟಿಸಿ ಸಮಾಜ ಹಾಳುಗೆಡುವು ಆದ್ದರಿಂದ ಈ ವ್ಯವಸ್ಥೆಗೆ ಪರ್ಯಾಯ ಸಮಾಜವಾದ ಮಾತ್ರ. ಆಗ ನೆಮ್ಮದಿಯ ಸ ಬರುತ್ತದೆ. ಈ ಬಂಡವಾಳ ಶಾಹಿಯ ಅ ಸನ್ನಿವೇಶಗಳು ಹೆಚ್ಚು ಹೆಚ್ಚು ಬಿಕ್ಕ ಉದ್ಭವಗೊಂಡುದರ ಸಂಕೇತ ಮುಂದೆ ಪ್ರಬಲ ಜನ ಚಳವಳಿ ಹಾಗೂ ಸಮಾಜ ಉಗಮದ ಸಂಕೇತವೂ ಕೂಡಾ ಆಗಿದೆ ಎ

ವಿಚಾರಸಂಕಿರಣದ ಅಧ್ಯಕ್ಷತೆಯನ್ನು ಆರ್.ಎಚ್.ಆಯಿ ವಹಿಸಿದ್ದರು. ಸ್ವಾಗತವ ಐ.ಬಿ.ಈಳಿಗೇರ ಮಾಡಿದರು ಹ ವಂದನಾರ್ಪಣೆಯನ್ನು ಡಾ. ಶಿವಾನಂದ ಮಾಡಿದರು. ಒಟ್ಟಾರೆ ಸಿ.ಆರ್. ಭಟ್ಟರ ನೆನ ಈಎರಡೂ ಕಾರ್ಯಕ್ರಮಗ ಅರ್ಥಪೂರ್ಣವಾದವು.

**- ಈಳಗೇರಾ.ಐ**

# ಹಲ್ಲಿ ಹೊರತಂದ ಹಾಸ್ಟೆಲ್ ಹುಳುಕು

*ಪುಟ 4 ರಿಂದ*

ಮುಖಂಡರು ಹಾಸ್ಟೇಲಿನ ಅಡುಗೆ ಸಿಬ್ಬಂಧಿಯವರನ್ನು ವಿದ್ಯಾರ್ಥಿಗಳೊಂದಿಗೆ ಅನುಚಿತವಾಗಿ ವರ್ತಿಸಬಾರದೆಂದು ಮನವಿ ಮಾಡಿದ್ದಾರೆ. ಪರಸ್ಪರ ಸಹಕರಿಸಿಕೊಂಡು ಹೋಗಲು ಒಪ್ಪಿಕೊಳ್ಳುವ ಬದಲು ಅವರು ಎಸ್.ಎಫ್.ಐ ಮುಖಂಡರೊಂದಿಗೂ ಅಸಭ್ಯವಾಗಿ ವರ್ತಿಸಿದ್ದಾರೆ. ಈ ಕುರಿತು ಮೇಲಾಧಿಕಾರಿಗಳಿಗೆ ದೂರು ನೀಡಿದರೂ ಏನೂ ಪ್ರಯೋಜನವಾಗಿರಲಿಲ್ಲ.

ಊಟ ಮಾಡಲು ಪ್ರತ್ಯೇಕವಾದ ಸ್ಥಳವಿಲ್ಲ. ರಾತ್ರಿ ಮಲಗಲಿಕ್ಕೂ ಸಾಕಷ್ಟು ಸ್ಥಳಾವಕಾಶವಿರುವ ಕೊಠಡಿಗಳಿಲ್ಲ. ವಿದ್ಯಾರ್ಥಿಗಳು ಅನಿವಾರ್ಯವಾಗಿ ಕಟ್ಟಡದ ಎದುರು ಬಯಲಿನಲ್ಲಿ ಮಲಗುತ್ತಾರೆ. ಹೀಗೆ ಸಮಸ್ಯೆಗಳ ಆಗರವಾಗಿದ್ದ ಈ ಹಾಸ್ಟೆಲಿನ ವಿದ್ಯಾರ್ಥಿಗಳು ಇತ್ತೀಚಿಗಷ್ಟೇ ಎಸ್.ಎಫ್.ಐ. ವಿದ್ಯಾರ್ಥಿ ಸಂಘಟನೆಯಲ್ಲಿ ಸದಸ್ಯತ್ವ ಪಡೆದು ನ್ಯಾಯಯುತವಾದ ಸೌಲಭ್ಯಗಳಿಗಾಗಿ ಹೋರಾಡಲು ನಿರ್ಧರಿಸಿದ್ದರು. ಇತ್ತೀಚಿಗೆ ಹಾವೇರಿಯಲ್ಲಿ ನಡೆದ ಎಸ್.ಎಫ್.ಐ. ಜಿಲ್ಲಾ ಸಮ್ಮೇಳನದ ಯಶಸ್ಸಿಗಾಗಿ ಈ ಹಾಸ್ಟೆಲ್ ವಿದ್ಯಾರ್ಥಿಗಳು ಹಗಲು ರಾತ್ರಿ ಶ್ರಮಿಸಿದ್ದರು ಮಾತ್ರವಲ್ಲ ಸಮ್ಮೇಳನದ ನಂತರ ನಡೆದ ಎರಡು ದಿನಗಳ ತರಬೇತಿ ಶಿಬಿರದಲ್ಲಿ ಆಸಕ್ತಿಯಿಂದ ಪಾಲ್ಗೊಂಡಿದ್ದರು.

**ಈಡೇರಿದ ಬೇಡಿಕೆಗಳು:** ಜಿಲ್ಲಾ ಕೇಂದ್ರದಲ್ಲಿರುವ ಈ ಸರ್ಕಾರಿ ಹಾಸ್ಟೆಲಿನ ದುರವಸ್ಥೆಯ ವಿವರಗಳನ್ನು ಕೇಳಿದ ತಾಲೂಕ್ ಪಂಚಾಯತಿಯ ವಿರೋಧ ಪಕ್ಷದ ಸದಸ್ಯರು ಆಡಳಿತ ಪಕ್ಷದವರ ವಿರುದ್ಧ ಕಿಡಿ ಕಾರಿದರು. ಎರಡೂ ಕಡೆಯವರ ನಡುವೆ ಕೆಲ ಕಾಲ ಮಾತಿನ ಚಕಮಕಿ ನಡೆದು ಒಂದು ಸಣ್ಣ ರಣರಂಗವೇ ನಿರ್ಮಾಣವಾಯಿತು. ವಿರೋಧ ಪಕ್ಷದ ಸದಸ್ಯರು ವಿದ್ಯಾರ್ಥಿಗಳಿಂದ ಹೆಚ್ಚಿನ ವಿವರಗಳನ್ನು ಕೇಳುತ್ತಿರುವಾಗ ಆಡಳಿತ ಪಕ್ಷದವರು ವಿದ್ಯಾರ್ಥಿಗಳನ್ನು ಬೆದರಿಸಲು ಪ್ರಯತ್ನಪಟ್ಟರು. ಆದರೆ ಎಸ್.ಎಫ್.ಐ ಮುಖಂಡರಾದ ವಿಜಯಕುಮಾರ್ ದೊಡ್ಡಮನಿ, ಗಂಗಯ್ಯ ಕುಲಕರ್ಣಿ, ನಾರಾಯಣ ಕಾಳೆ ಮೊದಲಾದವರು ತಾಲೂಕು ಪಂಚಾಯತ್ ಸದಸ್ಯರ ಪ್ರಶ್ನೆಗಳಿಗೆ ನಿರ್ಭಿಡೆಯಿಂದ ಉತ್ತರಿಸಿದರು. ಕೊನೆಗೆ ವಿದ್ಯಾರ್ಥಿಗಳ ಒತ್ತಡಕ್ಕೆ ಮಣಿದ ಆಡಳಿತ ಗುಂಪಿನ ಸದಸ್ಯರು ಹಾಸ್ಟೆಲಿಗೆ ಬೇಟಿ ಕೊಟ್ಟು ಸಮಸ್ಯೆಗಳನ್ನು ಈಡೇರಿಸಲು ಒಪ್ಪಿಕೊಂಡರು.

ಹಾಸ್ಟೆಲಿನ ಪರಿಸ್ಥಿತಿಯನ್ನು ಪರಿಶೀಲಿಸಿದ ಬಳಿಕ ವೈದ್ಯರನ್ನು ಕರೆಯಿಸಿ ಎಲ್ಲ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ನಡೆಸಿ ಅವಶ್ಯಕ ಚಿಕಿತ್ಸೆ ನೀಡಲಾಯಿತು. ಕುಡಿಯುವ ನೀರನ್ನು ಸಂಗ್ರಹಿಸಿಡಲು ಸಾವಿರ ಲೀಟರ್ ಸಾಮರ್ಥ್ಯದ ಎರಡು ಸಿಂಟೆಕ್ಸ್ ಟ್ಯಾಂಕುಗಳನ್ನು ತರಿಸುವ ಭರವಸೆ ನೀಡಲಾಯಿತಲ್ಲದೆ ಪ್ರತಿ ಮೂರು ದಿನಗಳಿಗೊಮ್ಮೆ ನೀರು ಸರಬರಾಜಿಗೆ ವ್ಯವಸ್ಥೆ ಮಾಡಲು ಒಪ್ಪಿಕೊಳ್ಳಲಾಯಿತು. ಬೆಳಗಿನ ಊಟವನ್ನು ಮಧ್ಯಾಹ್ನಕ್ಕೆ ಕೊಡುವ ವ್ಯವಸ್ಥೆ ಮಾಡಲಾಯಿತಲ್ಲದೆ ಬೆಳಗ್ಗೆ ಉಪಹಾರ ನೀಡುವುದನ್ನು ಮುಂದುವರಿಸಲು ನಿರ್ಧರಿಸಲಾಯಿತು. ವಿದ್ಯಾರ್ಥಿಗಳೊಂದಿಗೆ ಅನುಚಿತವಾಗಿ ವರ್ತಿಸುತ್ತಿದ್ದ ಮೂರು ಜನ ಅಡುಗೆ ಸಿಬ್ಬಂದಿಯವರ ಮೇಲೆ ಶಿಸ್ತಿನ ಕ್ರಮ ಜರುಗಿಸಿ ಅವರನ್ನು ಬೇರೆ ಕಡೆಗೆ ವ ಮಾಡಲಾಯಿತು. ಈ ವರ್ಷ ಇಲ್ಲಿಯವ ಕೊಡದಿರುವ ತಲಾ 2 ಜೊತೆ ಬಟ್ಟೆಗಳನ್ನು ಆ ಬೇಗ ವಿತರಣೆ ಮಾಡುವ ವಾ ನೀಡಲಾಯಿತಲ್ಲದೆ ಶೀಘ್ರದಲ್ಲಿ ವಿದ್ಯಾ ನಿಲಯವನ್ನು ಬೇರೊಂದು ಸುಸ್ಥಿತಿಯಲ್ಲಿ ಕಟ್ಟಡಕ್ಕೆ ವರ್ಗಾಯಿಸುವ ಭರವಸೆ ನೀಡಲಾಯಿತು.

ಹಲ್ಲಿಯೊಂದು ಅಡುಗೆಯಲ್ಲಿ ಅವಾಂತರಕ್ಕೆ ಕಾರಣವಾದರೂ ಹಾ ಹಾಸ್ಟೇಲಿನ ಹುಳುಕನ್ನು ಹೊರಗೆಡವಲು ನೆರವಾಯಿತು. 'ನಾವೇನೂ ಹಲ್ಲಿಯನ್ನು ಹೊ ಕುದಿಯುವ ಸಾಂಬಾರಿನಲ್ಲಿ ಹಾಕಿಲ್ಲ' ಎ ಅಡುಗೆಯವರು ಹೇಳುತ್ತಿರುವುದನ್ನು ಗಮನಿಸಿ 'ಕುಂಬಳಕಳ್ಳ ಎಂದಾಗ ಹೆಗಲ ಮುಟ್ಟಿ ನೋ ಎಂಬ ಗಾದೆ ಮಾತು ನೆನಪಾಗುತ್ತ ಎಸ್.ಎಫ್.ಐ ಸಂಘಟನೆಯಿಂದ ಬೆಂಬಲದಿಂದ ಹರ್ಷಭರಿತರಾಗಿರುವ ಹಾಸ್ಟ ವಿದ್ಯಾರ್ಥಿಗಳು ಸಂಘಟನೆಯನ್ನು ಗಟ್ಟಿಗೊಳಿ ನಿರ್ಧರಿಸಿರುವುದು ಹೆಮ್ಮೆಯ ವಿಷಯ.

**ಗಂಗಯ್ಯ ಕುಲ**
**ಕೋಣನ ತ**

# ಕುರುಗೋಡು :

# ಮಣಿಯಲೇಬೇಕಾಯ್ತು ಸರ್ಕಾರ

**ಜನ ಆರಿಸಿ ಕಳಿಸಿದ ಶಾಸಕರು ಅತ್ತ ಇಣುಕಿ ಹಾಕದೇ ಇದ್ದಾಗ, ಜನತೆ ಪ್ರತಿಭಟನೆಗೆ ಇಳಿದರು. ಹೋರಾಟ ಪ್ರಬಲವಾದಾಗ ಸರ್ಕಾರ ಮಣಿಯಲೇಬೇಕಾಯ್ತು. ಅದರ ವರದಿ ಇಲ್ಲಿದೆ**

ಕುರುಗೋಡು ಕಾಂಗ್ರೆಸ್ ಮೇಲೆ ರಾಜ್ಯ ಅಧ್ಯಕ್ಷ, ಮಾಜಿ ಸಚಿವರಾದ ಅಲ್ಲಂ ವೀರಭದ್ರಪ್ಪನವರು ಆಯ್ಕೆಯಾದ ಕ್ಷೇತ್ರ. ಇಂತಹ ಫಲಾನುಭವಿಗಳೂ ಆರಿಸಿ 'ಹೋದರು' ಜನತೆಯ ಪಾಲಿಗೆ ಕಡು ಕಷ್ಟ ತಪ್ಪಿಲ್ಲ. ಆ ಪ್ರದೇಶವೂ ಅಭಿವೃದ್ಧಿ ಆಗಿಲ್ಲ. ಇಂತಹ ಧೋರಣೆ ಪ್ರತಿಭಟಿಸಿ 11 ದಿನಗಳು ಮಹತ್ವದ ಚಳುವಳಿ ನಡೆಯಿತು. ಅಸಡ್ಡೆಯಿಂದ ನಿರ್ಲಕ್ಷಿಸಿದ್ದು ಅಧಿಕಾರಿಗಳು ಚಳುವಳಿದಾರರತ್ತ ಇರುವಂತೆ, ಸಮಸ್ಯೆ ಬಗೆಹರಿಸುವಂತಾದದ್ದು ಹೇಗೆ? ಆ ಚಳುವಳಿ ವರದಿ ಇಲ್ಲಿದೆ. ಕುರುಗೋಡು ಅಲ್ಲಂ ವೀರಭದ್ರಪ್ಪನವರನ್ನು ಮೂರು ಬಾರಿ ಶಾಸನಸಭೆಗೆ ಕಳುಹಿಸಿದ ಕ್ಷೇತ್ರ. ಕ್ಷೇತ್ರದ ಜನತೆಗಾಗಿ ಕಿಂಚಿತ್ತೂ ಕೆಲಸ ಮಾಡುತ್ತಿಲ್ಲ. ಜನತೆಯ ಮನವಿಗಳಿಗೆ ಕವಡೆ ಕಾಸಿನ ಬೆಲೆಯೂ ಇಲ್ಲ. ಮೂಲಭೂತ ಸೌಕರ್ಯಗಳಿಂದ ವಂಚಿತರಾದ ಈ ಕ್ಷೇತ್ರದ ಜನ ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದರೂ ಜನಪ್ರತಿನಿಧಿಯೆನಿಸಿಕೊಂಡವರು ಸಮಸ್ಯೆಗಳಿಗೆ ಸ್ಪಂದಿಸದಿದ್ದರೆ, ಇವರು ಚುನಾವಣೆಗೆ ನಿಂತು ಜನತೆಗೆ ಸುಳ್ಳು ಆಶ್ವಾಸನೆಗಳನ್ನು ಕೊಡುವುದಾದರೂ ಏಕೆ ಎಂಬುದು ಮತದಾರರ ಪ್ರಶ್ನೆ. ತಮ್ಮದೇ ಪಕ್ಷ ರಾಜ್ಯದಲ್ಲಿ ಆಡಳಿತ ನಡೆಸುತ್ತಿದೆಯಾದರೂ ತಮ್ಮ ಸ್ವಕ್ಷೇತ್ರದ ಅಭಿವೃದ್ಧಿಗಾಗಿ ಯಾವುದೇ ಪ್ರಯತ್ನವಿಲ್ಲ.

ಜನರ ಸಮಸ್ಯೆಗಳ ಬಗ್ಗೆ ಉದ್ದುದ್ದ ಭಾಷಣ ಬಿಗಿಯುವ ಇಲ್ಲಿನ ಪ್ರಮುಖ ವಿರೋಧ ಪಕ್ಷಗಳೂ ಸಮಸ್ಯೆ ಪರಿಹಾರಕ್ಕೆ ಹೋರಾಟವಿರಲಿ, ಕಿಂಚಿತ್ತೂ ಪ್ರಯತ್ನ ನಡೆಸುತ್ತಿಲ್ಲ.

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ವು ಜನರ ಮೂಲಭೂತ ಪ್ರಶ್ನೆಗಳನ್ನು ಎತ್ತಿಕೊಂಡು ನಿರಂತರ ಹೋರಾಟ ನಡೆಸಿ ಹಲವು ಬೇಡಿಕೆಗಳನ್ನು ಈಡೇರಿಸಿಕೊಂಡಿದೆ.

**ಹೋರಾಟಕ್ಕೆ ಮಣಿದ ಸರ್ಕಾರ**

ಬಳ್ಳಾರಿ ತಾಲೂಕಿನ ಕುರುಗೋಡು ಒಂದು ವಿಧಾನಸಭಾ ಕ್ಷೇತ್ರ. ಈ ಕ್ಷೇತ್ರ 86 ಹಳ್ಳಿಗಳನ್ನು ಒಳಗೊಂಡಿದ್ದು 1,90,000 ಮತದಾರರನ್ನು ಹೊಂದಿದೆ. ಈ ಕ್ಷೇತ್ರದ ನಾಲ್ಕು ಹೋಬಳಿಗಳ ಪೈಕಿ ಕುರುಗೋಡು ಹೋಬಳಿ(ಕೇಂದ್ರಾಯ ಗ್ರಾಮ)ಯೂ ಒಂದು. ಇಲ್ಲಿನ ಜನತೆ ತಾಲ್ಲೂಕು ಕೇಂದ್ರಕ್ಕೆ ಸರ್ಕಾರಿ ಕೆಲಸ ಕಾರ್ಯಗಳಿಗೆ ಹೋಗಬೇಕಾದರೆ 28 ಕಿ.ಮಿ. ದೂರದ ಬಳ್ಳಾರಿಗೆ ಹೋಗಬೇಕಾದ ಪರಿಸ್ಥಿತಿಯಾದರೆ, ಕುರುಗೋಡು ಹೋಬಳಿಗೆ ಸೇರಿದ ಎಮ್ಮಿಗನೂರು, ನೆಲ್ಲುಡಿ, ಕೊಟ್ಟಾಲ್ ಮತ್ತು ಬಳ್ಳಾಪುರ ಗ್ರಾಮಗಳ ಜನತೆ ತಾಲ್ಲೂಕು ಕೇಂದ್ರಕ್ಕೆ ಹೋಗಬೇಕಾದರೆ 48 ರಿಂದ 50 ಕಿ.ಮಿ. ದೂರ ಪ್ರಯಾಣಿಸಬೇಕು. ಅಧಿಕಾರಿಗಳನ್ನು ನೋಡಲು ಇಷ್ಟು ಶ್ರಮವಾದರೆ ಇನ್ನು ಜನಪ್ರತಿನಿಧಿಗಳನ್ನು ಕಾಣಬೇಕಾದರೆ ಚುನಾವಣೆಯನ್ನೇ ಕಾಯಬೇಕು.

ಬಡರೈತರು ಜಮೀನಿನ ಪಹಣಿಗಾಗಿ ಕೂಲಿಕಾರರು, ಕಾರ್ಮಿಕರು, ಸರ್ಕಾರದ ವಿವಿಧ ಇಲಾಖೆಗಳ ಕೆಲಸಗಳಿಗಾಗಿ ಜನರೆಲ್ಲಾ, ಕೆಲಸ ಕಾರ್ಯಗಳನ್ನು ಬದಿಗೊತ್ತಿ ದಿನನಿತ್ಯ ದೂರದ ಬಳ್ಳಾರಿಗೆ ಅಲೆಯಬೇಕಾದ ಪರಿಸ್ಥಿತಿ. ಇನ್ನು ವಿದ್ಯಾರ್ಥಿಗಳು ಜಾತಿ-ಆದಾಯದ ಪ್ರಮಾಣ ಪತ್ರ ಪಡೆಯಲು ಶಾಲೆಗೆ ರಜೆ ಹಾಕಿ ದೂರದ ಬಳ್ಳಾರಿಗೆ ಅಲೆಯುವ ಸ್ಥಿತಿಯಂತೂ ದಾರುಣವಾಗಿದೆ. ಸರ್ಕಾರಿ ಕೆಲಸ ಒಂದೇ ದಿನದಲ್ಲಿ ಮುಗಿಯುವ ಆಶಾಭಾವನೆ ಹೊಂದುವಂತಿಲ್ಲ. ಒಂದು ಗಂಟೆಯ ಕೆಲಸಕ್ಕೆ 3-4 ದಿನ ಅಲೆಯಬೇಕು. ಸಾಮರ್ಥ್ಯ ಇದ್ದವರು ಹಾಗೆ ಮಾಡಿಯಾರು, ಬಸ್ ಟಿಕೆಟ್‌ಗೆ ಹಣ ನೀಡಲಾಗದವರು, ಕೈಲಾಗದವರು ಅರ್ಧಕ್ಕೆ ತಮ್ಮ ಕೆಲಸಕ್ಕೆ 'ಗುಡ್ ಬೈ' ಹೇಳಿ ಸುಮ್ಮನಾಗುತ್ತಾರೆ. ಆದಕ್ಕಾಗಿ ಕುರುಗೋಡು ತಾಲೂಕಾಗುವವುದು ಅಗತ್ಯವಿದೆ.

**ನೀರಿನಲ್ಲಿ ಫ್ಲೋರೈಡ್ ಅಂಶ**

ಇಲ್ಲಿನ ಜನರ ಸಮಸ್ಯೆ ಇಷ್ಟಕ್ಕೇ ಮುಗಿಯಲಿಲ್ಲ. ಕುರುಗೋಡು ಮತ್ತು ಸುತ್ತಲಿನ ಹಳ್ಳಿಗಳ ಜನ ಕುಡಿಯುವ ನೀರಿಗಾಗಿ ಕೊಳವೆ ಬಾವಿಗಳನ್ನೇ ಆಶ್ರಯಿಸಿದ್ದಾರೆ. ಈ ನೀರು ಜನರ ಬಾಯಾರಿಕೆ ನೀಗುವ ಬದಲು ಅನೇಕ ಕಾಯಿಲೆಗಳಿಗೆ ಕಾರಣವಾಗಿದೆ. ಈ ನೀರಿನಲ್ಲಿ ಫ್ಲೋರೈಡ್ ಅಂಶ ಇರುವುದು ಪತ್ತೆಯಾಗಿದೆ. ಇಂತಹ ನೀರು ಕುಡಿದ ಹಲವರು ಈಗಾಗಲೇ ಕಾಲು, ಕೈ, ಮೈ ಬೇನೆಯಿಂದ ನರಳುತ್ತಿದ್ದಾರೆ. ಕೆಲವರಿಗೆ ಮೂತ್ರನಾಳದಲ್ಲಿ ಕಲ್ಲು ಸಂಗ್ರಹವಾಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ನೀರನ್ನು ಪರೀಕ್ಷೆಗೊಳಪಡಿಸಿದ ತಜ್ಞರು ಇದು ಕುಡಿಯಲು ಯೋಗ್ಯವಲ್ಲವೆಂದು ದೃಢೀಕರಿಸಿದ್ದಾರೆ. ಜನತೆ ಅನಿವಾರ್ಯವಾಗಿ ಇದೇ ನೀರನ್ನು ಕುಡಿಯುವಂತಹ ಪರಿಸ್ಥಿತಿಯನ್ನು ಸರ್ಕಾರ ಸೃಷ್ಟಿಸಿದೆ. ಕುರುಗೋಡಿನ ಸುತ್ತಲಿನ ಹಳ್ಳಿಗಳ ಬಡ ಕೂಲಿಕಾರರಲ್ಲಿ ಬಹುತೇಕ ಜನರ ವಾಸ ಬಾಡಿಗೆ ಗುಡಿಸಲುಗಳಲ್ಲಿ. ಕೆಲವರಿಗೆ ಸ್ಥಳವಿದ್ದರೂ ಮನೆ ಕಟ್ಟಿಕೊಳ್ಳುವ ಆರ್ಥಿಕ ಸಾಮರ್ಥ್ಯವಿಲ್ಲ. 'ಆಶ್ರಯ'ದಂತಹ ಯೋಜನೆಗಳು ರಾಜಕಾರಣಿಗಳ ಸಂಬಂಧಿಕರ ಮತ್ತು ಉಳ್ಳವರ ಪಾಲಾಗುತ್ತಿದೆ.



11 ದಿನಗಳ ಅಹೋರಾತ್ರ ಹೋರಾಟ

ಇನ್ನು ಇಲ್ಲಿನ ಗುಡಿಸಲುಗಳಿಗೆ ಆಕಸ್ಮಿಕ ಬೆಂಕಿ ತಗುಲಿದರೆ ಬೆಂಕಿ ನಂದಿಸಲು ಬಳ್ಳಾರಿಯಲ್ಲಿರುವ ಅಗ್ನಿಶಾಮಕ ದಳಕ್ಕೆ ತಿಳಿಸಿದರೆ, ಇಲ್ಲಿಗೆ ತಲುಪಲು ಕನಿಷ್ಠ ಒಂದು ಗಂಟೆ ಬೇಕು. ಅಷ್ಟರಲ್ಲಿ ಬೆಂಕಿಯ ರುದ್ರ ತಾಂಡವಕ್ಕೆ ಗುಡಿಸಲು ಅಥವಾ ಹುಲ್ಲಿನ ಬಣವೆ ಸುಟ್ಟು ಬೂದಿಯಾಗಿರುತ್ತದೆ.

**ಸಿಪಿಐ(ಎಂ) ನಿಂದ ಹೋರಾಟ**

ಇಂತಹ ಹಲವು ಸಮಸ್ಯೆಗಳ ವಿರುದ್ಧ ಹೋರಾಡಲು ಸಿಪಿಐ(ಎಂ) ನ ಕುರುಗೋಡು ಸ್ಥಳೀಯ ಸಮಿತಿ ನಿರ್ಧರಿಸಿ ಹೋರಾಟಕ್ಕಿಳಿಯಿತು. ಕುರುಗೋಡನ್ನು ತಾಲ್ಲೂಕ್ಕಾಗಿ ರಚಿಸಬೇಕು, ಈಗಿನ ಗ್ರಾಮಪಂಚಾಯತಿಯನ್ನು ಪಟ್ಟಣ ಪಂಚಾಯ್ತಿಯನ್ನಾಗಿ ಪರಿವರ್ತಿಸಬೇಕು, ಇಲ್ಲಿನ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಬೋಧಕ ಹುದ್ದೆ ಭರ್ತಿ, ಮಹಿಳಾ ವಸತಿ ನಿಲಯಕ್ಕೆ ಮಹಿಳಾ ಮೇಲ್ವಿಚಾರಕರ ನೇಮಕ, ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾರಂಭಿಸುವುದು, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, 110 ಕೆ.ವಿ. ವಿದ್ಯುತ್ ಘಟಕ, ಅಂಬೇಡ್ಕರ್ ಭವನ, ಆರೋಗ್ಯ ಕೇಂದ್ರ ಸ್ಥಾಪನೆ, ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಸೇರಿದಂತೆ ಹತ್ತು ಹಲವು ಬೇಡಿಕೆ ಮುಂದಿಟ್ಟು ಸಮಿತಿ ಹೋರಾಟಕ್ಕಿಳಿಯಿತು.

ಜನವರಿ 3 ರಂದು ಸಿಪಿಐ(ಎಂ) ಸ್ಥಳೀಯ ಸಮಿತಿ ನೇತೃತ್ವದಲ್ಲಿ 300 ಕ್ಕೂ ಅಧಿಕ ಕಾರ್ಯಕರ್ತರು ಬಳ್ಳಾರಿ ನಗರದಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಪತ್ರ ಕೊಟ್ಟರು. ಮನವಿ ಸ್ವೀಕರಿಸಿದ ಅಧಿಕಾರಿಗಳು ಜನವರಿ 7 ಕ್ಕೆ ಕುರುಗೋಡಿಗೆ ವಿವಿಧ ಇಲಾಖೆಗಳ ಅಧಿಕಾರಿಗಳು ಬಂದು ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರಾದರೂ ಅಂದುಯಾವ ಅಧಿಕಾರಿಯೂ ಬರಲಿಲ್ಲ. ಮರುದಿನವೇ ಸಭೆ ನಡೆಸಿದ ಸಮಿತಿ ಅಧಿಕಾರಿಗಳ ನಿರ್ಲಕ್ಷ್ಯವನ್ನು ಖಂಡಿಸಿತಲ್ಲದೆ ದೀರ್ಘಕಾಲದ ಹೋರಾಟಕ್ಕೆ ನಿರ್ಧರಿಸಿತು.

**ವ್ಯಾಪಕ ಸಿದ್ಧತೆ**

ಸಮಿತಿಯು ಜನವರಿ 20 ರಿಂದ 15 ದಿನಗಳ ನಿರಂತರ ಧರಣಿ ನಡೆಸಲು ನಿರ್ಧರಿಸಿ ವ್ಯಾಪಕ ಸಿದ್ಧತೆ ನಡೆಸಿತು. ಕುರುಗೋಡು ಸುತ್ತಲಿನ ಪ್ರತಿಯೊಂದು ಹಳ್ಳಿಗಳ ಜನರು ಧರಣಿಯಲ್ಲಿ ಭಾಗವಹಿಸುವಂತೆ ಮಾಡಲು ನಿರ್ಧರಿಸಿದರು. ಕುರುಗೋಡು, ಬಾದನಹಟ್ಟಿ, ಏಳುಬೆಂಚಿ, ಕ್ಯಾದಿಗೆಹಾಳ, ಗೆಣಕಿಹಾಳ, ಸೋಮಲಾಪುರ, ಮಾರುತಿ ಕ್ಯಾಂಪ್, ಎಮ್ಮಿಗನೂರು, ದಮ್ಮೂರು, ಲಕ್ಷ್ಮಿಪುರ, ಎಲ್ಲಾಪುರ, ಸಿದ್ದಮನಹಳ್ಳಿ ಹಾಗೂ ಹರಿಕೃಪ ಕಾಲೋನಿ ಈ ಹಳ್ಳಿಗಳನ್ನು ಗುರುತಿಸಿ ಒಂದೊಂದು ಹಳ್ಳಿಯ ಕಾರ್ಯಕರ್ತರು ಒಂದೊಂದು ದಿನ ಧರಣಿ ನೇತೃತ್ವ ವಹಿಸಬೇಕೆಂದು ತೀರ್ಮಾನಿಸಿದರು. ಜನವರಿ 18 ಮತ್ತು 19 ರಂದು 20 ಕ್ಕೂ ಅಧಿಕ ಹಳ್ಳಿಗಳಲ್ಲಿ ಜೀಪ್ ಜಾಥಾ ನಡೆಸಿ ಹೋರಾಟದಲ್ಲಿ ಭಾಗವಹಿಸುವಂತೆ ಜನತೆಗೆ ಕರೆ ಕೊಟ್ಟರು. ಸುಮಾರು ಮೂರು ಸಾವಿರ ಕರಪತ್ರ ಹಂಚಿದರು.

ಜನವರಿ 20 ರಂದು ಧರಣಿ ಆರಂಭವಾದ ನಂತರ ವಿವಿಧ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಬಂದು ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡತೊಡಗಿದರು. ಕೇವಲ ಭರವಸೆಯಿಂದ ಹೋರಾಟಗಾರರು ತೃಪ್ತಿಪಡಲಿಲ್ಲ, ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳೂ ಕುರುಗೋಡಿಗೆ ಬಂದು ನಮ್ಮ ಬೇಡಿಕೆ ಈಡೇರಿಸುವವರೆಗೆ ಹೋರಾಟ ನಿಲ್ಲುವುದಿಲ್ಲವೆಂದು ಹೇಳಿದರು. ಜನವರಿ 29 ರಂದು ಅಧಿಕಾರಿಗಳು ಪುನಃ ಧರಣಿ ನಿರತರ ಬಳಿ ಬಂದು ಫೆಬ್ರವರಿ 4 ರಂದು ಎಲ್ಲಾ ಇಲಾಖೆಯ ಅಧಿಕಾರಿಗಳು ಕುರುಗೋಡಿಗೆ ಬಂದು ನಿಮ್ಮ ಬೇಡಿಕೆ ಈಡೇರಿಸುವುದಾಗಿ ಹೇಳಿ ಹೋದರು. ಅಂದು 500 ಕ್ಕೂ ಅಧಿಕ ಜನರು ಸೇರಿದ್ದರು. ಅದರಂತೆ ಫೆ 4 ರಂದು ವಿವಿಧ ಇಲಾಖೆಗಳ 16 ಅಧಿಕಾರಿಗಳು ಕುರುಗೋಡಿಗೆ ಬಂದು ಸಿಪಿಐ(ಎಂ) ಮುಂದಿಟ್ಟಿರುವ ಎಲ್ಲಾ ಬೇಡಿಕೆಗಳನ್ನು ಒಪ್ಪಿಕೊಂಡಿರುವುದಾಗಿ ದಾಖಲೆ ಸಮೇತ ಸಾಬೀತು ಪಡಿಸಿದ ನಂತರ 11 ದಿನಗಳ ನಿರಂತರ ಹೋರಾಟ ಅಂತ್ಯವಾಯಿತು. ಹೋರಾಟಕ್ಕೆ ಸಿಕ್ಕ ಜಯದಿಂದಾಗಿ ಇಲ್ಲಿನ ಕಾರ್ಯಕರ್ತರು ಮತ್ತು ಜನತೆಗೆ ಹೊಸ ಚೈತನ್ಯ ಮೂಡಿದೆ.

ಹೋರಾಟದ ನೇತೃತ್ವವನ್ನು ಕಾಂ. ಶಿವಶಂಕರ್, ಗಾದಿಲಿಂಗಪ್ಪ, ಮಹಮದ್, ಚಿದಾನಂದಪ್ಪ, ಈರಮ್ಮ, ರಾಜಾಸಾಬ್ ಮುಂತಾದವರು ವಹಿಸಿದ್ದರು.

ಈ ಹೋರಾಟದ ನೇತೃತ್ವವನ್ನು ಶಿವಶಂಕರ್, ಗಾದಿ ಲಿಂಗಪ್ಪ, ಈರಮ್ಮ, ಮಹ್ಮದ್, ರಾಜಾಸಾಬ್ ಮುಂತಾದವರು ವಹಿಸಿದ್ದರು.

ಹಲವು ದಿನಗಳ ಹಂತ ಹಂತವಾಗಿ ಹೋರಾಟ ಮತ್ತು 11 ದಿನಗಳ ನಿರಂತರ ಧರಣಿ ಮತ್ತು ಹೋರಾಟದ ಪರಿಣಾಮವಾಗಿ ಸರ್ಕಾರ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಿದೆ.

ಕುರುಗೋಡಿಗೆ ಪೂರ್ಣ ಮತ್ತು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ವಿಶೇಷ ತಹಶೀಲ್ದಾರರ ನೇಮಕಕ್ಕೆ ರಾಜ್ಯಪಾಲರ ಆದೇಶ.

ಕುರುಗೋಡು ತಾಲ್ಲೂಕು ರಚನೆಯಾದಲ್ಲಿ ಸರ್ಕಾರದ ಇಲಾಖೆಗಳಿಗೆ ಬೇಕಾಗುವ ಕಛೇರಿ ಒದಗಿಸಲು ಮಿನಿ ವಿಧಾನಸೌಧ ಕಟ್ಟಿಸುವ ಯೋಜನೆ ಮಾಡಿ, ಜಿಲ್ಲಾಧಿಕಾರಿ, ತಹಶೀಲ್ದಾರ್, ಇಂಜಿನಿಯರ್ ಒಳಗೊಂಡ ಸಮಿತಿ ರಚನೆ (ಸಿಪಿಐ-ಎಂ ಪಕ್ಷದ ಇಬ್ಬರನ್ನು ಈ ಸಮಿತಿಗೆ ಸೇರಿಸಿಕೊಳ್ಳುವ ಸೂಚನೆ ಇದೆ)

- ಕುರುಗೋಡಿನಲ್ಲಿ 27 ಸಿಬ್ಬಂಧಿಯುಳ್ಳ ಅಗ್ನಿಶಾಮಕ ದಳ ರಚನೆ.
- ಶಾಲಾ ಕಾಲೇಜು ದುರಸ್ತಿ, ಶೌಚಾಲಯ ಮುಂತಾದ ಕಾಮಗಾರಿಗಳಿಗಾಗಿ ಜಿಲ್ಲಾ ಪಂಚಾಯ್ತಿಯಿಂದ 3 ಲಕ್ಷ ರೂ. ಮಂಜೂರು.
- ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಮಹಿಳಾ ಮೇಲ್ವಿಚಾರಕಿ ನೇಮಕ.
- ಕುರುಗೋಡಿಗೆ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾದ 30 ಮನೆಗಳನ್ನು ಕೆಲವು ರಾಜಕೀಯ ಮುಖಂಡರು ತಮ್ಮ ಸಂಬಂಧಿಕರಿಗೆ ಅಕ್ರಮವಾಗಿ ಹಂಚಿದ್ದ ಫಲಾನುಭವಿಗಳ ಪಟ್ಟಿ ರದ್ದು, ಸಾರ್ವಜನಿಕ ಸಭೆ ಕರೆದು ನಿಜವಾದ ಫಲಾನುಭವಿಗಳಿಗೆ ಹಂಚಲು ಅಧಿಕಾರಿಗಳ ಒಪ್ಪಿಗೆ
- ಎಲ್‌ಎಲ್‌ಸಿ ಕಾಲುವೆಯ ನೀರನ್ನು ಶುದ್ಧೀಕರಿಸಿ ಕುರುಗೋಡಿಗೆ ಕುಡಿಯಲು ಶುದ್ಧ ನೀರೊದಗಿಸಲು ನಿರ್ಧಾರ, ಕೆಲಸ ಪ್ರಾರಂಭ
- 110 ಕಿ.ವ್ಯಾ. ಶಕ್ತಿಯ ವಿದ್ಯುತ್ ಕೇಂದ್ರ ಸ್ಥಾಪಿಸಲು ಹಣ ಮಂಜೂರಾಗಿದ್ದು ಬಜೆಟ್ ಅಂಗೀಕಾರಕ್ಕಾಗಿ ಮಂಡನೆ
- ಅಂಬೇಡ್ಕರ್ ಭವನ ನಿರ್ಮಿಸಲು ಸ್ಥಳ ಮಂಜೂರು.

- ಗಾದಿ ಲಿಂಗಪ್ಪ
ಸಿದ್ದಯ್ಯ


# ಇರಾಕ್ ಅಮೆರಿಕದ ವಶವಾಗಿದೆಯೇ?

## ತೈಲಕ್ಕಾಗಿ ರಕ್ತಪಾತ !! ಮೂರನೇ ವಾರ!

**ಇರಾಕ್‌ನಲ್ಲಿ ಮಾರಣಹೋಮ ಮೂರನೇ ವಾರ ಮುಗಿಸಿ ನಾಲ್ಕನೇ ವಾರಕ್ಕೆ ಕಾಲಿಟ್ಟಿದೆ. ಅಮೆರಿಕನ್ ಸೈನ್ಯ ಬಾಗ್ದಾದ್‌ನ ಕೇಂದ್ರ ತಲುಪಿ, ಸದ್ದಾಂ ಹುಸೇನ್ ಮೂರ್ತಿ ಉರುಳಿದ್ದರೂ, ಸದ್ದಾಂ ಸರ್ಕಾರ ಉರುಳಿದೆ ಎಂದರೂ ಯುದ್ಧ ಮುಗಿದಿಲ್ಲ. ಭೀಕರ ಯುದ್ಧ ಇನ್ನೂ ಆರಂಭವಾಗಬೇಕಷ್ಟೆ. ಇನ್ನಷ್ಟು ಸಮಯ ಯುದ್ಧ ನಡೆಯಲಿದೆ ಎಂದಿದ್ದಾರೆ ಬುಶ್-ಬ್ಲೇರ್ ಗ್ಯಾಂಗ್. ಬಾಗ್ದಾದ್‌ನಲ್ಲಿ, ಇರಾಕಿನೆಲ್ಲೆಡೆ ಯುದ್ಧದ ಮಾರಣಹೋಮ, ಮೂಲ ಸೌಕರ್ಯಗಳ ಅಭಾವದ ಗಂಭೀರ ಸ್ಥಿತಿ ಜತೆಗೆ ಅರಾಜಕತೆ ಹರಡುತ್ತಿದೆ. ಮುಂದೇನು? ಎಂಬ ಪ್ರಶ್ನೆಗೆ ಯಾರ ಬಳಿಯೂ ಉತ್ತರವಿದ್ದಂತಿಲ್ಲ. ತೈಲಕ್ಕಾಗಿ ದುರಾಕ್ರಮಣದ ಮೂರನೇ ವಾರದ ಹಲವು ಮಗ್ಗಲುಗಳ ಬಗ್ಗೆ ವರದಿ**

ರಣರಂಗದಲ್ಲಿ

. ನಾಗರಿಕರ ಹತ್ಯೆ, ಹಾನಿ ಲೆಕ್ಕಿಸದೆ ಭೀಕರ ಬಾಂಬ್, ಗುಂಡಿನ ಸುರಿಮಳೆ ಬಳಸಿ ಅಮೆರಿಕದ ಪಡೆಗಳು ಬಾಗ್ದಾದ್‌ನ ಕೇಂದ್ರ ಮತ್ತು ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡಿದೆ. ಬಾಗ್ದಾದ್‌ನ ಕೇಂದ್ರ ಭಾಗದಲ್ಲಿ ಸದ್ದಾಂ ಹುಸೇನ್ ಮೂರ್ತಿಯನ್ನು ಅತ್ಯಂತ ಅನಾಗರಿಕ ರೀತಿಲ್ಲಿ ಕೆಡವಿ ಅದನ್ನು ಜಗಜ್ಜಾಹೀರು ಮಾಡಿದರೂ, ಸದ್ದಾಂ ಸರ್ಕಾರ ಬಿದ್ದಿದೆ ಎಂದು ಹೇಳಿದರೂ ಅದೇ ಉಸಿರಲ್ಲಿ ಯುದ್ಧ ಮುಗಿದಿಲ್ಲ ಎಂದಿದ್ದಾರೆ ಬುಶ್ - ಬ್ಲೇರ್ ಗ್ಯಾಂಗ್. ಇದಕ್ಕೆ ಕಾರಣ ಬಾಗ್ದಾದ್‌ನಲ್ಲಾಗಲೀ, ಬಸ್ರಾದಲ್ಲಾಗಲೀ ಅಥವಾ ಇನ್ಯಾವುದೇ ಪಟ್ಟಣದಲ್ಲಾಗಲೀ ಅಮೆರಿಕ-ಬ್ರಿಟನ್ ಪಡೆಗಳು ಪೂರ್ಣವಾಗಿ ವಶಪಡಿಸಿಕೊಳ್ಳಲಾಗಿಲ್ಲ.




ಇಡೀ ಇರಾಕನ್ನು ವಶಪಡಿಸಿಕೊಳ್ಳಲು ಅವರೇ ಹೇಳಿದಂತೆ ಬಹಳ ಸಮಯ ಹಿಡಿಯಬಹುದು. ಕೆಲವು ದಿನಗಳ ಹಿಂದೆ ನಿರೀಕ್ಷಿಸಿದಷ್ಟು ಭೀಕರ ಪ್ರತಿರೋಧ ಬಾಗ್ದಾದ್ ಮತ್ತು ಇತರ ನಗರಗಳಲ್ಲಿ ಕಂಡು ಬರದಿದ್ದರೂ, ಬರುವ ದಿನಗಳಲ್ಲಿ ತೀವ್ರಗೊಳ್ಳುವ ಸಾಧ್ಯತೆ ಇಲ್ಲದಿಲ್ಲ.

. ಸದ್ದಾಂ ಹುಸೇನ್ ಆತನ ಇಬ್ಬರು ಪುತ್ರರು ಮತ್ತು ಹಿರಿಯ ಅಧಿಕಾರಿಗಳು ಸೇರಿದಂತೆ ಎಲ್ಲರೂ ಬಾಂಬ್ ದಾಳಿಯಲ್ಲಿ ಮಡಿದಿದ್ದಾರೆ ಎಂದು ಸಿಐಎ ಹೇಳಿಕೊಂಡಿದ್ದರೂ, ಇದಕ್ಕೆ ಯಾವುದೇ ಪುಷ್ಟಿ ಸಿಕ್ಕಿಲ್ಲ. ಬ್ರಿಟಿಷ್ ಗುಪ್ತಚಾರರು ಸದ್ದಾಂ ಸತ್ತಿಲ್ಲ ಎಂದಿದ್ದಾರೆ. ರಶ್ಯನ್ ರಾಯಭಾರ ಕಛೇರಿಯಲ್ಲಿ ಬಚ್ಚಿಟ್ಟುಕೊಂಡಿದ್ದಾರೆ, ಭೂಗತರಾಗಿದ್ದಾರೆ, ತವರಾದ ವೆಕ್ರೀಪ್ ಪಟ್ಟಣಕ್ಕೆ ಹೋಗಿದ್ದಾರೆ, ಸಿರಿಯಾದಲ್ಲಿ ಅಡಗಿದ್ದಾರೆ - ಹೀಗೆ ಹಲವು ವದಂತಿಗಳು ಹರಡಿವೆ.

. ಬಾಗ್ದಾದ್‌ನಲ್ಲಿ ಅಮೆರಿಕ ಪಡೆಗಳು ಪ್ರವೇಶಿಸುತ್ತಿದ್ದಂತೆ ಅರಾಜಕತೆ ಹರಡಿದೆ. ಸರ್ಕಾರಿ ಕಚೇರಿ, ವಿಶ್ವಸಂಸ್ಥೆ ಕಚೇರಿ ಇತ್ಯಾದಿಗಳು, ಅಂಗಡಿಗಳ ಲೂಟಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಇತರ ಕೆಲವು ನಗರಗಳಲ್ಲೂ ಕೆಲವು ಪ್ರದೇಶಗಳಲ್ಲಿ ಲೂಟಿ ಆರಂಭವಾಗಿದೆ.

. ಬಾಗ್ದಾದ್, ಬಸ್ರಾ ಮತ್ತು ಇತರ ಹಲವು ಪಟ್ಟಣಗಳಲ್ಲಿ ನೀರು, ವಿದ್ಯುತ್ ಸರಬರಾಜು ನಿಂತಿದ್ದು ನಾಗರಿಕರಿಗೆ ದುರ್ಭರ ಸ್ಥಿತಿ ಉಂಟಾಗಿದೆ. ಈ ನಡುವೆ ಭೂ-ಕಾಳಗ ತೀವ್ರವಾಗಿದ್ದರಿಂದ ಗಾಯಗೊಂಡವರಿಂದ ಆಸ್ಪತ್ರೆಗಳು ತುಂಬಿ ತುಳುಕುತ್ತಿವೆ. ರಸ್ತೆಗಳಲ್ಲಿ ಅನಾಥವಾಗಿ ಹೆಣಗಳು ಬಿದ್ದಿರುವ ದೃಶ್ಯ ಸರ್ವೇಸಾಮಾನ್ಯ.

. ಮೂರು ಸಾವಿರಕ್ಕೂ ಹೆಚ್ಚು ಇರಾಕಿ ನಾಗರಿಕರು ಸತ್ತಿದ್ದು, ಸಾವಿರಾರು ಜನ ಗಾಯಗೊಂಡಿದ್ದಾರೆ. ಆಸ್ಪತ್ರೆಯಲ್ಲಿ ಔಷಧಿಗಳು, ಡಾಕ್ಟರು, ಸಿಬ್ಬಂದಿ ಎಲ್ಲದರ ಕೊರತೆಯಿಂದ ಸ್ಥಿತಿ ಭೀಕರವಾಗಿದೆ. ಹಲವು ಆಸ್ಪತ್ರೆಗಳಲ್ಲಿ ನೋವು-ನಿವಾರಕ, ಅರಿವಳಿಕೆ ಔಷಧಿಗಳಿಲ್ಲದೆ ತಲೆ-ನೋವು ಮಾತ್ರೆಗಳನ್ನು ಕೊಟ್ಟು ಆಪರೇಷನ್ ಮಾಡುವ ಪರಿಸ್ಥಿತಿ ಬಂದಿದೆ.

. ರಶ್ಯನ್ ರಾಯಭಾರ ಕಚೇರಿ ಸಿಬ್ಬಂದಿ ಸಿರಿಯಾಕ್ಕೆ ಹೋಗುವ ದಾರಿಯಲ್ಲಿ ಅಮೆರಿಕನ್ ವಿಮಾನ ಪಡೆಗಳ ದಾಳಿಗೆ ತುತ್ತಾಗಿದ್ದಾರೆ.

. ಕಿರ್ಕುಕ್ ಎಂಬ ತೈಲ ಪಟ್ಟಣವನ್ನು ಕುರ್ದಿಶ್ ಗೆರಿಲ್ಲಾಗಳು ವಶಪಡಿಸಿಕೊಂಡಿದ್ದು, ತುರ್ಕಿ ಈ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ಕುರ್ದಿಶ್ ಗೆರಿಲ್ಲಾಗಳು ಕಿರ್ಕುತ್ ವಶಪಡಿಸಿಕೊಳ್ಳಲು ಬಿಡಬಾರದು ಎಂಬುದು ಅಮೆರಿಕಾಕ್ಕೆ ತುರ್ಕಿ ಶರತ್ತಾಕಿತ್ತು. ತುರ್ಕಿ ವಿದೇಶ ಮಂತ್ರಿ ಈ ಬಗ್ಗೆ ತೀವ್ರ ಪ್ರತಿಭಟನೆ ಸಲ್ಲಿಸಿದ್ದು, ತನ್ನ ವೀಕ್ಷಕರನ್ನು ಕಳಿಸಲು ನಿರ್ಧರಿಸಿದೆ.

. ಹಲವು ಕಡೆಗಳಿಂದ ಅಮೆರಿಕನ್ ಸೈನಿಕರು ಚೆಕ್-ಪೋಸ್ಟ್‌ಗಳಲ್ಲಿ ನಗರಗಳ ಒಳಗಡೆ ಯಾವುದೇ ಪ್ರತಿರೋಧ - ಅಪಾಯವಿಲ್ಲದೆ ನಾಗರಿಕರ ಮೇಲೆ ಗುಂಡಿಟ್ಟುಕೊಂದ ಹಲವು ಘಟನೆಗಳು ವರದಿಯಾಗಿವೆ(ಬರಿಯ ಸಂಶಯ-ಭಯದಿಂದ)

. ಇರಾಕ್‌ನ ಉತ್ತರ ಮತ್ತು ದಕ್ಷಿಣದ ಹಲವು ನಗರಗಳಲ್ಲಿ ಅಮೆರಿಕ-ನಿಯಂತ್ರಿತ ಪ್ರದೇಶಗಳಲ್ಲಿ ಅನಿವಾಸಿ ಇರಾಕಿಗಳ ಪಡೆಗಳು ಅಮೆರಿಕನ್ ಮಿಲಿಟರಿ ವಾಹನಗಳಲ್ಲಿ ಬಂದು ಇಳಿದಿದ್ದು, ತೀವ್ರ ದಾಂಧಲೆ-ಗೂಂಡಾಗಿರಿಯಲ್ಲಿ ತೊಡಗಿವೆ.

. ಸದ್ದಾಂ ಮತ್ತು ಆತನ ಸಹಚರರು, ಕುಟುಂಬದವರು ಅಲ್ಲಿ ಅಡಗಿರಬಹುದು ಎಂಬ ಸಂಶಯದ ಮೇಲೆ ಆತನ ಹುಟ್ಟೂರು ತಿಕ್ರೀಸ್ ಮೇಲೆ ಭಾರಿ ಅಮೆರಿಕನ್ ಬಾಂಬ್ ದಾಳಿ ನಡೆದಿದೆ.

**ಯುದ್ಧ - ವಿರೋಧಿ ಚಳುವಳಿ**

● ಜಗತ್ತಿನಾದ್ಯಂತ ಯುದ್ಧ ಚಳುವಳಿಗಳು ಮುಂದುವರಿದಿವೆ. ಮಾಸ್ಕೋದಲ್ಲಿ ಈವಾರ 50 ಸಾವಿರದಷ್ಟು ಜನ ಭಾಗವಹಿಸಿದ ಈವರೆಗಿನ ಅತಿದೊಡ್ಡ ಪ್ರದರ್ಶನ ನಡೆಯಿತು. ಟ್ರೇಡ್ ಯೂನಿಯನ್ ಮತ್ತು ರಾಜಕೀಯ ಪಕ್ಷಗಳು ಇದನ್ನು ಸಂಘಟಿಸಿದ್ದವು. ಅಮೆರಿಕನ್ ರಾಯಭಾರ ಕಛೇರಿ ಎದುರು ಮುತ್ತಿಗೆ ಹಾಕಲಾಗಿತ್ತು.

● ಬ್ರಿಟಿಷ್-ಅಮೆರಿಕನ್ ಸರಕುಗಳನ್ನು ಬಹಿಷ್ಕಾರ ಮಾಡುವ ಚಳುವಳಿ ಜಗತ್ತಿನಾದ್ಯಂತ ವೇಗವಾಗಿ ಹಬ್ಬತೊಡಗಿದೆ. ಪೆಪ್ಸಿ-ಕೊಕಾಕೋಲಾ-ಮ್ಯಾಕ್ ಡೊನಾಲ್ಡ್‌ಗಳು ಪ್ರಮುಖ ಗುರಿಗಳಾಗಿವೆ.

● ಕೇರಳದಲ್ಲಿ ಬಹಿಷ್ಕಾರ ಚಳುವಳಿ ಆರಂಭವಾದ ಒಂದೇ ವಾರದಲ್ಲಿ ಪೆಪ್ಸಿ-ಕೋಲಾಗಳ ಮಾರಾಟ ಅರ್ಧದಷ್ಟು ಇಳಿದಿದೆ. ಇನ್ನೊಂದು ವಾರದಲ್ಲಿ ಕೇರಳವನ್ನು 'ಪೆಪ್ಸಿ-ಕೋಲಾ ರಹಿತ ಪ್ರದೇಶ'ವಾಗಿ ಮಾಡಬೇಕೆಂದು ಯುದ್ಧ-ಚಳುವಳಿ ಕರೆಕೊಟ್ಟಿದೆ.

● ಆಸ್ಟ್ರೇಲಿಯಾದಲ್ಲಿ ಯುದ್ಧ - ಹಡಗೊಂದನ್ನು 'ಗ್ರೀನ್‌ಪೀಸ್' ಕಾರ್ಯಕರ್ತರು ಹಲವು ಗಂಟೆಗಳ →

### ಬಾಗ್ದಾದ್ ಪತನದ ಬಗ್ಗೆ ಅರಬ್ ಆತಂಕ, ಕೋಪ

ಬಾಗ್ದಾದ್ ಪತನವಾಗಿ, ಅಮೆರಿಕ ಇರಾಕನ್ನು ಆಕ್ರಮಿಸಿ ನಿಯಂತ್ರಿಸುವತ್ತ ಬೆಳವಣಿಗೆ ಅರಬ್ ದೇಶಗಳಲ್ಲೆಲ್ಲಾ ಆತಂಕ, ಕೋಪದ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸದ್ದಾಂ ಹುಸೇನ್ ಅಧಿಕಾರ ಕಳೆದು ಕೊಂಡಿರುವುದರ ಬಗ್ಗೆ ಯಾರಿಗೂ ದುಃಖವಿಲ್ಲ. ಆದರೆ ಅಮೆರಿಕ ಇರಾಕನ್ನು 'ವಸಾಹತು' ಆಗಿಸುವುದು ಯಾರಿಗೂ ಇಷ್ಟವಿಲ್ಲ. ಈಜಿಪ್ಟ್, ಜೋರ್ಡಾನ್, ಸಿರಿಯಾ ಸರ್ಕಾರಗಳು ಇದನ್ನು ಸ್ಪಷ್ಟವಾಗಿ ಹೇಳಿವೆ. ಸದ್ದಾಂ ಹುಸೇನ್ ಮೂರ್ತಿಯ ತಲೆಗೆ ಅಮೆರಿಕನ್ ಧ್ವಜವನ್ನು ಹಾರಿಸಿದ್ದು, ಹಲವು ಇರಾಕಿ ಸ್ಮಾರಕಗಳ ಮೇಲೆ ಅಮೆರಿಕನ್ ಧ್ವಜ ಹಾರಿಸಿದ್ದನ್ನು ಅರಬ್ ಜಗತ್ತಿನಲ್ಲೆಲ್ಲಾ ಖಂಡಿಸಲಾಗಿದೆ. ಭಾರಿ ಸಂಖ್ಯೆಯ ನಾಗರಿಕರ ಸಾವು-ನೋವನ್ನು ಅವರು ಖಂಡಿಸಿದ್ದಾರೆ. ಯುದ್ಧ ತಕ್ಷಣ ನಿಲ್ಲಿಸಿ, ವಿಶ್ವಸಂಸ್ಥೆ ಮೇಲ್ವಿಚಾರಣೆಯಲ್ಲಿ ಇರಾಕಿಗಳೇ ಹೊಸ ಸರ್ಕಾರ ರಚಿಸಬೇಕು, ಶಸ್ತ್ರಾಸ್ತ್ರ ಪರೀಕ್ಷಣೆ ಮುಂದುವರೆಸಿ, ನರಮೇಧದ ಶಸ್ತ್ರಾಸ್ತ್ರಗಳು ಇಲ್ಲದಿದ್ದರೆ ದಿಗ್ಬಂಧನವನ್ನು ಹಿಂತೆಗೆದುಕೊಳ್ಳಬೇಕು ಎಂದೂ ಅವು ಒತ್ತಾಯಿಸಿವೆ. ಯಾವುದೇ ಸನ್ನಿವೇಶದಲ್ಲಿ ಅಮೆರಿಕ ಇರಾಕನ್ನು ಆಳಬಾರದು ಎಂದು ಸ್ಪಷ್ಟಪಡಿಸಿವೆ.


### ಮಾಧ್ಯಮ - ಯುದ್ಧ

● ಯುದ್ಧದ ಭೀಕರತೆ, ಸಾವುನೋವು ಹೆಚ್ಚಾದಂತೆ ಮಾಧ್ಯಮಗಳ ಪಾತ್ರ ಆಗ 'ಯುದ್ಧ' ಇನ್ನಷ್ಟು ತೀವ್ರವಾಗಿದೆ. ಯುದ್ಧದ ಭೀಕರ ಸಾವು-ನೋವು, ಜನರ ದಾರುಣ ಸ್ಥಿತಿಯನ್ನು ಅರಬ್ ಟೀವಿ ಮತ್ತಿತರ ಚಾನೆಲುಗಳು ತೋರಿಸಿದರೆ, ಅಮೆರಿಕ-ಬ್ರಿಟಿಷ್ ಚಾನೆಲುಗಳು ಅವನ್ನು ಪೂರ್ಣಸೆನ್ಸಾರ್ ಮಾಡಿದವು. ಸದ್ದಾಂ ಹುಸೇನ್ ಮೂರ್ತಿ ಕೆಡುವುದು, ಜನ ಕೇಕೆ ಹಾಕಿ ಕುಣಿಯುವುದು, ಲೂಟಿ ಮಾಡುವುದನ್ನು ಸದ್ದಾಂ ಅರಮನೆಯ ವೈಭವ-ದಿನಪೂರ್ತಿ ತೋರಿಸಿ ಯುದ್ಧ ಎಷ್ಟು 'ಅಗತ್ಯ' ಮತ್ತು 'ಕೂಲ್' ಆಗಿದೆ ಎಂದು ತಮ್ಮ ದೇಶದ ಜನತೆಗೆ ಮನವರಿಕೆ ಮಾಡಲು ಪ್ರಯತ್ನಿಸುತ್ತಿದ್ದರು. ಯುದ್ಧ-ವಿರೋಧಿ ಚಳವಳಿ, ರ್‍ಯಾಲಿಗಳನ್ನು ತೋರಿಸುವುದು ಹೆಚ್ಚು ಕಡಿಮೆ ನಿಲ್ಲಿಸಿ ಬಿಟ್ಟಿದ್ದರು.

● ತಮ್ಮ ಮೂಗಿಗೆ ನೇರವಾಗಿರದ ಸುದ್ದಿ ಕೊಡುವ ಚಾನೆಲುಗಳು, ಪತ್ರಕರ್ತರ ಮೇಲೆ ನೇರ ದಾಳಿಗಳನ್ನು ಮಾಡಿದ್ದಾರೆ. ಅಮೆರಿಕದ ಈ ದುರುಳ ನೀತಿಗೆ ಮೂವರು ಪತ್ರಕರ್ತರು ಬಲಿಯಾಗಿದ್ದಾರೆ. ಒಬ್ಬ ಖ್ಯಾತ ಅಲ್-ಜಜೀರಾ ಅರಬ್ ಚಾನಲ್‌ನ ಪತ್ರಕರ್ತ, ಇನ್ನೊಬ್ಬ ರೈಟರ್ಸ್ ಫೋಟೋಗ್ರಾಫರ್, ಮತ್ತೊಬ್ಬ ಸ್ಪೈನ್ ಪತ್ರಕರ್ತ. ಈ ಮೂವರು ಪತ್ರಕರ್ತರನ್ನು ಗುರಿಇಟ್ಟು ಅಮೆರಿಕನ್ ಪಡೆಗಳು ಕೊಂದಿದ್ದಾರೆ ಎಂದು ಹಲವು ಸ್ವತಂತ್ರ ಪತ್ರಕರ್ತ ವೀಕ್ಷಕರು ಹೇಳಿದ್ದಾರೆ.

● ಇಬ್ಬರು ಪೋರ್ಚುಗಲ್ ಪತ್ರಕರ್ತರನ್ನು (ಅವರ ಬಳಿ ಪರವಾನಿಗೆ ಇದ್ದರೂ) ಮಿಲಿಟರಿ ಪೋಲೀಸ್ ಬಂಧಿಸಿ ಅವರ ಮೇಲೆ ಹಲ್ಲೆ ನಡೆಸಿರುವ ವರದಿ ಬಂದಿದೆ.

● ಪತ್ರಕರ್ತರ ಅಂತರ್ರಾಷ್ಟ್ರೀಯ ಸಂಘಟನೆ ಮೂವರು ಪತ್ರಕರ್ತರ ಕೊಲೆಯನ್ನು ತೀವ್ರವಾಗಿ ಖಂಡಿಸಿದ್ದು ಇದು ಜಿನೇವಾ ಒಪ್ಪಂದದ ಸ್ಪಷ್ಟ ಉಲ್ಲಂಘನೆ ಎಂದು ಹೇಳಿದೆ.



ಲ ತಡೆದರು.ಹಡಗದ ಮೇಲೆ 'ಯುದ್ಧ - ರೋಧಿ' ಬ್ಯಾನರುಗಳನ್ನು ಹಚ್ಚಲಾಯಿತು.

ಮೆರಿಕದಲ್ಲಿ 'ಯುದ್ಧ ರಕ್ತಸಿಕ್ತ' ಕಂಪನಿಗಳ ಕೆಟಿಂಗ್ ತೀವ್ರವಾಗಿ ಮುಂದುವರೆದಿದೆ.

ಶಾಂತಿ ರ್‍ಯಾಲಿಗಳೂ ಮುಂದುವರಿದಿವೆ. ಸ್ಲೆಂಡ್ ಎಂಬಲ್ಲಿ ನೂರಾರು ಪ್ರದರ್ಶನಕಾರರನ್ನು ದುರಿಸಲು ರಬ್ಬರ್ ಬುಲೆಟ್ ಗೋಳಿಬಾರು ಡೆಸಿ ಹಲವರಿಗೆ ತೀವ್ರ ಗಾಯಗಳಾಗಿವೆ.

**ಾರು ಹಿತವರು ನಿನಗೆ ಈ ಮೂವರೊಳಗೆ?**

**ಲ್‌ಮಾಲ್ - ಝಿಯೋನಿಸ್ಟ್ - ಹಾಯುದ್ಧ'ಕೋರ'**

ಇರಾಕ್ ಇನ್ನೂ ಪೂರ್ಣ ವಶಕ್ಕೆ ಬರದಿದ್ದರೂ ಶ್-ಬ್ಲೇರ್ ಗ್ಯಾಂಗ್‌ನಲ್ಲಿ ಇರಾಕನ್ನು ಆಳುವುದು ಾರು? ಎಂಬ ಬಗ್ಗೆಗ ಜಿಜ್ಞಾಸೆ ಆರಂಭವಾಗಿದೆ. ಮೆರಿಕದ ಸರ್ಕಾರದ ಒಳಗೆ ಈ ಬಗ್ಗೆ ತೀವ್ರ ನ್ನಾಭಿಪ್ರಾಯಗಳಿವೆ. ಇರಾಕ್‌ನ ಮುಂದಿನ ೈಸ್‌ರಾಯ್' ಹುದ್ದೆಗೆ ಮೂವರು ್ಯರ್ಥಿಗಳಿದ್ದಾರೆ. ಆದರೆ ಇರಾಕಿಗಳಿಗೆ ಈ ಮೂವರೊಳಗೂ ಆಯ್ಕೆ ಇರಲಿಕ್ಕಿಲ್ಲ. ಈ ಮೂವರು ಇರಾಕಿನಲ್ಲಿ ಈಗಾಗಲೇ ಇಳಿದಿದ್ದು ಮ 'ಆಡಳಿತ ಪ್ರದೇಶ'ವನ್ನು ...ಕೊಳ್ಳುತ್ತಿದ್ದಾರೆ.

ಮೊದಲ ಆಸಾಮಿ ಅನಿವಾಸಿ ಇರಾಕಿ ಹಮದ್ ಚಲಾಬಿ. ಅಮೆರಿಕದಲ್ಲಿರುವ ಇರಾಕಿ ಘಟನೆ 'ಇರಾಕಿ ನ್ಯಾಶನಲ್ ಕಾಂಗ್ರೆಸ್' ನ ಯಕ. ಈತಇರಾಕ್‌ನಿಂದ ಓಡಿ ಬಂದಿದ್ದು, ಲ್ಕು ದಶಕಗಳಲ್ಲಿ ಇರಾಕ್‌ನಲ್ಲಿ ಕಾಲಿಟ್ಟಿಲ್ಲ. 50ರ ಶಕದಲ್ಲಿ ಆತ ಜೋರ್ಡಾನ್‌ನಲ್ಲಿ ಒಂದು ್ಯಾಂಕ್ ನಡೆಸುತ್ತಿದ್ದು, ಅಲ್ಲಿ ನೂರಾರು ಕೋಟಿ ಲರುಗಳ ಆರ್ಥಿಕ ಹಗರಣಗಳನ್ನು ಮಾಡಿ ್ಕಿಕೊಳ್ಳುವ ಭಯದಿಂದ ಲಂಡನ್‌ಗೆ ಓಡಿ ಹೋಗಿದ್ದ. ಆತನ ಗೈರು ಹಾಜರಿಯಲ್ಲಿ ಜೋರ್ಡಾನ್ ಕೋರ್ಟು ಆತನಿಗೆ 22 ವರ್ಷಗಳ 'ಕಠಿಣ ಶಿಕ್ಷೆ' ವಿಧಿಸಿದೆ!. ಚಲಾಬಿಯ 'ಕಾಂಗ್ರೆಸ್' ಹಲವು ವರ್ಷಗಳಿಂದ ಲಕ್ಷಾಂತರ ಡಾಲರು 'ಗ್ರಾಂಟ್' ಪಡೆಯುತ್ತಿದ್ದು, ಆಲ್ಲೂ ಇದಕ್ಕೆ ಲೆಕ್ಕ ಸಿಗುತ್ತಿಲ್ಲ ಎಂದು ಅಮೆರಿಕನ್ ವಿದೇಶಾಂಗ ಖಾತೆಯ ಅಧಿಕಾರಿಗಳು ಗೊಣಗುತ್ತಿದ್ದರು ಎಂದು ವರದಿಯಾಗಿದೆ. ಚಲಾಬಿಗೆ ಅಧಿಕಾರ ಕೊಡುವುದಕ್ಕೆ ಸಿಐಎ ಮತ್ತು ವಿದೇಶಾಂಗ ಖಾತೆ ಕಟುವಾಗಿ ವಿರೋಧಿಸಿದೆ. ಆದರೆ ರಕ್ಷಣಾ ಮಂತ್ರಿ ಆತನ 'ಗಾಡ್‌ಫಾದರ್'!

ಎರಡನೆಯ ಆಸಾಮಿ ಜನರಲ್ ಜಯ್ ಗಾರ್ನರ್. ಈತ ಮಾಜಿ ಜನರಲ್. ಅಮೆರಿಕನ್ ಶಸ್ತ್ರಾಸ್ತ್ರ ಕಂಪನಿಗಳು ಮತ್ತು ಜ್ಯೂ ಲಾಬ್ಬಿಗೆ ಬೇಕಾದವನು. ಸೈನ್ಯದಿಂದ ನಿವೃತ್ತನಾದ ನಂತರ ಒಂದು ಶಸ್ತ್ರಾಸ್ತ್ರ ಕಂಪನಿಯಲ್ಲಿ ಡೈರೆಕ್ಟರ್ ಆಗಿ ಸೇರಿಕೊಂಡಿದ್ದ. ಅಕ್ಟೋಬರ್ 2000 ದಲ್ಲಿ ಈತ ಇಸ್ರೇಲಿಗೆ ಭೇಟಿ ನೀಡಿ 'ಶಾಂತಿ ಮಾತುಕತೆ' ಮುರಿದು ಬಿದ್ದ ನಂತರದ ಹಿಂಸಾಚಾರಕ್ಕೆ ಪ್ಯಾಲೆಸ್ಟೇನ್ನರೇ ಕಾರಣ. ಇಸ್ರೇಲ್ ಬಹಳ 'ಸಂಯಮ' ದಿಂದ ನಡೆದುಕೊಂಡಿದೆ ಎಂದು ಅಪ್ಪಣೆ ಕೊಡಿಸಿ, ತಾನು ಅಪ್ಪಟ 'ಝಿಯೋನಿಸ್ಟ್' ಎಂದು ಬಿರುದು ಗಿಟ್ಟಿಸಿದ್ದ.




ಮೂರನೇ ಆಸಾಮಿ ಮಾಜಿ ಸಿಐಎ ಮುಖ್ಯಸ್ಥ ಜೆಮ್ಸ್ ವೂಲ್ಸೀ. ಈತ ಕಳೆದ ವಾರ ಇರಾಕ್ ಯುದ್ಧ 'ನಾಲ್ಕನೇ ಮಹಾಯುದ್ಧದ ಆರಂಭ' ಎಂದು ಅಪ್ಪಣೆ ಕೊಡಿಸಿದ್ದ!. ಆತ 'ಶೀತ ಸಮರ'ವನ್ನು 'ಮೂರನೇ ಯುದ್ಧ' ಎಂದು ಬಣ್ಣಿಸಿದ್ದನಂತೆ.

**ರಶ್ಯಾ, ಜರ್ಮನಿ, ಫ್ರಾನ್ಸ್ - ವಿಶ್ವಸಂಸ್ಥೆ ಪ್ರಮುಖ ಪಾತ್ರಕ್ಕೆ ಒತ್ತಾಯ**

ರಶ್ಯಾ, ಜರ್ಮನಿ, ಫ್ರಾನ್ಸ್‌ಗಳ ಈ ವಾರದ ಕೊನೆಯಲ್ಲಿ ಶೃಂಗಸಭೆ ನಡೆಸಲಿದ್ದು, ಯುದ್ಧೋತ್ತರ ಇರಾಕಿನ ಭವಿಷ್ಯ ನಿರ್ಧರಿಸುವಲ್ಲಿ ವಿಶ್ವಸಂಸ್ಥೆಗೆ ಪ್ರಮುಖ ಪಾತ್ರ ಇರಬೇಕೆಂದು ಒತ್ತಾಯಿಸಲಿವೆ. ಅಮೆರಿಕ-ಬ್ರಿಟನ್‌ಗಳು ವಿಶ್ವಸಂಸ್ಥೆಗೆ ಪ್ರಾಥಮಿಕ ಪಾತ್ರ ಕೊಡಲು ತಯಾರಿಲ್ಲ. ಈ ಬಗ್ಗೆ ಹೊಸದಾಗಿ ರಾಜತಾಂತ್ರಿಕ ಘರ್ಷಣೆ ನಡೆಯುವ ಸಂಭವವಿದೆ. ಯುರೋಪಿಯನ್ ಒಕ್ಕೂಟದ ಸಭೆ ಸಹ ಈ ಬಗ್ಗೆ ನಡೆಯಲಿದ್ದು ಕೋಫಿ ಅನ್ನನ್ ಈ ಸಭೆಯಲ್ಲಿ ಹಾಜರಿರುವರು.

ಇರಾನ್, ಸಿರಿಯಾ ಮತ್ತಿತರ 'ಭಯೋತ್ಪಾದಕ ಗುಂಪು'ಗಳ ವಿರುದ್ಧ ಯುದ್ಧ ಮುಂದುವರೆಯಬೇಕು ಎಂದೂ ಅಪ್ಪಣೆ ಕೊಡಿಸಿದ್ದಾನೆ.

ಸದ್ದಾಂ ಹುಸೇನರಿಗೆ ಬದಲಿಯಾಗಿ ಇರಾಕಿಗಳಿಗೆ ಎಂತಹ ಆಯ್ಕೆ! ಬುಶ್ ಗ್ಯಾಂಗ್‌ನ ಒಳಜಗಳದಿಂದಾಗಿ ಇವರೆಲ್ಲರಿಗೂ ಒಂದೊಂದು 'ಪೋಸ್ಟ್' ಕೊಟ್ಟು ಮೂವರನ್ನು ಇರಾಕ್‌ಆಳಲು ಕಳಿಸುವ ನಿಜವಾದ ಅಪಾಯವೂ ಇದೆ. ಇವರು ಯಾರಿಗೆ 'ರಿಪೋರ್ಟ್' (ವಾಶಿಂಗಟನ್‌ನಲ್ಲಿ) ಮಾಡಿಕೊಳ್ಳುತ್ತಾರೆ ಎಂಬುದು ವಿವಾದಾಸ್ಪದ ವಿಷಯವಂತೆ! ಪಾಪ ಅಮೆರಿಕನ್ನರಿಗೆ ವಸಾಹತುಗಳನ್ನು 'ನಡೆಸಿ' ಅಭ್ಯಾಸವಿಲ್ಲ. ಬಹುಶಃ ಬ್ರಿಟಿಷರು ಅವರಿಗೆ ಸಹಾಯ ಮಾಡಬಹುದೇನೋ!!

# ಔಷಧಿ ಹಗರಣ ಮುಚ್ಚಿಹಾಕುವ ಹುನ್ನಾರ.....


ಯಾರಿಸಿದ ಗ್ಲೆಬೆನ್‌ಕ್ಲೆ ಮ್ಯಾಡ್ (Glebenclmide) ಎಂಬ ಔಷಧಿ (ಸಕ್ಕರೇ ಯಿಲೆಗೆ ಉಪಯೋಗಿಸುವ) ಕೋಮ್ಸಾಟ್ ೋರ್ಟ್‌ನೊಂದಿಗೆ ಕಲಬೆರಕೆ ಹೊಂದಿದ್ದರಿಂದ ದುರಂತ ಉಂಟಾಗಿದೆಯೆಂದು ತಿಳಿದುಬಂತು. ದರೂ ಔಷಧಿ ನಿಯಂತ್ರಣ ಆ ಕಂಪನಿಯ ೀಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆ ಂಪನಿಯು ವ್ಯವಸ್ಥಾಪಕ 'ಹಣಕೊಟ್ಟು ಡಿಹೋದ'ನೆಂದು ಔಷಧಿ ನಿಯಂತ್ರಣದ ಧಿಕಾರಿಗಳೇ ವರದಿ ಮಾಡಿದ ಸಂಗತಿ ಿದುಬಂದಿದೆ.

ಇದೇ ಔಷಧಿಯಿಂದ ಇದೇ ತರಹದ ದುರಂತ ುಂಬೈನಲ್ಲಿ ಸಂಭವಿಸಿತು ಎಂಬ ವರದಿ ಔಷಧಿ ಂಪನಿಗೂ ಹಾಗೂ ನಿಯಂತ್ರಣಕ್ಕೂ ಮೊದಲೇ ಿದಿತ್ತು ಎಂದು ವರದಿಯಾಗಿದೆ. ಇದು ಅಕ್ಷಮ್ಯ ಪರಾಧವಲ್ಲವೇ? ಆದರೂ ಔಷಧಿ ಯಂತ್ರಣದ ನಿರ್ಲಕ್ಷ್ಯ ಏಕೆ? ಔಷಧಿ ರಂತವನ್ನು ಜಗತ್ಪ್ರಸಿದ್ಧಂತ 'Tip of the eberg phonomenon' ಎಂದು ...ಸಲಾಗುತ್ತದೆ. ಅದು ಅತೀ ಅಪಾಯದ ...ಕೇತ.

**...ಚಾರ**

ಔಷಧಿ ನಿಯಂತ್ರಣದ ಭ್ರಷ್ಟಾಚಾರ ಗೌಪ್ಯ ವಿಷಯವೇನಲ್ಲ. ಔಷಧಿ ಮಾರುವ ಅಂಗಡಿಗಳಲ್ಲಿ ಎಲ್ಲರಿಗೂ ಗೊತ್ತಿದ್ದ ವಿಷಯವೇ ಸರಿ. ಸಣ್ಣ ಸಣ್ಣ ತಪ್ಪುಗಳಾಗುತ್ತಿದ್ದುದರಿಂದ ಔಷಧಿ ಅಂಗಡಿಗಳು ಔಷಧಿ ನಿಯಂತ್ರಣಕ್ಕೆ ಮಾಮೂಲಾಗಿ ಮೂರು ತಿಂಗಳಿಗೊಮ್ಮೆ ಹಣ ಕೊಡುತ್ತಿದ್ದ ವಿಷಯ ಅನೇಕರಿಂದ ತಿಳಿದುಬಂದಿದೆ.

ಈ ತನಿಖೆ ನಡೆಯುವ ಸಮಯದಲ್ಲಿ ಔಷಧಿ



ನಿಯಂತ್ರಣದ ಸುಮಾರು ಎಲ್ಲಾ ನೌಕರರು ಇದನ್ನು ಒಪ್ಪಿಕೊಂಡಿದ್ದಾರೆ. ಔಷಧಿ ಅಂಗಡಿಗಳ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ, ಇದು ಸಣ್ಣ ಪ್ರಮಾಣದ ಭ್ರಷ್ಟಾಚಾರ. ಆದರೆ ಇನ್ನೂ ಅನೇಕ ದೊಡ್ಡ ಪ್ರಮಾಣದ ಭ್ರಷ್ಟಾಚಾರಗಳು ಬೆಳಕಿಗೆ ಬಂದಿವೆ. ಎಲೆಗೆಂಟ್ ಫಾರ್ಮಾ ಎಂಬ ಔಷಧಿ ಕಂಪನಿಯ ವಿರುದ್ಧ ಔಷಧಿ ಬೆಲೆ ನಿಯಂತ್ರಣದ ಕಾನೂನು ಉಲ್ಲಂಘಿಸಿದ್ದಕ್ಕಾಗಿ ಕೇಸ್ ಬುಕ್ ಮಾಡಲಾಗಿತ್ತು. ಆದರೆ ಅದನ್ನು ಕೈ ಬಿಡಲಾಗಿದೆ. ಏಕೆ?

ಬೆಂಗಳೂರಿನ ಪಿ.ಕೆ.ಫಾರ್ಮಾ ಎಂಬ ಔಷಧಿ ಕಂಪನಿಯನ್ನು ಸರಕಾರ ಕಪ್ಪು ಪಟ್ಟಿಗೆ ಸೇರಿಸಿತ್ತು. ಆ ಕಂಪನಿಯ ವಿರುದ್ಧ ಒಂದು ವರ್ಷದ ಹಿಂದೆಯೇ ರಾಜ್ಯದ ವಿವಿಧೆಡೆ 17 ಪ್ರಕರಣಗಳು ದಾಖಲಾಗಿದ್ದವು. ಓರಿಸ್ಸಾ ಡ್ರಗ್ಸ್ ಅಂಡ್ ಫಾರ್ಮಾ ಕಂಪನಿಯ ಹೆಸರಿನಲ್ಲಿ ಪಿ.ಕೆ. ಫಾರ್ಮಾ ಔಷಧಿ ತಯಾರಿಸುತ್ತಿದ್ದು, ಸರ್ಕಾರ ಔಷಧಿಗಳನ್ನು ಖರೀದಿಸುತ್ತಿದೆ. ಆದರೂ ಔಷಧಿ ನಿಯಂತ್ರಣ ಇದರ ಬಗ್ಗೆ ಕಾಳಜಿ ವ್ಯಕ್ತಪಡಿಸಿಲ್ಲ ಹಾಗೂ ಸರಕಾರಕ್ಕೇಕೆ ತಿಳಿಸಿಲ್ಲ? ಔಷಧಿ ಕಟ್ಟಿನ (pack) ಮೇಲೆ ಬೆಲೆ ನಮೂದಿಸುವುದು ಕಡ್ಡಾಯವಾಗಿದೆ. ಆದರೆ ನಾಲ್ ಎಂಬ ಕಂಪನಿಯು ಇನ್ಸುಲಿನ್ ಔಷಧಿಯನ್ನು ಇನ್ಸುಲಿನ್ ಆಮದು ಮಾಡುತ್ತಿದ್ದು, ಆ ಔಷದಿ ಕಟ್ಟಿನ ಮೇಲೆ ಔಷದಿ ಬೆಲೆಯನ್ನು ನಮೂದಿಸದೆ ಔಷಧಿಯನ್ನು ಮಾರುತ್ತಿದ್ದರೂ ಔಷಧಿ ನಿಯಂತ್ರಣ ಮೌನವಾಗೇ ಉಳಿದಿದೆ. ಇದು ಭ್ರಷ್ಟಾಚಾರಕ್ಕೆ ಸಹಾಯ ಮಾಡಿದೆ.

ಔಷದಿ ನಿಯಂತ್ರಣದ ಕಛೇರಿಗೆ ಲೋಕಾಯುಕ್ತರು ಭೇಟಿ ನೀಡಿದಾಗ ಅಲ್ಲಿಯ ಔಷಧಿ ಪರೀಕ್ಷಾ ಪ್ರಯೋಗಾಲಯ ಅಸ್ತವ್ಯಸ್ತವಾಗಿದ್ದದು ಆತಂಕ ಉಂಟು ಮಾಡಿದೆ. ಅಲ್ಲಿ ಅನೇಕ ದುಬಾರಿ ಉಪಕರಣಗಳು ಹಾಳಾಗಿ ಬಿದ್ದಿದ್ದು, ಅನೇಕ ಉಪಕರಣಗಳನ್ನು ಉಪಯೋಗಿಸಲಾಗುತ್ತಿಲ್ಲ. ಔಷಧಿ ನಿಯಂತ್ರಣದ ಗುಣಮಟ್ಟ ಅಲ್ಲಿಯ ಪ್ರಯೋಗಾಲಯ ನಿರ್ಧರಿಸುತ್ತದೆ. ಪ್ರಯೋಗಾಲಯವೇ ಅಸ್ತವ್ಯಸ್ತವಾಗಿರುವುದರಿಂದ ಅಲ್ಲಿ ಯಾವ ತರಹದ ಔಷಧಿ ಪರೀಕ್ಷೆಗಳು ನಡೆಯುತ್ತಿರಲುಸಾಧ್ಯ? ಔಷಧಿ ಪ್ರಯೋಗಾಲಯ ರಾಜ್ಯಕ್ಕೆ ಮಾದರೀ ಪ್ರಯೋಗಾಲಯವಾಗುವುದರ ಬದಲು ಅಸ್ತವ್ಯಸ್ತವಾಗಿರುವುದು ಔಷಧಿ ನಿಯಂತ್ರಣದ ಬೇಜವಾಬ್ದಾರಿ ಹಾಗೂ ದಿವ್ಯ ನಿರ್ಲಕ್ಷ್ಯವನ್ನು ಸೂಚಿಸತ್ತದೆ.

**ಔಷದಿ ನಿಯಂತ್ರಣ ಅನಗತ್ಯ ಅಪಾಯಕರ ಔಷಧಿಗಳನ್ನು ನಿಷೇಧಿಸುವ ಬದಲು ಪ್ರೋತ್ಸಾಹಿಸುತ್ತಾ ಭ್ರಷ್ಟಾಚಾರದಲ್ಲಿ ಮುಳುಗಿದೆ. ಇಂದು ಮಾರುಕಟ್ಟೆಯಲ್ಲಿ ದೊರಕುವ ಎಷ್ಟೋ ಔಷಧಿಗಳು ಅಪಾಯಕರ ಎಂಬುದನ್ನು ಊಹಿಸಬಹುದಾಗಿದೆ.** ಔಷಧಿ ಕ್ರಿಯಾವೇದಿಕೆ ಈ ಎಲ್ಲಾ ವಿಷಯಗಳನ್ನು ಕೂಲಂಕುಶ ತನಿಖೆ ಮಾಡಲು ಲೋಕಾಯುಕ್ತ ಹಾಗೂ ಸರಕಾರಕ್ಕೆ ಕೇಳಿಕೊಂಡಿದೆ. ಮಾಧ್ಯಮಗಳು ಜನರಿಗೆ ಈ ವಿಷಯವನ್ನು ತಿಳಿಸುತ್ತ ಜನರು ಸರಕಾರದ ಮೇಲೆ ಒತ್ತಡ ತರುವುದು ಇಂದಿನ ಅಗತ್ಯತೆಯಾಗಿದೆ.

- ಫಕ್ರುದ್ದೀನ್

# ಯುವತಿಯರನ್ನು ಸಂಘಟಿಸಲು ಸನ್ನದ್ಧಗೊಳಿಸಿದ ಸಮಾವೇಶ

**ಯುವಜನರ ಬಹುದೊಡ್ಡ ಭಾಗವಾಗಿರುವ ಯುವತಿಯರನ್ನು ಸಂಘಟಿಸಿ ನಾಯಕತ್ವಕ್ಕೆ ಬೆಳೆಸುವ ದಿಶೆಯಲ್ಲಿ ಡಿವೈಎಫ್ಐ ನ ರಾಷ್ಟ್ರಮಟ್ಟದ ಸಮಾವೇಶ ಕಲ್ಕತ್ತದಲ್ಲಿ ಮಾರ್ಚ್ 15 ಮತ್ತು 16 ರಂದು ಜರುಗಿದೆ. ಅದರ ವರದಿ**

ಪ್ರಥಮ ಅಖಿಲ ಭಾರತ ಯುವತಿಯರ ಸಮಾವೇಶದ ಸಮಾರೋಪ ಸಮಾರಂಭದ ಅಂಗವಾಗಿ ಡೊಲ್ಲಾಪಾರ್ಕನಲ್ಲಿ ಬೃಹತ್ ವರ್ಣರಂಜಿತ ರ್‍ಯಾಲಿಯನ್ನು ಏರ್ಪಡಿಸಲಾಗಿತ್ತು. ಸಹಸ್ರಾರು ಜನ ಭಾಗವಹಿಸಿದ್ದ ಈ ರ್‍ಯಾಲಿಯಲ್ಲಿ ಬಹುಸಂಖ್ಯೆಯಲ್ಲಿ ಯುವತಿಯರೇ ಇದ್ದದ್ದು ವಿಶೇಷ. ಮಾರ್ಗದ ಇಕ್ಕೆಲಗಳಲ್ಲೂ ರ್‍ಯಾಲಿಯಲ್ಲಿದ್ದ ಸಂಗಾತಿಗಳಿಗೆ ಶುಭ ಹಾರೈಸುತ್ತಿದ್ದ ಜನ, ಸ್ವಾಗತ ಕಮಾನು, ಬ್ಯಾನರ್‌ಗಳು ಜನ ಸಮ್ಮೊಂದಿಗಿದ್ದಾರೆ ಎನ್ನುವುದನ್ನು ಖಾತ್ರಿಪಡಿಸಿತು. ವರ್ಣಮಯ ರ್‍ಯಾಲಿಯ ಮುಕ್ತಾಯ ಸಮಾರಂಭಕ್ಕೆ ಎರಡಾಳೆತ್ತರದ ಸುಸಜ್ಜಿತ ವೇದಿಕೆಯು ಶಾಂತಿ ಸಮಾನತೆಗಳನ್ನು ಬಿಂಬಿಸುವ ವರ್ಣಚಿತ್ರಗಳಿಂದ ಇಡೀ ವಾತಾವರಣಕ್ಕೆ ಒಂದು ವಿಶಿಷ್ಟ ಚೌಕವನ್ನು ಸೃಷ್ಟಿಸಿತ್ತು. ಇವೆಲ್ಲಕ್ಕಿಂತ ಹೆಚ್ಚಾಗಿ ಇಡೀ ವ್ಯವಸ್ಥೆಯೇ ಯುವತಿಯರನ್ನು ಶೋಷಿಸಿ ಎರಡನೇ ದರ್ಜೆಯವರನ್ನಾಗಿಸಿರುವಾಗ ತನ್ನ ಆಡಳಿತದಲ್ಲಿ ಸೀಮಿತ ವ್ಯವಸ್ಥೆಯಲ್ಲಿ ಯುವಕ ಯುವತಿ ಇಬ್ಬರನ್ನೂ ಸಮಾನರಾಗಿ ನೋಡಿ, ಅವಕಾಶ ಸೌಲಭ್ಯಗಳನ್ನು ನೀಡಿ ವ್ಯವಸ್ಥೆಗೆ ಮಾದರಿಯಾಗಿದ್ದ ನವಬಂಗಾಳದ ಹರಿಕಾರ ಕಾಂ। ಜ್ಯೋತಿಬಸು ಅವರು ಬಹಿರಂಗ ಅಧಿವೇಶನದಲ್ಲಿ ಮಾತನಾಡಲಿದ್ದುದ್ದು ಯುವತಿಯರಿಗೆ ತಮ್ಮ ಸುಂದರ ನಾಳೆಗಳ ಬಗ್ಗೆ ಒಂದು ಕ್ಷಣವಾದರೂ ಯೋಚಿಸುವಂತೆ ಮಾಡಿತು. ಕಾಂ। ಜ್ಯೋತಿ ಬಸು ಅವರು ವೇದಿಕೆಯೇರುತ್ತಿದ್ದಂತೆ ಮುಗಿಲು ಮುಟ್ಟಿದ ಘೋಷಣೆಗಳು ಜ್ಯೋತಿ ಬಸು ಅವರು ಯುವಜನರಲ್ಲಿ ತುಂಬಿದ ಉತ್ತಮ ಭವಿಷ್ಯದ ಕನಸು ಜೀವ ಪಡೆಯುತ್ತಿದೆ ಎನ್ನುವುದನ್ನು ಸಾಕ್ಷೀಕರಿಸುತ್ತಿತ್ತು.


ಸಂಸತ್ತಿನಲ್ಲಿ ಮಹಿಳಾ ಮಿಸಲಾತಿ ಮಸೂದೆಯನ್ನು ಜಾರಿಗೊಳಿಸುವಲ್ಲಿ ಕಾಂಗ್ರೆಸ್, ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರಗಳು ಯಾಕೆ ಮುಂದೆ ಬರುತ್ತಿಲ್ಲ ಎನ್ನುವುದನ್ನು ಆರ್ಥಿಕ, ರಾಜಕೀಯ ದೃಷ್ಟಿಕೋನದಿಂದ ವಿವರಿಸಿದಾಗ ನೆರೆದಿದ್ದ ಯುವತಿಯರಿಗೆ, ನಮ್ಮ ಶೋಷಣೆ ಅದು ಕೇವಲ ಸಾಮಾಜಿಕ ಕೆಡುಕು ಅಲ್ಲ ಬದಲಾಗಿ ಅದು ಆರ್ಥಿಕ ಮೂಲದಿಂದ ಪ್ರೇರಿತವಾದುದು ಎಂದು ಅರಿವಾಗಿ ನಾವು ನಮ್ಮ ಹಕ್ಕುಗಳನ್ನು ಪಡೆಯಲು ಹೋರಾಟ ನಡೆಸಬೇಕೆಂಬ ದಿಕ್ಕಿನಲ್ಲಿ ಯೋಚಿಸುವಂತಾಯಿತು. ಪಶ್ಚಿಮ ಬಂಗಾಲದಲ್ಲಿ ಸಂಸ್ಥೆಗಳಲ್ಲಿ ಶೇ. 36 ಕ್ಕಿಂತಲೂ ಹೆಚ್ಚು ಮೀಸಲಾತಿಯನ್ನು ನೀಡಲಾಗಿದೆ, ಅಲ್ಲಿ ಮಹಿಳೆಯರು ಸ್ವತಂತ್ರವಾಗಿ ನಮ್ಮ ಅಧಿಕಾರಗಳನ್ನು ಚಲಾಯಿಸಬಲ್ಲರು. ಆದರೆ ಇತರ ರಾಜ್ಯಗಳಲ್ಲಿ ಮೀಸಲಾತಿಯಿಂದ ಮಹಿಳೆ ಅಧಿಕಾರ ಪಡೆದರೂ, ಆಕೆಯ ಪುರುಷ ಸಂಬಂಧಿಗಳೇ ಅಧಿಕಾರ ನಡೆಸುತ್ತಾರೆ. ಯಾಕೆ ಹೀಗೆ? ಎಂಬ ಪ್ರಶ್ನೆಗೆ ಕಾಂ। ಜ್ಯೋತಿಬಸು ಸ್ಪಷ್ಟವಾಗಿ ಹೇಳುತ್ತಾರೆ. "ಆರ್ಥಿಕ ಸ್ವಾವಲಂಬನೆ ಇಲ್ಲದ ಹೊರತು ಮಹಿಳೆ ಸ್ವತಂತ್ರಳಾಗುವುದಿಲ್ಲ" ಬಂಗಾಳದಲ್ಲಿ ಮಹಿಳೆ ಎಲ್ಲಾ ರೀತಿಯ ಆಸ್ತಿಯ, ಆರ್ಥಿಕ ಹಕ್ಕುಗಳನ್ನು ಪಡೆಯುತ್ತಾಳೆ. ತಾವು ಉಳಿದುಕೊಳ್ಳುವ ಮನೆಯೂ ಗಂಡ ಹೆಂಡತಿಯ ಜಂಟಿ ಹೆಸರಲ್ಲಿರುತ್ತದೆ. ಹೀಗಾಗಿ ಅಲ್ಲಿ ಮಹಿಳೆ ಪುರುಷನಷ್ಟೇ ಸಮಾನಳು. ಜಾಗತೀಕರಣ ಅಬ್ಬರದ ಅತಿಯಲ್ಲಿ ಕೊಚ್ಚಿ ಹೋಗುತ್ತಿರುವ ಯುವತಿಯರ ನಾಳೆಗಳ ಬಗ್ಗೆ ಕಾಂ। ಜ್ಯೋತಿ ಬಸು ಅವರು ವ್ಯಕ್ತಪಡಿಸಿದ ಆತಂಕ ಆಕ್ರೋಶ ತೆರೆದಿದ್ದ ಯುವತಿಯರಿಗೆ ನಮ್ಮ ನಾಳೆಗಳು ಹೇಗಿರಬೇಕೆಂಬುವುದರ ಕುರಿತು ಒಂದು ಸ್ಪಷ್ಟ ಚಿಂತನಾಲಹರಿಯನ್ನು ನೀಡಿತು. ಉತ್ತಮ ನಾಳೆಗಳಿಗಾಗಿ, ಆ ನಾಳೆಗಳಲ್ಲಿ ನಾವು ಇರಲಿಕ್ಕಾಗಿ ನಾಳೆಗಳು ನಮ್ಮದೇ ಆಗಲಿಕ್ಕಾಗಿ ಹೋರಾಟವೊಂದೇ ಅಸ್ತ್ರ ಎನ್ನುವುದನ್ನು ಹೇಳುವುದರೊಂದಿಗೆ ಯುವತಿಯರು ಉತ್ತಮ ನಾಳೆಗಳತ್ತ ಹೆಚ್ಚೆ ಇಡಿ ಗೆಲವು ನಮ್ಮದೇ ಎಂದು ಹೇಳುವುದನ್ನು ಮರೆಯಲಿಲ್ಲ. ಹೌದು ಗೆಲವು ನಮ್ಮದೇ ಇಂದಿಗೂ ಎಂದಿಗೂ.. ಎಂದೆಂದಿಗೂ ಚೊತೆಗೆ ಬರುವ ಹೊಸ ನಾಳೆಗಳೂ ನಮ್ಮವೇ.

**ಪ್ರತಿನಿಧಿ ಅಧಿವೇಶನ ಅರ್ಥಪೂರ್ಣ ಚರ್ಚೆ**

ಪ್ರತಿನಿಧಿ ಅಧಿವೇಶನದಲ್ಲಿ ದೇಶದ ಸುಮಾರು 22 ರಾಜ್ಯಗಳಿಂದ ಆಗಮಿಸಿದ 225 ಪ್ರತಿನಿಧಿಗಳೂ ಪಾಲ್ಗೊಂಡಿದ್ದರು.

ಡಿವೈಎಫ್ಐನ ಅಖಿಲ ಭಾರತ ಅಧ್ಯಕ್ಷರಾದ ಕಾಂ। ಎನ್.ಎನ್.ಕೃಷ್ಣದಾಸ್‌ರವರು ಹೆಚ್ಚಿನ ಸಂಖ್ಯೆಯ ಯುವತಿಯರನ್ನು ಡಿ.ವೈ.ಎಫ್.ಐ ಚಳುವಳಿಗೆ ಈವರೆಗೆ ಕರೆತರಲಾಗಿದೆ ಇರಲು ಇದ್ದಂತಹ ಅಡೆತಡೆಗಳು ನಮ್ಮ ವೈಯಕ್ತಿಕ ಹಾಗೂ ಸಂಘಟನಾತ್ಮಕ ದೌರ್ಬಲ್ಯಗಳ ಸ್ವಯಂ ವಿಮರ್ಶೆ ಹಾಗೂ ಈ ಕುರಿತಂತೆ ಮುಂದಿನ ಕಣ್ಣೋಟ ಹಾಗೂ ಯೋಜನೆಗಳಿರುವ ಒಂದು ಅರ್ಥಪೂರ್ಣ ಹಾಗೂ ಆಶಾದಾಯಕ ಕರಡು ವರದಿಯನ್ನು ಮಂಡಿಸಿದರು.

ಸುಮಾರು ಮೂರು ಗಂಟೆಗಳ ಕಾಲ ಮುಂದುವರಿದ ವರದಿಯ ಮೇಲಿನ ಚರ್ಚೆಯಲ್ಲಿ ವಿವಿಧ ರಾಜ್ಯಗಳ ಸುಮಾರು 3 ಪ್ರತಿನಿಧಿಗಳು ಪಾಲ್ಗೊಂಡರು. ಈ ಚರ್ಚೆಯಲ್ಲಿ 11 ಯುವತಿ



ಯರು ತಾವು ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಲ್ಲಿ ಹಾಗೂ ಸಂಘಟನೆಯನ್ನು ಬೆಳೆಸುವಲ್ಲಿ ಅನುಭವಿಸುತ್ತಿರುವಂತಹ ಅನೇಕ ಸಮಸ್ಯೆಗಳನ್ನು ವ್ಯಕ್ತಪಡಿಸಿ ಕೇಂದ್ರ ಕಾರ್ಯಕಾರಿ ಸಮಿತಿಯ ಸಲಹೆಗಳನ್ನು ಕೋರಿದರು. ಇದರ ಜೊತೆಗೆ ಅನೇಕ ಸಂಗಾತಿಗಳು ವರದಿಯಲ್ಲಿ ಕಂಡುಬರುವ ಯುವತಿಯರ ಪ್ರಾತಿನಿಧ್ಯ ಪಾಲ್ಗೊಳ್ಳುವಿಕೆಯಲ್ಲಿನ ಕುಂಠಿತ ಬೆಳವಣಿಗೆ ಇವೆಲ್ಲಕ್ಕೂ ನಮ್ಮ ನಿರ್ಲಕ್ಷವೂ ಸಹ ಕಾರಣ ಎಂಬುವುದನ್ನು ಒತ್ತಿ ಹೇಳುವ ಮೂಲಕ ತಮ್ಮನ್ನು ಸಂಘಟನಾತ್ಮಕವಾಗಿ ಬೆಳೆಸುವಲ್ಲಿ ಸಹಕರಿಸದ ಕುರಿತು ನಮ್ಮ ನೋವು ಆಕ್ರೋಶಗಳನ್ನು ವ್ಯಕ್ತಪಡಿಸಿದ್ದು ವೇದಿಕೆಯೊಂದು ದೊರೆತಾಗ ಚಳುವಳಿಯ ವಾಹಿನಿಯಲ್ಲಿ ನಮ್ಮ ಯುವತಿಯರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಶ್ರುತಪಡಿಸಿತು.

ವರದಿಯ ಮೇಲಿನ ಟೀಕೆ, ವಿಮರ್ಶೆ, ಅಭಿನಂದನೆ ಎಲ್ಲವನ್ನೂ ಸಕಾರಾತ್ಮಕವಾಗಿ ಪರಿಗಣಿಸಿ ಚರ್ಚಿಸಿದ ನಂತರ ಕೇಂದ್ರ ಕಾರ್ಯಕಾರಿ ಸಮಿತಿಯ ಪರವಾಗಿ ಡಿವೈಎಫ್ಐನ ಅಖಿಲ ಭಾರತ ಕಾರ್ಯದರ್ಶಿ ಕಾಂ। ತಪಸ್ ಸಿನ್ಹಾ ಅವರು ಮುಂದಿನದಿನಗಳಲ್ಲಿ ಯುವತಿಯರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹ ನೀಡುವ ಈ ಮೂಲಕ ಡಿವೈಎಫ್ಐಯನ್ನು ರಾಷ್ಟ್ರದಲ್ಲಿ ಬಲಿಷ್ಟವಾಗಿ ಕಟ್ಟುವ ಭರವಸೆಯನ್ನು ನೀಡಿದರು.

**ಡಿವೈಎಫ್ಐ ಅಖಿಲ ಭಾರತ ಸಮನ್ವಯ ಸಮಿತಿ**

ಮುಂಬರುವ ದಿನಗಳಲ್ಲಿ ಡಿವೈಎಫ್ಐ ಒಂದು ಅವಿಭಾಜ್ಯ ಅಂಗವಾಗಿರುವ ಯುವತಿಯರನ್ನು ಕಾರ್ಯಕರ್ತರನ್ನಾಗಿ, ನಾಯಕರನ್ನಾಗಿ ಬೆಳೆಸುವ ಮತ್ತು ಅವರು ಸ್ವಾತಂತ್ರವಾಗಿ ಜವಾಬ್ದಾರಿಗಳನ್ನು ನಿರ್ವಹಿಸಲು ಸಾಧ್ಯವಾಗುವ ನಿಟ್ಟಿನಲ್ಲಿ, ಅಖಿಲ ಭಾರತ ಮಟ್ಟದಲ್ಲಿ ಒಂದು ಸಮನ್ವಯ ಸಮಿತಿಯನ್ನು ರಚಿಸಲಾಯಿತು. ಸಮನ್ವಯ ಸಮಿತಿಯ ಸಂಚಾಲಕರಾಗಿ ಮಿತಾಘೋಷ್ (ಪ.ಬಂಗಾಲ) ಇವರನ್ನು ಆಯ್ಕೆ ಮಾಡಲಾಯಿತು. ದಕ್ಷಿಣ ವಲಯ ಸಂಚಾಲಕರಾಗಿ ಲತಾ (ಕೆರಳ) ಉತ್ತರ ವಲಯ ಸಂಚಾಲಕರಾಗಿ ಮಂಜುರಾಗಿ (ಹರಿಯಾಣ) ಅವರು ಆಯ್ಕೆಯಾದರು.

ಸಮಿತಿ ಸದಸ್ಯರಾಗಿ : ಕರ್ನಾಟಕದಿಂದ ಬಿ.ವಿ. ಸ್ವರೂಪ ಆಯ್ಕೆಯಾದರು.

ಸಮಾವೇಶ ಹಲವು ನಿರ್ಣಯಗಳನ್ನು ಅಂಗೀಕರಿಸಿತು

**ಶ್ರಮಕ್ಕೆ ಮೌಲ್ಯ ನಿಗದಿಯಾದಾಗ... ಶೋಷಣೆಯ ಮತ್ತೊಂದು ಮುಖ**




**ದರ್ಶನ-ಮಹಮ್ಮದ್ ಸಲೀಂ**

ಪುರುಷ ಮತ್ತು ಮಹಿಳಾ ತಾರತಮ್ಯದ ಹಿ… ಪುರುಷ ಪ್ರಧಾನ ವ್ಯವಸ್ಥೆ ಮೌಲ್ಯಗ… ಕಾರಣವಾಗಿರುವಾಗಲೇ ಆ ವ್ಯವಸ್ಥೆ ಹಿಂದಿರು… ಆರ್ಥಿಕ ಅಂಶಗಳೇ ಪ್ರಮುಖ. ಪ್ರತಿಯೊಂ… ಹಂತದಲ್ಲೂ ಕೆಲಸದಲ್ಲೂ ಪುರುಷ ಪ್ರಧಾ… ವಾಗಲು ಅಥವಾ ಕೇಂದ್ರಿತವಾಗಲು ಪ್ರಮು… ಕಾರಣವೆಂದರೆ ಆಕೆಲಸಕ್ಕೆ ಅಥವಾ ಶ್ರಮ… ಆರ್ಥಿಕ ಮೌಲ್ಯ ನಿಗದಿಯಾದುದ್ದು.

ಎಲ್ಲಿಯವರೆಗೆ ರಾಗಿ ಬೀಸುವುದಕ್ಕೆ, … ಹೊಗೆಯುವುದಕ್ಕೆ, ಅಡಿಗೆ ಮಾಡುವುದಕ್ಕೆ ಆರ್… ಮೌಲ್ಯ ನಿಗದಿಯಾಗಿರಲಿಲ್ಲವೋ ಅಲ್ಲಿಯವರೆ… ಆ ಕೆಲಸ ಮಹಿಳೆಯರಿಗೆ ಮಾತ್ರ… ಮೀಸಲಾಗಿತ್ತು. ಆದರೆ ವಿಜ್ಞಾನ ತಂತ್ರಜ್ಞಾ… ಅಭಿವೃದ್ಧಿಯಿಂದ, ರಾಗಿ ಬೀಸುವುದಕ್ಕೆ ಫ್ಲೋ… ಮಿಲ್ ಬಂದ ನಂತರ ಅಡುಗೆ ಮಾಡುವು… ಬಡಿಸುವುದು ಹೋಟೆಲ್ ಉದ್ಯಮವಾ… ನಂತರ, ಬಟ್ಟೆ ಹೊಗೆಯುವುದು ವೃತ್ತಿಯ… ನಂತರ ಅವೆಲ್ಲವು ಪುರುಷ ಕೇಂದ್ರಿತವಾದ… ಏಕೆಂದರೆ ಅದರಿಂದ ಹಣಗಳಿಕೆ ಪ್ರಾರಂ… ವಾಯಿತು. ಹೀಗಾಗಿ ಪುರುಷ ಮತ್ತು ಮಹಿ… ತಾರತಮ್ಯಕ್ಕೆ ಕಾರಣವಾಯಿತು. ವ… ಅಸಮಾನತೆ ತೀವ್ರವಾಯಿತು.

**ಹಿಂದೂ ಹಿಂದುತ್ವ ಎರಡು ವಿಭಿನ್ನ ಆಯಾಮಗಳು**

ಗಂಗಾನದಿಗೂ ಹಿಂದುಗಳಿಗೂ ಸಂಬಂ… ವಿಲ್ಲವೆ? ಹೀಗೆಂದು ಪ್ರಶ್ನಿಸಿದವರು ಸಿಪಿ… ಮುಖಂಡ ಸೀತಾರಾಂ ಯೆಚೂರಿ. ಪ್ರಥ… ಅಖಿಲ ಭಾರತ ಯುವತಿಯರ ಸಮಾವೇಶದ… ಆಹ್ವಾನಿತರಾಗಿ ಅವರು ಮಾತನಾಡುತ್ತಿ… ಹಿಂದೂಗಳ, ಹಿಂದೂ ಭಾವನೆಗಳ ನಂಬಿಕೆಗಳ… ರಕ್ಷಿಸುವ ಗುತ್ತಿಗೆಯನ್ನು ಪಡೆದುಕೊಂಡ… ವರ್ತಿಸುತ್ತಿರುವ ಹಿಂದೂ ಧಾರ್ಮಿಕ ಭಾವನೆಗ… ದಕ್ಕೆ ತರುವ, ಶತಮಾನಗಳಿಂದ ಪವಿ… ಜಲವೆಂದು ಪೂಜಿಸುತ್ತಿರುವ ಗಂಗಾಜಲವನ… ವಿದೇಶಿಯರಿಗೆ ಮಾರಿದರು ಎಂದು ಸೀತಾರಾ… ಪ್ರಶ್ನಿಸಿದರು. ಧಾರ್ಮಿಕ ಡಂಭಾಚಾರವ… ಪ್ರಶ್ನಿಸುವ ಜನರನ್ನು ನಾಸ್ತಿಕರೆಂದೇ ಅಥ… ಕಮ್ಯುನಿಸ್ಟರೆಂದೇ ಕರೆಯುತ್ತಾರೆ. ಆದ… ಕಮ್ಯುನಿಸ್ಟರಿಗೆ ಧರ್ಮದ ಭಾವನೆಗಳು ಗೊ… ಆತ್ಮ ದೇವರ ನಡುವಿನ ಸಂಬಂಧವನ್ನು ನಾ… ಚೆನ್ನಾಗಿ ಬಲ್ಲವು ಸಬಂಧ ಎರಡು ಮನಸು… ನಡುವಿನ ಸಂಬಂಧ ಎಂದು ಅವರು ವಿಶ್ಲೇಷಿಸಿ… ಸಂಘ ಪರಿವಾರ ಪ್ರತಿಪಾದಿಸುತ್ತಿರುವ 'ಹಿಂದು… ಮತ್ತು 'ಹಿಂದು' ಯಾವುದೇ ಸಂಬಂಧ… ಯಾಕೆಂದರೆ ಹಿಂದೂ ಇದೊಂದು ಜೀ… ವಿಧಾನ ಆದರೆ ಇವರ ಹಿಂದುತ್ವ ಅದೊಂ… ಒಡೆದು ಆಳುವ ರಾಜನೀತಿಯಲ್ಲದೆ ಬೇರೇ… ಅಲ್ಲ ಎಂದರು ಕಾಂ. ಸೀತಾರಾಂ.

ವರದಿಗಳು : ರೇಣುಕಾ, ಸ್ವರೂ… ಶಬನಾ, ಸಾವಿತ್ರಿ, ಸುಜ…

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH